ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.



ಭಾರತದ ಭಾವೀ ಅಂಚೆ ಚೀಟಿಗಳು

ಸಂಪುಟ ೨೧ ಸಂಚಿಕೆ ೩

ಕರ್ಮವೀರ

ಸೋಮವಾರ ವೈಶಾಖ ಶು. ೧೦

ತಾರೀಖು ೯—೫—೧೯೪೯

ಮುಖಪತ್ರದಲ್ಲಿ

ಕಾಲಾಣೆಯ ಟಿಕೀಟಿನ ಮೇಲೆ ಅಜಂಟಾ ಗುಹೆಯಲ್ಲಿಯ ಒಂದು ಸ್ತಂಭದ ಮೇಲಿನ ಆನೆಯ ಚಿತ್ರವನ್ನು ಮುದ್ರಿಸಿರುವರು. ಮೋಹೆಂಜೊದಾರೋದ ಉತ್ಖನನದಲ್ಲಿ ಸಿಕ್ಕ ಸಾಣ್ಯದ ಒಂದು ಎತ್ತಿನ ಚಿತ್ರವನ್ನು ಅರ್ಧಾಣೆಯ ಟಿಕೀಟಿನ ಮೇಲೂ ಮುಂಬಯಿ ಸಮೀಪದ ಎಲೆಫಂಟಾ ಗುಹೆಯಲ್ಲಿಯ ಒಂದು ಚಿತ್ರದಲ್ಲಿಯ ತ್ರಿಮೂರ್ತಿಯ ಚಿತ್ರವನ್ನು ಮುಕ್ಕಾಲಾಣೆಯ ಚಿತ್ರದ ಮೇಲೂ ಮುದ್ರಿಸಿರುವರು. ಬೋಧಿಸತ್ವಸಿಂಹನಾದ ಲೋಕೇಶ್ವರನ ಗುರುತನ್ನು ಒಂದಾಣೆಯ ಟಿಕೀಟಿನ ಮೇಲೂ ಕೊಣಾರಕದಲ್ಲಿಯ ಸೂರ್ಯ ನಾರಾಯಣ ಮಂದಿರದ ಕುದುರೆಯ ಚಿತ್ರವನ್ನು ಒಂದೂವರೆ ಆಣೆಯ ಟಿಕೀಟಿನ ಮೇಲೂ ಮುದ್ರಿಸಿರುವರು. ಎರಡಾಣೆಯ ಟಿಕೀಟಿನ ಮೇಲೆ ಮದ್ರಾಸ ಪ್ರಾಂತದ ಚಿತ್ತೂರ ಜಿಲ್ಹೆಯಲ್ಲಿಯ ನಟರಾಜನ ನೃತ್ಯಚಿತ್ರವನ್ನು ಮುದ್ರಿಸಿರುವರು. ಎರಡೂವರೆ ಆಣೆಯ ಟಿಕೀಟಿನ ಮೇಲೆ ಮಧ್ಯ ಭಾರತದ ಸಾಂಚೀ ಎಂಬಲ್ಲಿಯ ಸ್ತಂಭದ ಪೂರ್ವದ್ವಾರದ ಚಿತ್ರವನ್ನು ಮುದ್ರಿಸಿರುವರು. ಬೌದ್ಧರ ಪವಿತ್ರ ಕ್ಷೇತ್ರವೆನಿಸಿದ ಬುದ್ಧಗಯೆಯ ಮಂದಿರದ ದೃಶ್ಯವನ್ನು ಮೂರುವರೆ ಆಣೆಯ ಟಿಕೀಟಿನ ಮೇಲೆ ಮುದ್ರಿಸಿರುವರು. ಓಡಿಸಾ ಪ್ರಾಂತದಲ್ಲಿಯ ಭುವನೇಶ್ವರ ಎಂಬ ಹೆಸರಿನ ಪ್ರಸಿದ್ಧ ಗುಡಿಯ ಚಿತ್ರವನ್ನು ನಾಲ್ಕಾಣೆಯ ಟಿಕೀಟಿನ ಮೇಲೆ ಮುದ್ರಿಸಿರುವರು. ಹನ್ನೆರಡಾಣೆಯ ಟಿಕೀಟಿನ ಮೇಲೆ ಅಮೃತಸರದಲ್ಲಿಯ ಸೀಖರ ಸುಪ್ರಸಿದ್ಧ ಸುವರ್ಣಮಂದಿರದ ಚಿತ್ರವನ್ನೂ ಆರಾಣೆಯ ಟಿಕೀಟಿನ ಮೇಲೆ ವಿಜಾಪುರದ ಗೋಲಗುಮುಟ ಚಿತ್ರವನ್ನೂ ಮುದ್ರಿಸಿರುವರು. ದಿಲ್ಲಿಯ ಕೆಂಪು ಕೋಟೆಯ ಚಿತ್ರವನ್ನು ಎರಡು ರೂಪಾಯಿಯ ಟಿಕೀಟಿನ ಮೇಲೂ ಜಗತ್ತಿನಲ್ಲಿ ೭ ನೆಯ ಆಶ್ಚರ್ಯದ ವಸ್ತುವೆಂದು ಹೆಸರಾದ ತಾಜಮಹಾಲದ ಚಿತ್ರವನ್ನು ಐದುರೂಪಾಯಿ ಟಿಕೀಟಿನ ಮೇಲೂ ಮುದ್ರಿಸಿರುವರು. ಹತ್ತುರೂಪಾಯಿ ಟಿಕೀಟಿನ ಮೇಲೆ ೨೩೮ ಅಡಿ ಎತ್ತರವಿರುವ ದಿಲ್ಲಿಯ ಕುತುಬಮಿನಾರದ ಚಿತ್ರವನ್ನು ಮುದ್ರಿಸಿರುವರು. ಈ ಅಂಚೆ ತಿಕೀಟುಗಳು ಇಷ್ಟರಲ್ಲಿಯೇ ಜಾರಿಯಲ್ಲಿ ಬರುವವು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರ ವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

— ವ್ಯವಸ್ಥಾಪಕ,
" ಕರ್ಮವೀರ " ಹುಬ್ಬಳ್ಳಿ.

ಸಾಮಾಜಿಕ ಸುಧಾರಣೆಯಲ್ಲಿ ಈ ಆತುರರವೇಕೆ ?

ಹಿಂದುಸ್ಥಾನವು ಸ್ವಾತಂತ್ರ್ಯವನ್ನು ಸಂಪಾದಿಸಿದಂದಿನಿಂದ ಅನೇಕ ಮಹತ್ವದ ಸಮಸ್ಯೆಗಳನ್ನೆದುರಿಸಬೇಕಾಗಿದೆ. ಜನತೆಗೆ ಅವಶ್ಯವಾಗಿ ಬೇಕಾಗಿರುವ ಆಹಾರ, ಬಟ್ಟೆ ಆಶ್ರಯಗಳಲ್ಲಿ ರಾಷ್ಟ್ರವನ್ನು ಸ್ವಾವಲಂಬಿಯನ್ನು ಮಾಡಬೇಕಾಗಿದೆ. ರಾಷ್ಟ್ರದಲ್ಲಿರುವ ಪ್ರತಿಗಾಮಿ ಶಕ್ತಿಗಳನ್ನೆಲ್ಲ ಹೊಡೆದು ಹಾಕಿ ಎಲ್ಲೆಡೆ ಶಾಂತಿಯನ್ನು ಪ್ರಸ್ಥಾಪಿಸಬೇಕಾಗಿದೆ. ಇವೆಲ್ಲ ಮಹತ್ವದ ಕೆಲಸಗಳತ್ತ ರಾಷ್ಟ್ರದ ಭವಿತವ್ಯವನ್ನು ಮಾರ್ಪಡಿಸುವವರು ಗಮನಿಸಬೇಕಾಗಿದೆ. ಏತನ್ಮಧ್ಯೆ ಸಾಮಾಜಿಕ ಸುಧಾರಣೆಗಳನ್ನೂ ಮಾಡಬೇಕಾಗಿದೆ. ರಾಷ್ಟ್ರದ ಪ್ರಗತಿಗೆ ಅಡ್ಡಿಯಾಗಿರುವವೆಂದು ತೋರುವ ಸಾಮಾಜಿಕ ಮತ್ತು ಧಾರ್ಮಿಕ ರೂಢಿ ಪರಂಪರೆಗಳನ್ನು ವಿಶೇಷತಃ ಅಂಧ ರೂಢಿ ಸಂಪ್ರದಾಯಗಳನ್ನು ತೆಗೆದು ಹಾಕಿ ಪ್ರಗತಿಪಥದಲ್ಲಿ ರಾಷ್ಟ್ರವನ್ನೊಯ್ಯಬೇಕಾಗಿದೆ. ಆದರೆ ಈ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳನ್ನು ಅಧಿಕಾರಸ್ಥರ ಬಹುಮತದ ಬೆಂಬಲದಿಂದ ಒಮ್ಮೆಲೆ ಜಾರಿಯಲ್ಲಿ ತರುವದಾಗಲಿ, ಕಾಯದೆಯ ಬಲುಮೆಯಿಂದ ಜನತೆಯನ್ನು ಪೀಡಿಸುವದಾಗಲಿ ಸರಿಯಾಗಲಾರದು. ಜನತೆಯ ಮನವೊಲಿಸಿ ಸುಧಾರಣೆಗಳ ಅವಶ್ಯಕತೆಗಳನ್ನು ತಿಳಿಸಿ ಕೊಟ್ಟ ಬಳಿಕವೆ ಆಯಾ ಸುಧಾರಣೆಗಳನ್ನು ಜಾರಿಯಲ್ಲಿ ತರಬೇಕಾದುದು ಕರ್ತವ್ಯವಾಗಿದೆ.

ಆದರೆ ಇತ್ತೀಚೆ ಕೇಂದ್ರ ಶಾಸನಸಭೆಯಲ್ಲಿ ಸ್ವೀಕೃತವಾಗುತಿರುವ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳ ಮಸೂದೆಗಳನ್ನು ನೋಡಿದರೆ ಸರಕಾರದವರು ಈ ಸಂಬಂಧದಲ್ಲಿ ಬಹಳ ಅವಸರ ಮಾಡುತಿರುವರೆಂದು ವಿಷಾದದಿಂದ ಹೇಳಬೇಕಾಗುವದು. ವಿವಾಹದ ವಯಸ್ಸನ್ನು ೧೪ ರಿಂದ ೧೫ಕ್ಕೇರಿಸುವದು, ಹುಡುಗಿಯ ವಯಸ್ಸು ಹದಿನೈದಕ್ಕಿಂತ ಕಡಿಮೆಯಿದೆಯೆಂದು ತಿಳಿದೂ ಅವಳೊಡನೆ ವಿವಾಹ ಮಾಡಿಕೊಂಡ ಹದಿನೆಂಟು ವರುಷಕ್ಕಿಂತ ಹೆಚ್ಚಿನ ಮತ್ತು ಇಪ್ಪತ್ತೊಂದು ವರುಷದೊಳಗಿನ ಹುಡುಗನಿಗೆ ಶಿಕ್ಷೆಯನ್ನು ವಿಧಿಸುವ ಮತ್ತು ಇಂಥವಿವಾಹಕ್ಕೆ ಸಂಬಂಧಿಸಿದವರನ್ನೆಲ್ಲ ಉಗ್ರಶಿಕ್ಷೆಗೆ ಗುರಿಮಾಡುವ ಎರಡು ಮಸೂದೆ ಸರಕಾರದ ಪರವಾಗಿ ಮಂಡಿಸಲ್ಪಡದೆ ಸಾಮಾನ್ಯ ಸದಸ್ಯರೊಬ್ಬರಿಂದ ಮಂಡಿಸಲ್ಪಟ್ಟಿದ್ದವು. ಸಾಮಾನ್ಯವಾಗಿ ಇಂಥ ಮಹತ್ವದ, ಸಾಮಾಜಿಕ ಕ್ರಾಂತಿಯನ್ನು ಮಾಡಲೆಳಸುವ ಮಸೂದೆಗಳನ್ನು ಕೂಲಂಕಷವಾಗಿ ವಿಚಾರ ಮಾಡಿ ಜನಮತವನ್ನು ತೆಗೆದುಕೊಂಡು ಸರಕಾರದವರೆ ಮಂಡಿಸತಕ್ಕದ್ದು ಮತ್ತು ಅದರ ಅವಶ್ಯಕತೆಯ ಬಗ್ಗೆ ಜನರ ಮನವೊಲಿಸಿ ಪಾಸು ಮಾಡಿಸಿಕೊಳ್ಳತಕ್ಕದ್ದು. ಆದರೆ ಮೇಲೆ ಉಲ್ಲೇಖಿಸಿದ ಎರಡು ಮಸೂದೆಗಳು ಹಾಗೆ ಮಂಡಿಸಲ್ಪಟ್ಟಿಲ್ಲ ಮತ್ತು ಅವುಗಳ ಬಗ್ಗೆ ಕೂಲಂಕಷ ಚರ್ಚೆಯೂ ಆಗಿರುವದಿಲ್ಲ. ಅಧಿಕ ರೀತಿಯ ದಿನಗಳೆಂದು ಮೀಸಲಾಗಿದ್ದ ಕೆಲ ದಿನಗಳಲ್ಲಿ ಇವು ಮಂಡಿಸಲ್ಪಟ್ಟು ಸ್ವೀಕೃತವಾದವು. ಪ್ರಸಿದ್ಧ ಸುಧಾರಕರಾದ ಶ್ರೀ ಪಂಜಾಬರಾವ ದೇಶಮುಖರಂಥವರು ಕೂಡ ಈ ಮಸೂದೆಯನ್ನು ವಿರೋಧಿಸಿ ಇತ್ತೀಚಿನ ತಮ್ಮ ಅಮೇರಿಕಾ ಪ್ರವಾಸದ ನಂತರ ಬಾಲ್ಯ ವಿವಾಹಗಳೆ ಯುಕ್ತ ಮತ್ತು ಆವಶ್ಯಕವೆಂಬ ಮತಕ್ಕೆ ತಾವು ಬಂದಿರುವದಾಗಿ ಹೇಳಿದರು.

ಈ ಎರಡೂ ಕಾಯಿದೆಗಳು ಜಾರಿಯಲ್ಲಿ ಬರುವ ಅವಧಿಯನ್ನು ಹೆಚ್ಚಿಸಿರಿ ಎಂದು ಮಾಡಿಕೊಳ್ಳಲಾದ ಮನವಿಯನ್ನು ಅಲಕ್ಷಿಸಿ ಸರಕಾರದವರು ಜುಲೈ ೧೫ ನೇ ತಾರೀಖಿನ ವರೆಗೆ ಅವಧಿಯನ್ನು ಕೊಟ್ಟಿರುತ್ತಾರೆ. ಆದರೆ ಈ ಎರಡೂವರೆ ತಿಂಗಳ ಅವಧಿಯೂ ಸಾಲದೆಂಬುದು ಸ್ಪಷ್ಟವಿದೆ. ಕನಿಷ್ಠ ಆರು ತಿಂಗಳು ಅವಧಿಯನ್ನಾದರೂ ಕೊಡುವದು ಕ್ರಮಪ್ರಾಪ್ತವಾಗಿದೆ. ಶಾರದಾ ಕಾಯಿದೆ ಜಾರಿಯಲ್ಲಿ ಬರುವಾಗ ಆರು ತಿಂಗಳ ಅವಧಿಯನ್ನು ಕೊಟ್ಟದ್ದುಂಟು. ವಿವಿಧ ಅಡಚಣೆಗಳ ಮೂಲಕ, ಗೊತ್ತಾದ ಮದುವೆಗಳನ್ನು ಕೂಡ ಈ ಎರಡು ಎರಡೂವರೆ ತಿಂಗಳ ಅವಧಿಯಲ್ಲಿ ಮಾಡುವದು ಅನೇಕರಿಗೆ ಶಕ್ಯವಾಗದ ಸಂದರ್ಭಗಳೂ ಇರುವವು. ಸುಧಾರಣೆಯ ಶಿಖರವನ್ನೇರಿದ ಇಂಗ್ಲಂಡದಲ್ಲಿ ಕೂಡ ಸಾಮಾಜಿಕ ಕ್ರಾಂತಿಯನ್ನು ಮಾಡುವ ಇಂಥ ಮಸೂದೆಗಳು ಪಾಸಾಗುವದಕ್ಕೆ ಅನೇಕ ವರುಷಗಳು ಹತ್ತುವವು. ಅವಸರದಿಂದ ಒಮ್ಮೆಲೆ ಇಂಥ ಕಾಯಿದೆಗಳನ್ನು ಅವರೆಂದಿಗೂ ಸ್ವೀಕರಿಸುವದಿಲ್ಲ. ಸತ್ತ ಹೆಂಡತಿಯ ತಂಗಿಯನ್ನು ಮದುವೆಯಾಗುವ ಅವಕಾಶ ದೊರೆವ ಮಸೂದೆ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಸ್ವೀಕೃತವಾಗಬೇಕಾದರೆ ಹದಿನಾಲ್ಕು ವರುಷಗಳು ಹಿಡಿದವು. ಸೋಡಚೀಟಿಕೊಟ್ಟ ಹೆಂಡತಿಯ ತಂಗಿಯನ್ನು ಮದುವೆ ಮಾಡಿಕೊಳ್ಳುವ ಅವಕಾಶ ಕೊಡುವ ಇತ್ತೀಚಿನ ಮಸೂದೆಗೆ ಇಂಗ್ಲಿಶ ಧರ್ಮಗುರುಗಳನ್ನೊಳಗೊಂಡು ಅನೇಕರು ವಿರೋಧಿಸಿದ್ದರಿಂದ ಸರಕಾರದವರು ಅದಕ್ಕೆ ಬೆಂಬಲ ಕೊಡದೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು. ಇಂಗ್ಲಂಡದಂಥ ಪ್ರಗತಿಪರ ರಾಷ್ಟ್ರದಲ್ಲಿ ಸಾಮಾಜಿಕ ಸುಧಾರಣೆ ಇಷ್ಟೊಂದು ಎಚ್ಚರಿಕೆಯಿಂದ ನಡೆಯುತಿರುವಾಗ ಧರ್ಮಸಂಸ್ಕೃತಿಗಳ ಆಗರವಾಗಿರುವ ಹಿಂದುಸ್ಥಾನದಲ್ಲಿ ಸಾಮಾಜಿಕಧಾರ್ಮಿಕ ಕ್ರಾಂತಿಕರ ಮಸೂದೆಗಳನ್ನು ಇಷ್ಟೊಂದು ಅವಸರದಿಂದ ಪಾಸುಮಾಡಿಕೊಳ್ಳುತಿರುವದು ನಿಜವಾಗಿ ಘಾತಕವಾಗಿರುವದಲ್ಲದೆ ಜನತೆಯ ಹಕ್ಕುಬಾಧ್ಯತೆಗಳ ಮೇಲೆ ಗದಾಪ್ರಹಾರ ಮಾಡುವಂತಹದಾಗಿದೆ.

ಹಿಂದೂಕಾಯದೆ ಮಸೂದೆಯನ್ನು ಮಂಡಿಸುವಾಗ ಕೂಡ ಸರಕಾರದವರು ಇದೇ ಬಗೆಯ ಅವಸರ ಮಾಡಿದ್ದುಂಟು. ಆದರೆ ಅದಕ್ಕೆ ವಿರೋಧ ಬಹಳ ಬಂದದ್ದರಿಂದ ವಿಚಾರಣೆಯನ್ನು ಮುಂದಿನ ಅಧಿವೇಶನಕ್ಕೆ ಮುಂಬರಿಸಲಾಯಿತು. ಮೊನ್ನೆ ದಿನ ಮದರಾಸಿನಲ್ಲಿ ಹೆಣ್ಣುಮಕ್ಕಳನ್ನುದ್ದೇಶಿಸಿ ಭಾಷಣಮಾಡುತ್ತ ಘಟನಾ ಸಮಿತಿಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಹಿಂದೂಕಾಯದೆ ಮಸೂದೆಯನ್ನು ಸ್ವೀಕರಿಸಲು ಸದ್ಯದ ಶಾಸನಸಭೆಯು ಸಮರ್ಥವಾಗಿಲ್ಲ ಎಂದು ಹೇಳಿದರು. ಸಾಮಾಜಿಕ ಸುಧಾರಣೆಗಳಲ್ಲಿ ಇಷ್ಟೊಂದು ಆತುರತೆಯನ್ನು ತೋರುವದು ಸರಿಯಲ್ಲೆಂದು ಅಭಿಪ್ರಾಯಪಟ್ಟರು. ಈ ಹಿಂದೂಕಾಯದೆ ಮಸೂದೆಯನ್ನು ಬಹುಸಂಖ್ಯ ಜನರು ವಿರೋಧಿಸಿದ್ದರಿಂದ ಮತ್ತು ಇದೇ ಉದ್ದೇಶಕ್ಕಾಗಿ ಪ್ರಸ್ತುತ ಹಿರಿಯೋಳಗವು ಚುನಾಯಿಸಲ್ಪಡದಿದ್ದುದರಿಂದ ಹಾಗು ಶಾಸನಸಭಾ ಸದಸ್ಯರಿಗೆ ಇಂಥ ಮಸೂದೆಯನ್ನು ಸ್ವೀಕರಿಸಲು ರಾಷ್ಟ್ರದ ಅಪ್ಪಣೆ ಸಿಕ್ಕಿಲ್ಲವಾದ್ದರಿಂದ ಹಿರಿಯೋಳಗವು ಇದನ್ನು ಸ್ವೀಕರಿಸಲಾರದೆಂದೂ ರಾಜೇಂದ್ರಬಾಬುಗಳು ಸ್ಪಷ್ಟವಾಗಿ ಹೇಳಿದರು. ರಾಷ್ಟ್ರದಲ್ಲಿಯ ಎಲ್ಲ ಹೆಣ್ಣುಮಕ್ಕಳು ಸಹ ಈ ಮಸೂದೆಗೆ ಮನ್ನಣೆ ಕೊಟ್ಟಿಲ್ಲವೆಂದೂ [illegible] ಅವರು ಹೇಳಿದ್ದುಂಟು. ಇನ್ನಷ್ಟೆ ಈ ಮಸೂದೆಯನ್ನು ಕೇವಲ ಸನಾತನಿಗಳು ಮಾತ್ರ ವಿರೋಧಿಸಿಲ್ಲ. ಸುಧಾರಕರೆಂದು ಕರೆಯಿಸಿಕೊಳ್ಳುವ ಅನೇಕ ಜನರು ಮತ್ತು ಸ್ತ್ರೀಯರು [illegible] ಕೂಡ ವಿರೋಧಿಸಿದ್ದಾರೆ. ಆದರೂ ಸರಕಾರದವರು ಈ ಮಸೂದೆಯನ್ನು [illegible] ಬಹುಸಂಖ್ಯ ಜನರ [illegible] ಇದನ್ನು ಹೇರಲು ಪ್ರಯತ್ನಿಸುತಿರುವರು. ಸಾಮಾಜಿಕ ಸುಧಾರಣೆಗಳನ್ನು ಮಾಡಬಯಸುವವರು ಸ್ವಲ್ಪ ಸಾವಕಾಶವಾಗಿ ತಮ್ಮ ಅಭಿಪ್ರಾಯಕ್ಕೆ ಜನರ ಮನವೊಲಿಸುವ ಧೋರಣವನ್ನು ಅನುಸರಿಸಬೇಕಲ್ಲದೆ ಉತ್ಸಾಹದಿಂದ ಸಮಾಜಕ್ರಾಂತಿಯ ಇಂಥ ಮಸೂದೆಗಳನ್ನು ಹೇರಬಾರದೆಂದು ಈ ಸಕಾಲದಲ್ಲಿಯೆ ಸರಕಾರದವರನ್ನು ಎಚ್ಚರಿಸಿಕೊಳ್ಳಬಯಸುತ್ತೇವೆ.

× × ×

ಇದೇ ಮೇ ಒಂದನೇ ತಾರೀಖಿನಂದ ಬರೋಡೆ ಸಂಸ್ಥಾನವು ಮುಂಬಯಿ ಪ್ರಾಂತದಲ್ಲಿ ವಿಲೀನವಾಯಿತು. ಪ್ರಾಂತದಲ್ಲಿಯ ಸಾಮಾನ್ಯ ಘಟಕವಾಗುವ ವರೆಗೆ ಆಡಳಿತೆಯ ಕಮೀಶನರರಾದ ಶ್ರೀ ದೇಹೆಜಯಾ ಇವರು ಆಡಳಿತೆಯನ್ನು ನಡೆಸುವರು. ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರ ಇವರು ಈ ವಿಲಯನ ಸಮಾರಂಭಕ್ಕೆ ಹೋಗಿದ್ದರು.

ಕೆಲ ಸ್ವಾರ್ಥಸಾಧಕರು ಬರೋಡೆಯ ಈ ವಿಲಯನವನ್ನು ವಿರೋಧಿಸಿ ನ್ಯಾಯಸ್ಥಾನದ ವರೆಗೂ ಹೋದದ್ದುಂಟು. ಈ ಸಮಾರಂಭಕ್ಕಾಗಿ ಕಳಿಸಿದ ಸಂದೇಶದಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಇಂಥ ವಿಲಯನವನ್ನು ತಡೆಯುವವೆಂದರೆ ಸಾಗರದ ತೀರವನ್ನು ಬೊಗಸೆಯಿಂದ ಹೊರಗೆ ಚಾಳಲು ಪ್ರಯತ್ನಿಸಿದ ಹುಚ್ಚನ ಪ್ರಯತ್ನದಂತಿದೆಯೆಂದು ಹೇಳಿದ್ದು ಯಥೋಚಿತವಾಗಿದೆ. ಇನ್ನು ಮುಂದೆಯಾದರೂ ಇಂಥ ಸಂಕುಚಿತ ವ್ಯಕ್ತಿಯುವರು ತಮ್ಮ ಮನೋವೃತ್ತಿಯನ್ನು ಮಾರ್ಪಡಿಸಿಕೊಂಡು ಒಂದೇ ಆಡಳಿತೆಯಲ್ಲಿ ಇರುವುದರಿಂದ ದೊರೆಯತಕ್ಕ ಸೌಲಭ್ಯ ಸೌಕರ್ಯಗಳನ್ನು ಪಡೆದು ಸರ್ವವಿಧ ಪ್ರಗತಿಯನ್ನು ಹೊಂದಬೇಕೆಂದು ಸೂಚಿಸಬಯಸುತ್ತೇವೆ.

× × ×

ಬರೋಡೆಯಂತೆ ಕೊಂಡೂರು ಸಂಸ್ಥಾನವೂ ಮದರಾಸ ಪ್ರಾಂತದಲ್ಲಿ ವಿಲೀನವಾಯಿತು. ಕೊಂಡೂರಿನ ಕೆಲ ಸ್ವಾರ್ಥಸಾಧಕರು ಮತ್ತು ಮಹಾರಾಜರು ಕೊಂಡೂರು ಸಂಸ್ಥಾನದ ವಿಲಯನವನ್ನು ವಿರೋಧಿಸಿದ್ದರು. ಆದರೆ ಅದರ ಆಟವು ನಡೆಯದೆ ಸಂಸ್ಥಾನವೀಗ ವಿಲೀನವಾಯಿತು. ಭೋಪಾಳ ಸಂಸ್ಥಾನದ ಆಡಳಿತೆಯನ್ನು ಜೂನ ಒಂದನೆಯ ತಾರೀಖಿನಿಂದ ತಮ್ಮ ಕಡೆಗೆ ತೆಗೆದುಕೊಳ್ಳಲಾಗುವದೆಂದು ಕೇಂದ್ರ ಸರಕಾರದ ಉಪಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಪ್ರಕಟಣೆಯೊಂದನ್ನು ಹೊರಡಿಸಿರುವರು. ಪಾಕಿಸ್ಥಾನದ ಪ್ರಭಾವಕ್ಕೊಳಗಾದ ಭೋಪಾಳ ಸಂಸ್ಥಾನವು ವಿಲಯನವನ್ನು ವಿರೋಧಿಸಿದ್ದುಂಟು. ಆದರೆ ಅಲ್ಲಿಯ ಜನ [illegible] ಸಂಸ್ಥಾನವಿಲಯನಕ್ಕೆ ಅವರಿಂದು ಒಪ್ಪಿಕೊಳ್ಳಬೇಕಾಯಿತು.

× × ×

ಈ ರೀತಿ ಸಣ್ಣದೊಡ್ಡ ಸಂಸ್ಥಾನಗಳು ವಿಲೀನಗೊಳ್ಳುತ್ತಿರುವಾಗ ಮೈಸೂರು [illegible] ಮೈಸೂರು [illegible] [illegible]

ಪತಿಸೇವೆ ಮತ್ತು ವಿಜ್ಞಾನ

'ಶರೀರಮಾದ್ಯಂ ಖಲುಧರ್ಮ ಸಾಧನಂ' ಎಂಬ ಯಾವ ಹಿರಿಯರು ಹೇಳಿದರು ಗೊತ್ತೆ? ಶಾರೀರಿಕ ಸ್ವರೂಪ ಆ ವ್ಯಕ್ತಿಯ ಆರೋಗ್ಯವನ್ನು ಮನೋಧರ್ಮವನ್ನು ರೂಪಿಸುವ ನೈಸರ್ಗಿಕ ಕಾರಣವೆನಿಸುತ್ತದೆ.

ಅಮೇರಿಕದ ಮೈಲ್ಸ್‌ರೀನ್ ಆಸ್ಪತ್ರೆಯಲ್ಲಿ ಹುಂಜಗಳಿಗೆ Female Sex Harmone ಸ್ತ್ರೀರಸವನ್ನು ಚುಚ್ಚಿದಾಗ ತನ್ನೊಳಕ ಹಂದು ಎಥದ ಕೊಬ್ಬು ಅವುಗಳ ಮುಖ್ಯ ರಕ್ತ ನಾಳಗಳಲ್ಲಿ ತುಂಬಿಕೊಂಡು ಆರೋಗ್ಯವನ್ನು ಕೆಡಿಸುತ್ತದೆ ಎಂಬ ಸಂಗತಿ ತಿಳಿದು ಬಂದಿತು.

ಮೇಲಿನ ಉದಾಹರಣೆಯನ್ನು ಮಾನವ ಕುಲಕ್ಕೆ ಅನ್ವಯಿಸಲಾಯಿತು. ಅದರ ಮೇರೆಗೆ ಡಾ. ಕಾಟ್ಜರೆನ್ನುವಂತೆ ಪುರುಷರಲ್ಲಿ ಸ್ತ್ರೀಪುರುಷ ರಸಗಳೆರಡೂ ಇರುವುದರಿಂದ ಪುರುಷರಸವಲ್ಪಿಕೆ ಕಡಿಮೆಯಾಗಿ ವಯಸ್ಸಾದ ಹಾಗೆ ಸ್ತ್ರೀರಸ ಪ್ರಬಲವಾಗಿ ತನ್ನೊಳಕ ಅವರು ಹೃದಯ, ಮಿದುಳು ಮತ್ತು ರಕ್ತನಾಳಗಳಿಗೆ ಸಂಬಂಧಿಸಿದ ರೋಗಗಳಿಗೆ ತುತ್ತಾಗುತ್ತಾರೆ. ಸ್ತ್ರೀಯರ ಶರೀರದಲ್ಲಿ ಸ್ತ್ರೀರಸವೊಂದೇ ಇದೆ. ಆದರೆ ಅದು ರಕ್ತನಾಳಗಳಲ್ಲಿ ಕೊಬ್ಬನ್ನು ಕೂಡಿಸದಂತೆ ಕಾಮುಕವಾದ ಮತ್ತೇನೋ ಒಂದು ರಸ ವಿಶೇಷವಿದ್ದಂತೆ ತೋರುತ್ತದೆ. ಅದರಿಂದ ಅವರು ಆ ಸಂಬಂಧಿಯಾದ ಕಾಹಿಲೆಗಳಿಗೆ ತುತ್ತಾಗುವುದು ಕಡಿಮೆ. ಈ ಕಾಹಿಲೆಗಳ ದೆಸೆಯಿಂದ ಹೆಂಗಸರಿಗಿಂತ ನಾಲ್ಕು ಪಟ್ಟು ಗಂಡಸರು ಸಾಯುತ್ತಾರೆ. ಈ ವೈಜ್ಞಾನಿಕ ಸತ್ಯವನ್ನು ಹೇಳುವ ವಿಜ್ಞಾನಿಯು ಈ ಕಾರಣದಿಂದ ಹೆಂಡತಿಯರು ಗಂಡಂದಿರ ಮತ್ತು ಗಂಡುಮಕ್ಕಳ ಆರೈಕೆಯನ್ನು ಬಹಳ ಎಚ್ಚರಿಕೆಯಿಂದ ನಡೆಸಿಕೊಂಡು ಹೋಗಬೇಕೆಂದು ಹೇಳಿದ್ದನ್ನು ಪತಿಪ್ರೇಮಿಯಾದ ಪ್ರತಿಯೊಬ್ಬಳೂ ಗಮನಕ್ಕೆ ತಂದುಕೊಳ್ಳತಕ್ಕದ್ದು.

ಹಿಂದಿನ ಆರ್ಯರು ಸತಿಗೆ ಪತಿಸೇವೆಯ ಬಗ್ಗೆ ಇತ್ತ ಹೇಳಿದ್ದರ ವ್ಯಾಖ್ಯಾನವಲ್ಲವೇ ಈ ವಿಜ್ಞಾನದ ಮಾತು? ಕೇವಲ ಅಧಿಕಾರದರ್ಪದಿಂದ ಮತ್ಸರದಿಂದ ಗಂಡಸರ ಸೇವೆ ಹೆಂಗಸರು ಮಾಡಬೇಕೆಂದು ಸನಾತನ ಧರ್ಮ ಹೇಳಿದೆ ಎಂದು ತಿಳಿದುಕೊಂಡ ಇಂದಿನ ಸ್ವಾತಂತ್ರ್ಯಪ್ರಿಯರೆಂದುಕೊಂಬ ಹೆಣ್ಣುಮಕ್ಕಳು ಇತ್ತ ಕಣ್ಣು ತೆರೆದು ನೋಡಬೇಕು. ಸಮಾಜದ ಸ್ತ್ರೀ ಪುರುಷರಿಬ್ಬರಲ್ಲೂ ಚಿರಕಾಲಿಕ ಸುಖ-ಶಾಂತಿ ನೆಲೆಸಬೇಕಾದರೆ ಯಾರು ಯಾರು ಯಾವ ಯಾವ ಕರ್ತವ್ಯವನ್ನು ವಿಶೇಷ ಲಕ್ಷ್ಯವಿತ್ತು ನೆರವೇರಿಸಬೇಕೆಂಬುದನ್ನೇ ನಮ್ಮ ಧರ್ಮಶಾಸ್ತ್ರಗಳಲ್ಲಿ ಹೇಳಿದೆಯೆಂಬುದಕ್ಕೆ ಮೇಲಿನದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕೆ? ಗಂಡ ಮತ್ತು ಮಕ್ಕಳು ಆದಷ್ಟು ಹೆಚ್ಚು ಕಾಲ ಬದುಕಬೇಕೆಂಬುದೇ ಬಾಳಿಕೆಲೆ ಮುಂತಾದ ಪೋಷಣಕಾರ್ಯವನ್ನು ಶಾರೀರಿಕ ಸಹನಾಶಕ್ತಿ ಹೆಚ್ಚಿರುವ ಹೆಂಗಸಿಗೆ ವಹಿಸಿದ್ದು ಎಂಬ ಅಂಶವನ್ನು ತಿಳಿದರೆ ಯಾವ ಪ್ರಾಮಾಣಿಕ ಪತ್ನಿಯೂ ಮನೆಗೆಲಸವನ್ನು ಗೌರವಹೀನವೆನ್ನಲಾರಳು, ಪತಿಶುಶ್ರೂಷೆಯನ್ನು ಪತಿದಾಸ್ಯವೆಂದು ತಿಳಿಯಲಾರಳು. ಯಾವ ಹಳೆಯ ಪುಸ್ತಕದಲ್ಲೂ ದಾಸ್ಯವನ್ನು ಸ್ತ್ರೀಗೆ ವಿಧಿಸಿಲ್ಲ. ಆಚರಣೆಯಲ್ಲಿ ಹಾಗೇನಾದರೂ ಆಗಿದ್ದರೆ ಅದಕ್ಕೆ ಸ್ತ್ರೀ ಪುರುಷರಿಬ್ಬರೂ ಸರಿ ಅರ್ಧ ಹೊಣೆಗಾರರು.

- ಸುಭದ್ರೆ

ಭಕ್ತ ಕುಂಬಾರ

ಗೋರ ಎಂಬ ಸದ್ಭಕ್ತನು ಪಂಢರಾಪುರದ ಬಳಿ ತೇರ್ ಎಂಬ ಗ್ರಾಮದ ನಿವಾಸಿ: ವೃತ್ತಿಯಲ್ಲಿ ಕುಂಬಾರ. ತನ್ನ ಮಡದಿ ಗಂಗೂಬಾಯಿ, ವಿಠ್ಠಲನೆಂಬ ವರ್ಷದ ಕೂಸು— ಇಷ್ಟು ಈತನ ಪುಟ್ಟ ಸಂಸಾರ. ಪಾಂಡುರಂಗನ ಪರಮ ಭಕ್ತನಾದ ಈತನು ಸದಾ ದೈವಚಿಂತನದಲ್ಲಿಯೇ ಕಾಲಕಳೆಯುತ್ತ ಸಂಸಾರ ಚಿಂತೆಯನ್ನು ಎಷ್ಟು ಮಾತ್ರವೂ ಮನಸ್ಸಿಗೆ ಹಚ್ಚಿಕೊಳ್ಳದೆ ನೀರಿನಲ್ಲಿನ ಕಮಲಪತ್ರದಂತಿದ್ದ.

ಒಂದುದಿನ ವಿಠ್ಠಲನ ವರ್ಷದ ಹುಟ್ಟಿದ ಹಬ್ಬ. ಗಂಗೂ ಮಗುವಿಗೆ ಸ್ನಾನ ಮಾಡಿಸಿ ಸಿಂಗರಿಸಿ ಗಂಡನ ಬಳಿಯಲ್ಲಿ ಬಿಟ್ಟು ಮಗುವಿನ ಆರತಿಗೆ ಮುತ್ತೈದೆಯರನ್ನು ಕರೆಯಲು ಹೋದಳು. ಮಣ್ಣು ತುಳಿಯುತ್ತ ಭಗವದ್ಧ್ಯಾನದಲ್ಲಿ ತಲ್ಲೀನನಾಗಿದ್ದ ಗೋರನಿಗೆ ಹೊರಗಣ ಪ್ರಪಂಚದ ಅರಿವಿಲ್ಲದ ಸಮಯದಲ್ಲಿ, ಅವನ ಗೀತ ನರ್ತನಗಳಿಂದ ಆಕರ್ಷಿತವಾದ ಮಗುವು ಮಣ್ಣಿನ ರಾಶಿಯ ಮೇಲೆ ಹೋಗಿ ಗೋರನ ಕಾಲು ತುಳಿತಕ್ಕೆ ಸಿಕ್ಕಿ ನುಚ್ಚು ನೂರಾಯಿತು. ಗಂಗೂ ಹಿಂದಿರುಗಿ ಬಂದು ಅದನ್ನು ನೋಡಿ ಪುತ್ರಶೋಕದಿಂದ ತತ್ತರಿಸಿ ಬೊಬ್ಬೆಯಿಟ್ಟಳು. ಗಂಡ ಹೆಂಡಿರ ಮಧ್ಯೆ ವೈಮನಸ್ಯವುಂಟಾಗಿ ಅಂದಿನಿಂದ ಅವರ ಪರಸ್ಪರ ಸಂಪರ್ಕವು ಸಂಪೂರ್ಣವಾಗಿ ತಪ್ಪಿಹೋಯಿತು. ಅನಂತರ ಗಂಗೂವಿನ ತಂಗಿಯ ಗೂಡ ಗೋರನ ಲಗ್ನವಾಗುವದು.

ಆಣೆಯ ಕಟ್ಟು ಹರಿಯಲು ಅಕ್ಕ ತಂಗಿಯರಿಬ್ಬರೂ ಒಳಸಂಚು ಮಾಡಿದರು; ಗೋರನು ಮಲಗಿ ನಿದ್ರಿಸುತ್ತಿದ್ದಾಗ ಆತನ ಕೈಗಳನ್ನು ಸ್ಪರ್ಶಿಸಿದ್ದರು. ಎಚ್ಚರಗೊಂಡ ಗೋರನು ಕನಲಿ ಕೈ ಕತ್ತರಿಸಿಕೊಂಡ.

ದಿನೇ ದಿನೇ ಗೋರನು ವಿರಾಗಿಯಾಗುತ್ತ ಬಂದ. ವೈರಾಗ್ಯದ ಪರಮಾವಧಿಯಲ್ಲಿ ಪಾಂಡುರಂಗನ ದರ್ಶನ ಪಡೆದ. ಹೋದ ಮಗುವೂ ಕೈಗಳೂ ಮರಳಿದುವು. ಕರ್ಮವು ಜ್ಞಾನದಷ್ಟೇ ಮೋಕ್ಷದಾಯಕ ಹಾಗು ಅನಿವಾರ್ಯವೆಂದು ಬೋಧಿಸಿ ಪಾಂಡುರಂಗನು ಗೋರನನ್ನು ಮತ್ತೆ ಗೃಹಸ್ಥ ಧರ್ಮಕ್ಕೆ ಹಿಂತಿರುಗಿ ಕರ್ಮಪರಿಪೂರ್ಣತೆ ಪಡೆಯಲು ಅಜ್ಞಾಪಿಸಿದ.

ಸಂಪೂರ್ಣ ಜ್ಞಾನಿಯಾದ ಗೋರನು ಮತ್ತೆ ಕರ್ಮಯೋಗವನ್ನು ಪ್ರಾರಂಭಿಸಿದ.

"ಸ್ವರ್ಣಫಿಲ್ಮ್ಸಿ"ನವರ ಈ ನಿರ್ಮಿತಿಯಲ್ಲಿ ಶ್ರೀ ಕು. ರ. ಸೀತಾರಾಮಶಾಸ್ತ್ರಿಗಳು ಗೀತೆಗಾರರು. ಇವರ ಗೀತೆಗಳ ಸಾಹಿತ್ಯ ಇವರಿಗೆ ಮಾತ್ರ ರಸಾವಹ ವ್ಯಾಕರಣಶುದ್ಧ ಎನಿಸಬಹುದು. ಕಥೆ, ಸಂಭಾಷಣೆಗಳ ಕರ್ತರಾದ "ಸುರಭಿ"ಯವರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ, ಕಥಾವಸ್ತು Hackneyed—ಚರ್ವಿತವಾಗಿರುವುದರಿಂದ. ಶ್ರೀ ಪ್ರಭಾಕರರ ಚಿತ್ರಗ್ರಹಣ ಸಾಧಾರಣವಿದ್ದರೂ ಶ್ರೀಗಳಾದ ಎಚ್. ಕ್ಲಾರ್ಕ ಮತ್ತು ಸಿ. ಪಿ. ಕನ್ನಯ್ಯಪ್ಪನವರ ಧ್ವನಿಗ್ರಹಣ ತೃಪ್ತಿಕರವೆಂಬುದು ದುಷ್ಕರ. ಶ್ರೀ ಬೊಮನ್ ಡಿ. ಇರಾನಿಯವರ ನಿರ್ದೇಶನದಲ್ಲಿ ಪಾರಾಗಿ ತಮ್ಮ ಅಭಿನಯ ಶಕ್ತಿಯನ್ನು ಆದಷ್ಟು ಮಾಸದಂತೆ ಇಟ್ಟುಕೊಳ್ಳಲು ಶಕ್ತರಾದ ಗೋರಪಾತ್ರಧಾರಿ ಶ್ರೀ ಹೊನ್ನಪ್ಪ ಭಾಗವತರು ಮತ್ತು ಗಂಗುವಿನ ವೇಷ ಹಾಕಿದ ಶ್ರೀಮತಿ ಲಕ್ಷ್ಮೀಬಾಯಿ ಇವರು ಅಭಿನಂದನೀಯರೇ ಎನ್ನಬೇಕು. ತಮ್ಮ ಹಾಡುಗಳನ್ನು ತಾವು ಮಧುರವಾಗಿ ಹಾಡಿದ್ದರೂ ಒಟ್ಟಿನ ಮೇಲೆ ಸಂಗೀತದ ನಿರ್ದೇಶನವನ್ನು ತಮ್ಮ ಕೈಗೆ ತೆಗೆದುಕೊಂಡ ಶ್ರೀ ಭಾಗವತರು ತಮ್ಮ ಸಂಭಾಷಣೆಯಲ್ಲಿ ಹೇಗೋ ಹಾಗೇ ಸಂಗೀತಸರಣಿಯಲ್ಲೂ ಕನ್ನಡದ ಪೌರಾಣಿಕ ನಾಟಕಗಳ ಕೃತಕ ಮಟ್ಟನ್ನು ತಂದಿರುವುದು ಪ್ರಗತಿಗೆ ಒಪ್ಪವೆನ್ನಲು ಬರದು. ಚಿತ್ರದಲ್ಲಿ ಬರುವ ಹಾಸ್ಯ ಸನ್ನಿವೇಶಗಳು ಅನಗತ್ಯ, ಅತಿಲಂಬ, ಅಪಹಾಸ್ಯಕರ ಎನಿಸುವ ದರ್ಜೆಗೆ ಸೇರಿರುವುದು ಭೂಷಣ ಎನ್ನುವುದು ಕಷ್ಟ. ಕಥಾನಾಯಕನಾದ ಭಕ್ತಾಗ್ರೇಸರ ಗೋರಕುಂಬಾರನು ವಿರಕ್ತನೂ ಅಲ್ಲ, ಅನುರಕ್ತನೂ ಅಲ್ಲ ಎಂಬಂತಿರುವುದು ಮನದ ಮೇಲೆ ಘೋರ ಪರಿಣಾಮವನ್ನುಂಟು ಮಾಡುತ್ತದೆ. ಗೃಹಸ್ಥನಾಗಿದ್ದೂ ಸನ್ಯಾಸಿಯಂತೆ ಬಾಳುವ ಪದ್ಮಪತ್ರಸ್ಥ ಜಲಬಿಂದುವಿನ ಸ್ಥಿತಿ ಹಳೆಯ ಕಾಲದ ಅಂಧಭಕ್ತಿಗೆ ರುಚಿಸತಕ್ಕದ್ದಾದರೂ ಕಥಾನಾಯಿಕೆಯ ಮತ್ತು ಪ್ರತಿನಾಯಕ ಪಟೇಲನ ಬಾಯಿಂದ ಬರುವ ಕೆಲ ವ್ಯಾವಹಾರಿಕವಾದ ಮಾತುಗಳು ಭಜನಪೂಜಾಸಕ್ತರಾಗಿ, ಮನೆಗೆ ಮಾರಿ ಪರರಿಗೆ ಉಪಕಾರಿ ಎನಿಸಿ ಬಾಳಿದ ಕೆಲ ಭಾರತೀಯ ಭಕ್ತರ ಕರ್ತವ್ಯಬಾಹಿರತ್ವವನ್ನು ನ್ಯಾಯ್ಯವಾಗಿ ಹೊರಗೆಡಹಿದ್ದು ಕತೆಗಾರ ಅಪೇಕ್ಷಿಸುವ ಸಹಾನುಭೂತಿ ಗೋರಗತ ಭಕ್ತಿಗೆ ಧೀಮಂತರಿಂದ ಸಿಗದಂತೆ ಮಾಡಿದೆ.

ಕನ್ನಡದ ಚಿತ್ರಗಳು ಹೀಗೆ ಹೆಚ್ಚು ಹೆಚ್ಚಾಗಿ ಹೊರಡುತ್ತಿರುವುದು ಶುಭಲಕ್ಷಣವಾಗಿದೆ; ಆದರೆ ಇಲ್ಲಿ ಕಾಣುವ ನ್ಯೂನತೆಗಳು ಮುಂದಿನ ಚಿತ್ರದಲ್ಲಿ ಬರದಂತೆ ನೋಡಿಕೊಳ್ಳುವುದು ಅತ್ಯವಶ್ಯ.

—'ಕರ್ಮವೀರ'ದ ಪ್ರತಿನಿಧಿಯಿಂದ

ಅಜ್ಞಾನದ ಭೂತಲೀಲೆ!

ಅಜ್ಞಾನವನ್ನು ಕತ್ತಲೆಂದೂ ಕಗ್ಗಾಡೆಂದೂ ಹೆಗ್ಗಪ್ಪೆಂದೂ ಹಿರಿಯರು ಹೇಳುತ್ತಿದ್ದುದು ನಿಮಗೆ ಗೊತ್ತಿರಬಹುದು. ಅಂಥ ಕತ್ತಲನ್ನು ಬಚ್ಚಿಸುವಾಗ ಅದು–ಅಂಗಾಂಗಗಳಿಗೆ ಮೆತ್ತಿಕೊಂಡಂತೆ ತೋರುತ್ತದೆ, ಆಕಾಶ ಕಾಡಿಗೆಯ ಮಳೆ ಸುರಿಸಿದಂತೆ ಕಾಣುತ್ತದೆ; ಅದರಿಂದ ಅಸತ್ಪುರುಷರ ಸೇವೆ ಮಾಡಿದ್ದರ ಫಲವಾಗಿ ಬರುವ ಕುರುಡತನ ಕಣ್ಣಿಗೆ ಉಂಟಾಯಿತು– ಎಂದು ಹೇಳಿದ್ದಾನೆ ಒಬ್ಬ ಕವಿ.

ಅಫ್ರಿಕವನ್ನು Dark Continent ತಮಃಖಂಡ ಎಂದು ಆಂಗ್ಲರು ಕರೆಯುತ್ತಾರೆ. ಅಲ್ಲಿಯ ಜನರಿಗೆ ನಾಗರಿಕತೆಯ ಸೋಂಕೇ ಇಲ್ಲ; ಇನ್ನೂ ಅವರು ಕಾಡಾಡಿಗಳಾಗಿಯೇ ಇದ್ದಾರೆ. ಬ್ರಿಟಿಶರ ಆಳಿಕೆಯಲ್ಲಿ ಸುಮಾರು ೩॥ ಕೋಟಿ ಆಫ್ರಿಕೆಜನರು ಸುಡಾನ್ ಪಶ್ಚಿಮ ಅಫ್ರಿಕ, ಸಿರ್ರಾಲಿಯೋನೆ, ಗಿನಿ, ಸೆನಿಗ್ಯಾಂಬಿಯ, ಬೆನಿನ್, ಅಶಿಕುಯು ಮತ್ತು ಮಸಾಯಿ ಮುಂತಾದ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಜೂಲುಗಳ ಸಮಾಜವೊಂದನ್ನು ಬಿಟ್ಟು ಮಿಕ್ಕ ಬೆಚುವನ್ನರೇ ಮೊದಲಾದ ಪಂಗಡಗಳವರು ಮುಸಲ್ಮಾನರು ಗಂಡು ಹುಡುಗರಿಗೆ ಹೇಗೋ ಹಾಗೆ ತಮ್ಮ ಹೆಣ್ಣು ಹುಡುಗರಿಗೆ ಜನನೇಂದ್ರಿಯಕ್ಕೆ ಧರ್ಮದ ಹೆಸರಿನಲ್ಲಿ ಶಸ್ತ್ರಚಿಕಿತ್ಸೆ ಮಾಡಿಸುವ ರೂಢಿಯನ್ನು ಪರಂಪರಾಗತವಾಗಿ ನಡೆಸುತ್ತಿದ್ದಾರೆಂದು "ನ್ಯೂಸ್ಟೇಟ್ಸ್‌ಮನ್ ಎಂಡ್ ನೇಶನ್" ಪತ್ರಿಕೆಯಲ್ಲಿ ಬರೆದಿದೆ. ಸುಮಾರು ೬ ರಿಂದ ೧೦ ವರ್ಷಗಳೊಳಗಿನ ಹೆಣ್ಣುಮಗಳನ್ನು ಮನೆಯಲ್ಲಿ ಒಂದೆಡೆ ಇಟ್ಟು ಹಿರಿಯ ಹೆಂಗಸರು ಕಲ್ಲಿನ ಅಥವಾ ಕಬ್ಬಿಣದ ಶಸ್ತ್ರಗಳಿಂದ ಯೋನಿಯ ಅಧರಸದೃಶ ಚರ್ಮದ್ವಯವನ್ನು ಕತ್ತರಿಸಿ ಜನನದ್ವಾರವನ್ನು ಹೊಲಿದು ಬಿಡುವರು. ಈ ಚಿತ್ರಹಿಂಸೆಯ ಕಾಲದಲ್ಲಿ ಆ ಮಗು ಕಿರಿಚಿದರೆ ಅದರ ಚೀತ್ಕಾರವನ್ನು ಮುಳುಗಿಸಲು ಜೇಗಟೆ ಮುಂತಾದ ವಾದ್ಯಗಳನ್ನು ಬಾರಿಸುವರು. ಹಾಗೆ "ಸುನ್ನತ್" ಮಾಡಿಕೊಂಡ ಹುಡುಗಿ ಪವಿತ್ರಳೆಂದು ಗ್ರಹಿಸಿ ಅಲ್ಲಿಯ ಹುಡುಗರು ಮದುವೆಯಾಗುವರು. "ಸುನ್ನತ್" ಮಾಡಿಸಿಕೊಂಡಿರದವಳು ಸುನೀತಳಲ್ಲೆಂದು ಅವಳಿಗೆ ವರ ದುರ್ಲಭನಾಗುವನು. ಮದುವೆಯಾದನಂತರ ಹೊಲಿಗೆಯನ್ನು ಕತ್ತರಿಸಿ ಯೋನಿಯನ್ನು ಮುಕ್ತದ್ವಾರವನ್ನಾಗಿ ಮಾಡಲಾಗುವುದು. ಗಂಡನು ಬಹಳಕಾಲ ದೂರದೇಶಕ್ಕೆ ಹೋಗುವ ಸಂದರ್ಭದಲ್ಲಿ ಹೆಂಡತಿಯ ಯೋನಿಯನ್ನು ಹೊಲಿದು ಹೋಗುವುದೂ ಬಂದನಂತರ ಪುನಃ ಬಿಚ್ಚುವುದೂ ವಾಡಿಕೆ. ಈ ರೂಢಿ ಸುಡಾನ್, ಅಬಿಸೀನಿಯ, ಸೋಮಾಲಿಲ್ಯಾಂಡ್, ಅರೇಬಿಯ, ಮಲಯ ಮತ್ತು ಇಂಡೋನೇಶಿಯದ ಕೆಲ ದ್ವೀಪಗಳ ಮುಸಲ್ಮಾನ, [illegible], ಕಾಪ್ಟ್ (ಕ್ರಿಶ್ಚಿಯನ್ನರು) ಧರ್ಮೀಯರಲ್ಲಿ ಬಳಕೆಯಲ್ಲಿದೆ. ಮಿಕ್ಕ ಕ್ರಿಶ್ಚಿಯನ್ನರಲ್ಲಿ ಕಡಿಮೆ; ಇಜಿಪ್ತದಲ್ಲಿ ಈ ರೂಢಿ [illegible] ಹೋಗುತ್ತಿದೆ.

ಮನುಷ್ಯರ ಯಾವುದಾದರೊಂದು ಅಂಗಭಾಗವನ್ನು ದೈವಾರ್ಪಣ ಮಾಡುವ ಪದ್ಧತಿ ನವೀನ ಅಶ್ಮಯುಗದಿಂದಲೂ ಬಳಕೆಯಲ್ಲಿದ್ದದ್ದು. ಇದು ಕಾಮದೇವನಿಗೆ ಕೊಡುವ ಒಂದು ಮುಡಿಪೆಂದು ತಿಳಿವಳಿಕೆ. ಅಲ್ಲದೆ, ಹೆಂಗಸರಲ್ಲಾದರೆ ಇದು ಅವರ ಪಾತಿವ್ರತ್ಯಕ್ಕೆ ಒಂದು ಪ್ರತ್ಯಕ್ಷ ಪ್ರಮಾಣವೆನಿಸುತ್ತದೆ. ಪೂರ್ವಕಾಲದ ರೋಮನ್ ರಣಧೀರರು ದಿಗ್ವಿಜಯಾದಿಗಳಿಗೆ ಹೋಗುವಾಗ ತಮ್ಮ ಸ್ತ್ರೀಯರ ಸೊಂಟಕ್ಕೆ ಕಬ್ಬಿಣದ ಸರಪಳಿ ಕಟ್ಟಿ ಮತ್ತೊಂದು ಸರಪಳಿಯನ್ನು ಕೌಪೀನದಂತೆ ಜೋಡಿಸಿ ಯೋನಿದ್ವಾರಕ್ಕೆ ಬೀಗ ಹಾಕಿ ಹೊರಟು ಹೋಗುತ್ತಿದ್ದರಂತೆ. ಅದು ಅನಾಗರಿಕವಾದರೂ ಆಫ್ರಿಕನ್ನರ ರೂಢಿಯಷ್ಟು ಕ್ರೂರವೂ ಹಿಂಸಾತ್ಮಕವೂ ಎನಿಸುವುದಿಲ್ಲ. ಸಂಭೋಗಕಾಲದಲ್ಲೂ ಪ್ರಸವಕಾಲದಲ್ಲೂ ಈ ಛಿನ್ನ ಯೋನಿಯ ಸ್ತ್ರೀಯರಿಗೆ ಮರಣಾಂತಿಕ ವೇದನೆಯಾಗುವುದು. ಅದರಿಂದ ಅವರು ಪರಪುರುಷರ ಪ್ರಲೋಭನಕ್ಕೆ ಬಲಿಯಾಗದಿರುವರೆಂಬ ಆಫ್ರಿಕನ್ ನಂಬಿಕೆಯೊತ್ತಟ್ಟಿಗಿರಲಿ, ಸ್ವಪುರುಷಸಂಭೋಗಕ್ಕೆ ಕೂಡ ಸದಾ ಅಂಜುವುದು ಸ್ವಾಭಾವಿಕವಾಗಿಹೋಗಿದೆ. ಆದರೆ ನಿರ್ವಾಹವಿಲ್ಲದೆ, ಧರ್ಮಕ್ಕೆ [illegible] ಸಂತಾನಮೋಹಾದಿಗಳಿಂದ ಅವರು ಗಂಡನ ಸಂಭೋಗಕ್ಕೆ ಪಾತ್ರರಾಗುವರು. ಇದರಿಂದ ಅವರಿಗೆ ಸಂಭೋಗವೆಂದರೆ ಒಂದು ಉಗ್ರ ಶಿಕ್ಷೆಯೆಂಬ ಜ್ಞಾನವಲ್ಲದೆ ಅದರಿಂದ ಆನಂದವುಂಟೆಂಬುದು ಯಾವ ಕಾಲಕ್ಕೂ ತಿಳಿಯುವಂತಿಲ್ಲ. ಗಂಡಂದಿರು (ಯಾವಾಗಲೂ ಸಂಭೋಗಕ್ಕೆ ಸ್ವಲ್ಪವಾದರೂ ಅಡ್ಡಿ ಮಾಡುವ) ತಮ್ಮ ಹೆಂಡಂದಿರಲ್ಲಿ ಕ್ರಮೇಣ ಒಂದು ಬಗೆಯ ಮತ್ಸರ, ದ್ವೇಷ, ತಿರಸ್ಕಾರ ಭಾವನೆಯನ್ನು ತಾಳಿ, ಸಂಭೋಗವನ್ನು ಒಂದು ಪೈಶಾಚ ಆನಂದವನ್ನಾಗಿಯೂ ಪ್ರತೀಕಾರ ಕಾರ್ಯವನ್ನಾಗಿಯೂ ತಿಳಿಯುವಂತಾಗಿದೆ.

ಮೇಲೆ ಹೇಳಿದ ಪತ್ರಿಕೆಯ ವಿಮರ್ಶಕರು ಆಫ್ರಿಕನ್ ಸ್ತ್ರೀಯರನ್ನು ಅಂಥ ಚಿತ್ರಹಿಂಸೆಯಿಂದ ಪಾರು ಮಾಡಲು ಸರಕಾರಗಳೂ ವಿದ್ಯಾವಂತರೂ ಧರ್ಮಗುರುಗಳೂ ಪ್ರಯತ್ನಿಸಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಅತ್ಯಂತ ಅಸಹ್ಯವೆನಿಸುವಂತಿದ್ದರೂ ಈ ಸುದ್ದಿಯನ್ನು ಕೊಡಲು ಕಾರಣವೆಂದರೆ ಹಿಂದುಸ್ತಾನದ ಮುಸಲ್ಮಾನರಲ್ಲಿ ಇಂಥ ಪೈಶಾಚ ಆಚಾರ ಇಲ್ಲದಿರುವುದರಿಂದ ಆಫ್ರಿಕದ ಸ್ವಜಾತೀಯರಿಗೆ ಇಲ್ಲಿಯ ಮುಸಲ್ಮಾನರು ಸದ್ಬೋಧ ಮಾಡಲಿ ಎಂಬುದೇ ಆಗಿದೆ. ಈ ಸೂಚನೆಯನ್ನು ಕೂಡ ಉಕ್ತಪತ್ರಿಕೆಯೇ ಮಾಡಿದೆ.

--ಕರುಣಚಂದ್ರ

ಮೂಡಬಿದ್ರಿಯ ಮಾರಿಯಮ್ಮ ಗುಡಿಯಲ್ಲಿ ಬಲಿಕೊಡುವ ಪದ್ಧತಿಯನ್ನು ೧೫-೪-೪೮ ರಿಂದ ನಿಲ್ಲಿಸಲಾಗಿದೆ. ಈ ವರೆಗೆ ಇಲ್ಲಿ ಅಸಂಖ್ಯಾತ ಕೋಳಿಗಳ ವಧೆಯಾಗುತ್ತಿತ್ತು.

ಚಿಕ್ಕಕತೆ

ಕಲೋಪಾಸಕ

ಅನುವಾದಕ— ಎನ್. ಎಸ್. ಗದಗಕರ, ಬಿ ಎ., ಕರ್ನಾಟಕ ಹೈಸ್ಕೂಲ ಧಾರವಾಡ

ಕ್ರಿಯಾಶಕ್ತಿ ಜಾಗ್ರತವಿರುವಾಗ ಅದನ್ನು ಸಾಕ್ಷಾತ್ಕರಂಗಕ್ಕಿಳಿಸಲು ಮಾನವನು ಬೇಕಾದದ್ದನ್ನು ಮಾಡುವನೆಂದು ಬಲ್ಲವರು ಹೇಳುವರು. ಒಮ್ಮೆ ಮನಸ್ಸಿನ ಸಂಕಲ್ಪಗಳು ಈಡೇರಿಡುವೆಂದರೆ ತನ್ನ ಕಲಾಕೃತಿಗಳನ್ನು ಅವನು ವಿರೂಪಗೊಳಿಸಲು ಕೂಡ ಹಿಂಜರಿಯುವದಿಲ್ಲ. ಈ ಸಂಗತಿಯ ಬಗೆಗೆ ನನಗೆ ಬಹು ಕಾಲ ಅಷ್ಟು ಮನವರಿಕೆ ಆಗಿದ್ದಿಲ್ಲ. ಈಗ ನಾನು ಹೇಳುವ ಕತೆ ಈ ಮಾತಿಗೆ ಉತ್ತಮ ದೃಷ್ಟಾಂತ.

ಚಿಕ್ಕ ವಯಸ್ಸಿನಲ್ಲಿ ಶಾಲೆಗೆ ಹೋಗುವಾಗಿನಿಂದಲೂ ನನಗೆ ಜಯಂತನ ಪರಿಚಯ. ನಾವಿಬ್ಬರೂ ಒಂದೇ ಕಾಲೇಜಿಗೆ ಹೋದೆವು. ನಾಲ್ಕಾರು ತಿಂಗಳುಗಳಲ್ಲಿಯೇ ನಮ್ಮೀರ್ವರ ಪರಿಚಯ ಗಾಢವಾಯಿತು. ಹೀಗೆ ಗೆಳೆತನವು ಬೆಳೆದುದಕ್ಕೆ ನನಗೆ ಕಾರಣ ತಿಳಿಯಲಿಲ್ಲ. ಏಕೆಂದರೆ ಇಬ್ಬರಿಗೂ ಎಷ್ಟೋ ವಿಷಯಗಳಲ್ಲಿ ಆಸ್ಥೆ ಇದ್ದರೂ ಜೀವನದ ಧ್ಯೇಯಧೋರಣೆಗಳಲ್ಲಿ ವಿಶೇಷ ವ್ಯತ್ಯಾಸವಿದ್ದಿತು.

ಎಂದಿಲ್ಲೊಂದು ದಿನ ಜಯಂತನ ಬುದ್ಧಿಗೆ ಚಾಲನೆ ದೊರೆತೀತೆಂದು ನನಗೆ ಅಚಲವಾದ ಶ್ರದ್ಧೆ ಇದ್ದಿತು. ಅವನು ಬರೆಹಗಾರ. ಅವನ ಸಾಹಿತ್ಯ ಪರಿಶೀಲಿಸುವ ಸೌಭಾಗ್ಯ ನನಗೆ ಆಗಾಗ ಒದಗುತ್ತಿದ್ದಿತು. ಇದರಲ್ಲಿ ಮುಕ್ತ ಛಂದದ ಕವನಗಳೇ ಹೆಚ್ಚಾಗಿರುತ್ತಿದ್ದವು. ಆದರೂ ಅವುಗಳು ಒಂದು ದೃಷ್ಟಿಯಿಂದ ಅಂದವಾದುವೆಂದೇ ಹೇಳಬೇಕು.

ಕಲ್ಕತ್ತೆಯಿಂದ ವರ್ಗವಾಗಿ ದಿಲ್ಲಿಗೆ ಹೋದಂದಿನಿಂದ ನನಗೆ ಜಯಂತನ ಸಂಪರ್ಕವೇ ತಪ್ಪಿತೆನ್ನಬಹುದು. ಯುದ್ಧ ಪ್ರಾರಂಭವಾದುದರಿಂದ ನನ್ನ ಗೆಳೆಯನನ್ನು ಮೇಲಿಂದ ಮೇಲೆ ಸಂದರ್ಶಿಸುವ ಪ್ರಸಂಗವೇ ಬರುತ್ತಿರಲಿಲ್ಲ. ಯುದ್ಧವು ನಿಂತೊಡನೆ ನಾನು ಮರಳಿ ಕಲ್ಕತ್ತೆಗೆ ಬಂದೆ. ಎರಡು ಮೂರು ದಿನಗಳೊಳಗಾಗಿ ಜಯಂತನನ್ನು ಕಾಣುವದೆಂದು ನಿರ್ಧರಿಸಿದೆ. ಅವರ ಮನೆಗೆ ಹೋಗಿ ನೋಡಿದಾಗ ಅಪರಿಚಿತರಿದ್ದುದರಿಂದ ಆಶ್ಚರ್ಯವಾಯಿತು. ಕೊನೆಗೆ ಆ ಮನೆಯನ್ನೇ ಮಾರಿರುವರೆಂದು ತಿಳಿಯಿತು. ಆ ಮನೆಯ ಜನರ ಔದಾರ್ಯದ ಮೂಲಕ ನನಗೆ ಜಯಂತನ ವಿಳಾಸ ಸಿಕ್ಕಿತು. ಅದೊಂದು ಆಧುನಿಕ ರೀತಿಯಿಂದ ಸುಸಜ್ಜಿತವಾದ ಕಟ್ಟಡ. ವಿದ್ಯುತ್ತಿನ ಗಂಟೆಯನ್ನು ಬಾರಿಸಿದಾಕ್ಷಣ ಜಯಂತನು ಹೊರಗೆ ಬಂದನು.

ಮೊಗಸಾಲೆಯಲ್ಲಿ ಕಾಲಿಟ್ಟೆವು. ಖುರ್ಚಿ ಮೇಜುಗಳ ಆಡಂಬರ ಅಷ್ಟೇನು ಕಾಣಲಿಲ್ಲ. ಜಯಂತನ ತಂದೆಯ ಮರಣಾನಂತರದಲ್ಲಿ ಅತೀವ ಮಾರ್ಪಾಟಾಗಿದ್ದಿತು. ಆರ್ಥಿಕ ತೊಂದರೆ ದೂರವಾಗಿರಲಿಲ್ಲವೆಂದು ಒಡೆದು ಕಾಣುತ್ತಿತು. ಜಯಂತನ ತಂದೆ ಪ್ರಸಿದ್ಧ ವಕೀಲರಾಗಿ ಹೇರಳ ಹಣ ಸಂಪಾದಿಸಿದ್ದರು. ಅನವಶ್ಯಕ ವೆಚ್ಚ ಮಾಡುವ ಚಟವೂ ಅವರಿಗಿದ್ದಿತು. ಅಂತೇ ಸಾಯುವ ಕಾಲದಲ್ಲಿ ಮಗನಿಗಾಗಿ ವಿಶೇಷ ಆಸ್ತಿ ಮಾಡಿರಲಿಲ್ಲ. ಮನೆ ನಡೆಸಿಕೊಂಡು ಹೋಗುವ ಹೊಣೆಯನ್ನು ಜಯಂತನ ಹೆಂಡತಿಯೇ ವಹಿಸಿಕೊಂಡು ನೌಕರಿ ಹುಡುಕಬೇಕೆಂದು ಗಂಡನಿಗೆ ಹೇಳುತ್ತಿದ್ದಳು.

ಜಯಂತನಿಗೆ ಬ್ಯಾಂಕಿನಲ್ಲಿ ಕೆಲಸ ದೊರೆಯಿತು. ಆದರೆ ಪದವಿಯ ಮಾನದಿಂದ ಅವನಿಗೆ ಕೈತುಂಬ ಹಣ ದೊರೆಯಲಿಲ್ಲ. ಕೆಲಸವು ಮಾತ್ರ ಅವನಿಗೆ ಒಗ್ಗುವಂತಹದಿದ್ದಿತು. ಏನೇ ಆಗಲಿ ಅಷ್ಟು ಹಣವಾದರೂ ಮನೆತನದ ವೆಚ್ಚಕ್ಕೆ ಸಹಾಯಕವಾಯಿತು.

ಆಗಾಗ್ಗೆ ಕುಮುದ ತಯಾರಿಸಿದ ರುಚಿಕಟ್ಟಾದ ಉಪಹಾರ ತೆಗೆದುಕೊಳ್ಳುವಾಗ ನಾವೀರ್ವರೂ ಹರಟೆ ಹೊಡೆಯುತಿದ್ದೆವು. ಆಕೆ ಆದರ್ಶ ಗೃಹಿಣಿಯೆಂದು ನನಗೆ ಮನದಟ್ಟಾಯಿತು.

ಅನೇಕ ಸಲ ಜಯಂತ ಕುಮುದೆಯರನ್ನು ನಾನು ಕಂಡದ್ದುಂಟು. ನಮ್ಮ ಪರಿಚಯವು ದಿನೇ ದಿನೇ ಬೆಳೆಯಿತು. ನನಗೂ ಜಯಂತನಿಗೂ ಎಷ್ಟೊ ವಿಷಯಗಳಲ್ಲಿ ವಾದವಿವಾದಗಳೇಳುತ್ತಿದ್ದರೂ ಜೀವನದ ಧ್ಯೇಯ ಧೋರಣೆಗಳಲ್ಲಿ ಒನ್ನುತವಿದೆ ಎಂದು ಕುಮುದ ಕಂಡುಕೊಂಡಿದ್ದಳು. ಒಮ್ಮೊಮ್ಮೆ ಜಯಂತನು ಅತಿ ಹಟಮಾರಿಯಾಗಿ ದುಂಡುಗಾರನಾಗಿ ಬಿಡುತ್ತಿದ್ದ. ಕುಮುದ ಇಲ್ಲದಿದ್ದರೆ ಅವನ ಗತಿ ಏನಾಗುತ್ತಿತ್ತೊ ದೇವರೇ ಬಲ್ಲ.

ಒಂದು ದಿನ ಮುಂಜಾನೆ ಮನೆಗೆ ಹೋದಾಗ ಕುಮುದ ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದಳು. 'ನಿಮ್ಮ ಗೆಳೆಯನಿಗೆ ಹುಚ್ಚು ಹಿಡಿದಿದೆ' ಎಂದಳು. ಅಲ್ಲಿಯೇ ಇದ್ದ ಜಯಂತನು ನಾಚಿಕೆಯಿಂದ ಮುಖ ತಗ್ಗಿಸಿದನು. 'ತನಗೆ ಚಿತ್ರಕಲೆ ಗೊತ್ತಿದೆಯಂತೆ; ಅವನ್ನಿಷ್ಟು ನೋಡಿರಿ' ಅಂದಳು.

ಜಯಂತನು ವಿರೋಧಿಸಿದರೂ ಕೇಳದೆ ಕುಮುದ ನನ್ನನ್ನು ಅಟ್ಟಕ್ಕೆ ಕರೆದೊಯ್ದಳು. ನನಗೆ ಉಸುರುಗಟ್ಟಿದಂತಾಗಿತ್ತು ನಾನು ನೋಡಿದ ಚಿತ್ರಗಳಲ್ಲಿ ಅದು ಅಚ್ಚರಿ ಹುಟ್ಟಿಸುವಂತಹದಿದ್ದಿತು. ವಿಷಯ ನಿಸರ್ಗಸೌಂದರ್ಯ, ಪರಂಪರೆಗೆ ತೀರ ಭಿನ್ನವಾದ ಸರಣಿಯಲ್ಲಿದ್ದಿತು ಆ ಕಲೆ! ಕಲೋಪಾಸಕನೆನಿಸಿಕೊಳ್ಳಬಹುದಾದ ಅವನು ಪ್ರಮಾಣ ಮೀರಿ ವೈಯಕ್ತಿಕ ಭಾವನೆಗಳನ್ನಲ್ಲಿ ಅರಳಿಸಿದ್ದಳು.

ವ್ಯಗ್ರಚಿತ್ತದಿಂದ ಮನೆ ಮುಟ್ಟಿದೆ. ಕುಮುದಳ ನಡತೆಯಿಂದ ಜಯಂತನಿಗೆ ಖೇದವಾಗಿರಬೇಕೆಂದು ತರ್ಕ ಕಟ್ಟಿದೆ. ಆ ರೀತಿಯ ಆಕೆಯ ಆಚರಣೆಯಿಂದ ಜಯಂತನ ತಲೆ ತಿರುಗಿದಂತೆನಿಸಿದ್ದಿತು. ನನಗೂ ಅವನಿಗಾಗಿ ಮರುಕ ತಲೆದೋರಿತು.

ದಿನ ಕಳೆದುವು. ಒಮ್ಮೆ ಮುಂಜಾನೆ ನಾನು ಚಹ ಕುಡಿಯುತ್ತಿದ್ದಾಗ ಆಳು ಮನುಷ್ಯನೊಬ್ಬನು ಓಲೆ ತಂದನು. ಕುಮುದಳಿಂದ ಬಂದದ್ದದು. ತನ್ನನ್ನು ಕೂಡಲೇ ಕಾಣಬೇಕೆಂದು ವಿಜ್ಞಾಪಿಸಿಕೊಂಡಿದ್ದಳು. ಕಣ್ಣೀರು ಧಾರೆಯಿಂದಲೇ ನನ್ನನ್ನು ಸ್ವಾಗತಿಸಿದಳು. ಏನೋ ಅನರ್ಥ ಸಂಭವಿಸಿರಬೇಕೆಂದೆನಿಸಿತು. ನಿಜ. ಜಯಂತನು ಎಲ್ಲಿಯೋ ಹೋಗಿದ್ದನು. ಸ್ವತಂತ್ರವಾಗಿದ್ದುಕೊಂಡು ಕಲೆಗಾಗಿಯೇ ನನ್ನ ಜೀವನವನ್ನು ಧಾರೆಯೆರೆಯಬೇಕೆಂಬ ಸಂಕಲ್ಪ ಬರೆದಿಟ್ಟು ಹೋಗಿದ್ದನು. ಏನಾದರೂ ನಿವ್ವೀರ್ವರಲ್ಲಿ ಜಗಳವಾಗಿತ್ತೇ? ಎಂದು ಕೇಳಿದೆ. ಅವನ ಚಿತ್ರಕ್ಕೆ ಮಾಡಿದ ಅವಮಾನದ ಹೊರತು ಏನೂ ಆಗಿರಲಿಲ್ಲವೆಂದು ಆಕೆ ಉತ್ತರಿಸಿದಳು.

ಒಂದು ತಿಂಗಳಾಯಿತು. ಜಯಂತನಿಂದ ಕುಮುದೆಗೆ ಏನೂ ಸುದ್ದಿ ಇಲ್ಲ. ಚಿಂತೆಯಿಂದ ಆಕೆ ಕಂದಿ ಕುಂದಿ ಬಲಗುಂದಿದವಳಾಗಿದ್ದಳು. ಹೀಗೆ ಚಿಂತಿಸುವದು ನಿರರ್ಥಕ ಎಂದು ನಾನು ತಿಳಿಸಿ ಹೇಳಿದೆ. ಹೇಗಾದರೂ ಅವನು ದುಡುಕಬಹುದೆಂದು ನಾನು ಅಲ್ಲಿ ಇಲ್ಲಿ ವಿಚಾರಿಸಿದೆ. ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದು ಮಾತ್ರ ತಿಳಿಯಿತು. ಕುಮುದಳನ್ನು ಬಿಡಲು ಜಯಂತನ ಇಚ್ಛೆ ಇದ್ದಂತೆ ತೋರಲಿಲ್ಲ.

ಅಫೀಸಿನಲ್ಲಿ ಚಹಕುಡಿಯುವಾಗ ವಿದ್ಯುತ್ತಿನ ಗಂಟೆ ಬಾರಿಸಿತು. ಕೇಳಿದೆ. ಮನೆಗೆ ಹೋಗುವಾಗ ಬಂದು ಹೋಗಬೇಕೆಂದು ಕುಮುದ ಕೇಳಿಕೊಂಡಿದ್ದಳು. ತನ್ನ ಗಂಡನಿಂದ ಓಲೆ ಬಂದಿತ್ತಂತೆ. ನಾನು ಹೋದೆ. ಕುಮುದ ಓಲೆ ತೋರಿಸಿದಳು. ದಕ್ಷಿಣ ಭಾರತದಲ್ಲಿ ತಾನು ಇರುವೆನೆಂದು ಅದರಲ್ಲಿತ್ತು. ಕಲಾವಿದನಾಗಬೇಕೆಂಬ ಅವನ ಹಿರಿದಾದ ಆಕಾಂಕ್ಷೆಯಂತೆ! ಆ ಒಲವು ತನಗಿದೆ. ಯಶಸ್ಸೂ ದೊರಕೀತೆಂಬ ವಿಶ್ವಾಸವಿದೆಯಂತೆ! ಕೊನೆಯ ಭಾಗವಂತೂ ಗಂಡಹೆಂಡಿರ ಪ್ರೇಮಕ್ಕಾಗಿ ಮುಡಿಪಾಗಿತ್ತು. ಆದರೂ ಮರಳಿ ಬರುವನೆಂಬ ಆಶ್ವಾಸನವೇನೂ ಕಾಣಲಿಲ್ಲ.

ಅವನು ಎಲ್ಲಿರುವನೆಂದು ಹುಡುಕಲಿಕ್ಕೆ ಸಾಧ್ಯವಿದೆಯೇ ಎಂದು ಅನುಮಾನಿಸುತ್ತ ನನಗೆ ಕುಮುದ ಕೇಳಿದಳು. ಓಲೆ ಪರೀಕ್ಷಿಸಿದೆ. ಅಂಚೆ ವಿಳಾಸದ ಮೇಲಿನ ಮುದ್ರೆ ಅಸ್ಪಷ್ಟವಾಗಿದ್ದಿತು. ಆದರೂ ಮಂಗಳೂರು ಎಂದು ತಿಳಿಯಿತು. ಇದಕ್ಕೂ ಹೆಚ್ಚಿಗೆ ಆಧಾರ ಏನೂ ದೊರೆಯದಂತಿತ್ತು. ಮಂಗಳೂರಿಗೆ ಹೊರಡಲು ಸಿದ್ಧನಿರುವೆನೆಂದು ಹೇಳಿದೆ. ತಾನೂ ನನ್ನ ಸಂಗಡ ಬರುವೆನೆಂದು ಕುಮುದ ಆಗ್ರಹಪಡಿಸಿದಳು. ಆದರೆ ಬರುವದರಿಂದ ಉಪಯೋಗವಿಲ್ಲೆಂದು ತಿಳಿಸಿ ಹೇಳಿದೆ.

ದೇಹಿಗೆಹಾದುದರಿಂದ ಮಂಗಳೂರಿನ ಪ್ರವಾಸ ಅಷ್ಟೊಂದು ಸುಖಕಾರಿಯಾಗಲಿಲ್ಲ. ಆದರೆ ಸುತ್ತಲಿನ ನಿಸರ್ಗ ಸೌಂದರ್ಯವು ಈ ಬೇಜಾರವನ್ನು ಮಾಯವಾಗಿಸಿತು.

ಮಂಗಳೂರಿನ ಪೋಸ್ಟಮಾಸ್ತರರ ಹತ್ತಿರ ಜಯಂತನ ವಿಳಾಸವಿಚಾರಿಸಲು ಮೊದಲು ನಾನು ಅಲ್ಲಿಗೆ ಹೋದೆ. ಅವನು ನನ್ನನ್ನು ದುರುದುರು ನೋಡಿದ. ನನ್ನ ಉದ್ದೇಶ ಸ್ಪಷ್ಟ ಮಾಡಿದೊಡನೆ ಸಮುದ್ರ ತೀರದ ಹಳ್ಳಿಯೊಂದರಲ್ಲಿ ಇರುವನೆಂದು ಹೇಳಿದ. ಆ ಊರಿಗೆ ಮುಟ್ಟಬೇಕಾದರೆ ಹನ್ನೆರಡು ಮೈಲು ಚಕ್ಕಡಿಗಾಡಿಯಲ್ಲಿ ಹೋಗಬೇಕಾಯಿತು.

ಸಮುದ್ರತೀರವು ಅಂಕುಡೊಂಕಾಗಿದ್ದುದರಿಂದ ಬಂಡಿಯು ಸಾವಕಾಶ ಸಾಗಿತ್ತು. ಸಮೀಪದಲ್ಲಿ ಹಲವು ಗುಡಿಸಲುಗಳು ಹತ್ತಿದವು. ಅಸಂಖ್ಯ ಮೀನಗಾರರು ನನ್ನನ್ನು ಸುತ್ತುಗಟ್ಟಿ ಬಂದರು. ನಾನು ಏನು ಹೇಳಿದರೂ ಅವರಿಗೆ ಅರ್ಥವಾಗಲಿಲ್ಲ. ಭಾಷೆಯು ತೊಡಕೇ ತೊಡಕು. ಮುಂದೆ ಅಂಗಡಿಯಿಂದ ಅಂಗಡಿಗೆ ಹೋಗಿ ಕೊನೆಗೆ ಪೇಟೆ ಮುಟ್ಟಿದೆ. ಜಯಂತ ಸಿಕ್ಕಾನೆಂದು ಆಶೆಯು ಅವರಿಸಿತ್ತು. ಇಡೀ ಪೇಟೆ ತಿರುವಿಹಾಕಿ ನಿರಾಶೆಯ ನಿಟ್ಟುಸಿರಿನಿಂದ ತಿರುಗುವವನಿದ್ದೆ. ಅಷ್ಟರಲ್ಲಿ ಒಬ್ಬನು ಕಣ್ಣಿಗೆ ಬಿದ್ದನು. ಜಯಂತನೇ ಅವನು! ಗಡ್ಡ ಬೆಳಿಸಿ ಬಣ್ಣದ ನಿಲುವಂಗಿ ತೊಟ್ಟಿದ್ದನು.

ನನ್ನನ್ನು ಕಂಡೊಡನೆ ಜಯಂತ ಆನಂದದಿಂದ ಬರಮಾಡಿಕೊಂಡ. ನನಗೆ ಮಾತಾಡಲು ಅನುವು ದೊರೆಯದಂತೆ ತನ್ನ ಮುಗಿಯದ ಪ್ರಶ್ನೆಗಳ ಮಾಲೆಯನ್ನೇ ಪ್ರಾರಂಭಿಸಿದ. ಆಗಾಗ ಅವನು ಕೆಲವು ಪ್ರಶ್ನೆಗಳಿಗೆ ಉತ್ತರ ವೀಯುತ್ತಿದ್ದೆ. ಇಬ್ಬರೂ ಸಮುದ್ರತೀರಕ್ಕೆ ಹೋದೆವು. ಅಲ್ಲಿಯೇ ಅವನ ಗುಡಿಸಲು. ಚಿಕ್ಕದಾದರೂ ಚೊಕ್ಕಟವಾಗಿದ್ದಿತು. ಮೊದಲು ಟೆಂಗಿನ ನೀರು ಕುಡಿದು ಒಳಭಾಗಕ್ಕೆ ಹೋದೆವು. ಅಲ್ಲಿ ಜಯಂತನ ಚಿತ್ರಗಳಿದ್ದವು. ಅವನ ಕಲೆಗೆ ಈಗ ಪರಿಣತಾವಸ್ಥೆ ಬಂದಂತೆ ಕಂಡಿತು. ಬಣ್ಣ ಬೆರಸುವಾಗಂತೂ ಕಲೋಪಾಸಕನ ಆತ್ಮವಿಶ್ವಾಸವು ಸೂರೆಯಾಗಿತ್ತು.

ಚಿತ್ರ ನೋಡುವವರಲ್ಲಿ ತಲ್ಲೀನನಾದ ನಾನು ತಿರುಗಿ ಊರಿಗೆ ಬಾ ಎಂದು ಜಯಂತನಿಗೆ ಹೇಳಲಿಲ್ಲ.

ಸಮುದ್ರದ ಸ್ನಾನಾನಂತರ ಊಟದವ್ಯವಸ್ಥೆ ನಡೆಯಿತು. ಬಾಳೆ ಎಲೆಗಳ ಮುಂದೆ ಚಾಪೆ ಹಾಸಿಕೊಂಡು ಕುಳಿತಿದ್ದೆವು. ಚಟ್ನಿ, ಸಾರು, ಮೊಸರು, ಅನ್ನ- ಯಥೇಚ್ಛ ಇದ್ದವು. ಊಟ ಮುಗಿದೊಡನೆ ಚುರುಟು ಸೇದುತ್ತ ಅಡ್ಡಾದೆವು. ಜಯಂತನಿಗೆ ದಣಿವು ಆಗಿದೆಯೆಂದು ನನಗೆ ಹೊಳೆಯಿತು. ತನ್ನ ಜೀವನಸ್ಮೃತಿಗಳ ಮಾಲೆಯಲ್ಲಿ ಲೀನವಾಗಿರುವನೆಂದು ಅನಿಸಿತು. ಮನೆಗೆ ಹೊರಡುವ ಪ್ರಸ್ತಾವ ತೆಗೆಯುವದಕ್ಕೆ ಇದೇ ಸುವರ್ಣಸಂಧಿ. ಅನುಮಾನಿಸಿ ಒಮ್ಮೆ ಮನಸ್ಸಿನಲ್ಲಿ ನಾನು ನಕ್ಕಿದೆ.

ಕುಮುದೆಯ ಸುದ್ದಿ ಹೇಳುವದಕ್ಕೆ, ಜಯಂತ, ಎಂದು ಪ್ರಾರಂಭಿಸಿದೆ. ಜಯಂತ ತನ್ನ ಮುಂಗೈ ತೋರಿಸಿ ಏನು ಏನು? ಎಂದು ಕೇಳಿದ. ಸರಿ - ಕುಮುದೆಗೆ [illegible]. ಆಕೆ ಮೇಲಿಂದ ಮೇಲೆ ಮೂರ್ಛೆ ಹೋಗುತ್ತಾಳೆ. ಹೃದಯ ದುರ್ಬಲವಾಗಿದೆ. ಇಷ್ಟು ನುಡಿದು [illegible] ಕುಳಿತೆ. ಜಯಂತನು ಕ್ಷಣಕಾಲ ವಿಚಾರಮಗ್ನನಾದನು. "ನಾನು ಏನುಮಾಡಲಿ ಹೇಳಬಾರದೇ" ಎಂದು ಕೇಳಿದ. "ಏನು ಹೇಳಲಿ ಜಯಂತ, ನಾನೇ ನೀನಾಗಿದ್ದರೆ ಮರಳಿ ಊರಿಗೆ ಹೋಗುತ್ತಿದ್ದೆ" ಮನ ಒಲಿಸಲು ಇದೊಂದೆ ವಿಧಾನ [illegible]ಯಿತು. ಜಯಂತ ಸುಮ್ಮನಾಗಿ ಬಿಟ್ಟುಬಿಟ್ಟ. ಹೊರಡುವದೇ ನಿಜ ಎಂದು ಅಂದನು. ಮನಸಾ ನುಡಿದುದಲ್ಲವೆಂದು ತೋರುತ್ತಿತ್ತು. ಮನಸು ಕಲ್ಕತ್ತೆಗೆ ಹೊರಟಾಗಿನ ದೃಶ್ಯ ಬಣ್ಣಿಸುವ ಇಚ್ಛೆ ನನಗಿಲ್ಲ. ನಾನು ಎಂಥ ಪೇಚಿನಲ್ಲಿ ಬಿದ್ದೆನಲ್ಲ ಎಂದು ಚಡಪಡಿಸುವಾಗ ಜಯಂತ ವಿಚಾರಮಗ್ನನಾಗಿದ್ದನು. ನಾವು ಮನೆ ಮುಟ್ಟಿದಾಗ ಕುಮುದ ಬಾಗಿಲಿಗೇ ನಿಂತಿದ್ದಳು. ನನ್ನನ್ನು ಲಕ್ಷಿಸದೇ ಒಬ್ಬರನ್ನೊಬ್ಬರು ಅಪ್ಪಿಕೊಂಡರು. ಕೆಲ ನಿಮಿಷ ಯಾವ ಮಾತೂ ಹೊರಡಲಿಲ್ಲ. ಜಯಂತ ಕುಮುದೆಯರ ನೈಜ ಪ್ರೇಮದ ಆಳ ಆಗ ನನಗೆ ಆಯಿತು. ಕಲೋಪಾಸನೆಗಾಗಿ ಅವನು ಮಾಡಿದ ತ್ಯಾಗವು ಅನುಪಮವಾದಂತಿತ್ತು. ಅಂತೂ ನಾನು ಸುಳ್ಳು ಹೇಳಿ ಕರತಂದುದರ ಪರಿಣಾಮ ಏನು ಆದೀತೆಂಬ ವಿಚಾರ ನನ್ನನ್ನು ಬಾಧಿಸುತ್ತಿತ್ತು.

ಮರುದಿನ ಅವರ ಮನೆಗೆ ಹೋದಾಗ ಸೂಕ್ಷ್ಮವಾಗಿ ನಿರುಕಿಸಿದೆ. ಜಯಂತನ ಮಾತಿನ ಸರಣಿಯಲ್ಲಿ ಅಂತಹ ಹೇಳಿಕೊಳ್ಳುವ ಮಾರ್ಪಾಟಾಗಿದ್ದಿಲ್ಲ. ಎಂದಿನಂತೆ ಅವನು ನನ್ನನ್ನು ಆದರದಿಂದ ನಡೆಸಿಕೊಂಡ. ಪತಿಪತ್ನಿಯರ ಪುನರ್ಮಿಲನಕ್ಕೆ ನಾನು ಕಾರಣೀಭೂತನಾದೆನಲ್ಲ ಎಂದು ನನಗೆ ಸಮಾಧಾನವಾಗಿತ್ತು. ಮಹತ್ವದ ಕೆಲಸಕ್ಕೆ ತನಗೆ ಹೊರ ಹೊರಡಬೇಕಾಗಿದೆ ಎಂದು ಜಯಂತ ಹೇಳಿದನು. ನೌಕರಿಯ ವಿಷಯವಾಗಿ ಫರ್ಮಿನ ಮುಖ್ಯಾಧಿಕಾರಿಯೊಬ್ಬನಿಗೆ ಭೆಟ್ಟಿಯಾಗಬೇಕಿತ್ತಂತೆ. ನಾನೂ ಏಳುವದರಲ್ಲಿದ್ದೆ. ಆದರೆ ಕುಮುದ ಒಪ್ಪಲಿಲ್ಲ. ಜಯಂತ ಹೊರಗೆ ಕಾಲಿಟ್ಟೊಡನೆ ಕುಮುದ ನನ್ನನ್ನು ತಮ್ಮ ಮುಂದಿನ ಅಟ್ಟಕ್ಕೆ ಕರೆದೊಯ್ದಳು. ಜಯಂತನ ಚಿತ್ರಗಳು ಅಲ್ಲಿಯೆ ಇದ್ದವು. ಇವು ಮಾರಾಟವಾಗಬಹುದೆ? ಎಂದು ಕೇಳಿದಳು. ನಾನು ನಿಶ್ಚಿತವಾಗಿ ಹೇಳಲಾರೆ ಎಂದೆ. "ಒಬ್ಬ ಪ್ರಸಿದ್ಧ ವ್ಯಾಪಾರಸ್ಥನ ಮಗನ ಪರಿಚಯ ನನಗಿದೆ. ಅವನಿಗೆ ಕಲೆಯೆಂದರೆ ಜೀವ. ಅವನಿಗೆ ಕೊಳ್ಳುವ ಮನಸ್ಸಿದ್ದರೆ ನೋಡುವಾ" ಎಂದು ಹೇಳಿದೆ. ನಿಜವಾಗಿ ನೋಡಿದರೆ

—ಮುಂದಿನ ಪುಟಕ್ಕೆ

ಆಹಾರ ಸ್ವಾವಲಂಬನ ಯೋಜನೆ

ಹೈದರಾಬಾದ ಸಮಸ್ಯೆಯ ಬಗ್ಗೆ ಸಂಸ್ಥಾನ ಕಾಂಗ್ರೆಸ್ಸಿನ ಧೋರಣೆಯೇನು?

ಲಂಡನ ಪರಿಷತ್ತಿನ ಫಲಿತಾಂಶದ ಸ್ಪಷ್ಟೀಕರಣ

ಆಹಾರ ಸ್ವಾವಲಂಬನ

ಕೃಷಿಪ್ರಧಾನವಾದ ಹಿಂದುಸ್ತಾನವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಬೇಕು ಎಂದು ಬಯಸುವದು ಅಪ್ರಸ್ತುತವಾಗಲಾರದು. ಆದರೆ ಪರಕೀಯ ಸರಕಾರ ಇಲ್ಲಿರುವಾಗ ಈ ಮಹತ್ವದ ಅಂಶದತ್ತ ಗಮನಿಸದೆ ಹೇಗಾದರೂ ಮಾಡಿ ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸಿ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಅವನ್ನೊದಗಿಸಿ ಒಂದು ಬಗೆಯಿಂದ ಅವರನ್ನು ಸಂತುಷ್ಟ ಇಟ್ಟಿದ್ದರು. ಆದರೆ ಸ್ವತಂತ್ರ ಹಿಂದುಸ್ತಾನವು ಆಹಾರ ಪದಾರ್ಥಗಳಲ್ಲಿ ಹಾಗೆಂದಿಗೂ ಪರರಾಷ್ಟ್ರಗಳನ್ನವಲಂಬಿಸದು. ಅಂತೆಯೇ ೧೯೫೧ ರೊಳಗಾಗಿ ಹಿಂದುಸ್ತಾನವನ್ನು ಆಹಾರ ವಿಷಯದಲ್ಲಿ ಸ್ವಾವಲಂಬಿಯನ್ನಾಗಿ ಮಾಡಬೇಕೆಂಬ ನಿರ್ಧಾರವನ್ನು ಹಿಂದುಸ್ತಾನ ಸರಕಾರವು ಸ್ವೀಕರಿಸಿದೆ. ಇತ್ತೀಚೆಗೆ ದಿಲ್ಲಿಯಲ್ಲಿ ಕೂಡಿದ್ದ ಆಹಾರ ಮಂತ್ರಿಗಳ ಪರಿಷತ್ತಿನಲ್ಲಿ ಈ ವಿಷಯದ ಕೂಲಂಕಷ ಚರ್ಚೆಯಾಗಿ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ಸ್ವೀಕರಿಸಲಾಯಿತು. ಹೀಳುಬಿದ್ದ ಭೂಮಿಯನ್ನು ಹದಮಾಡಿ ಬೆಳೆಗೆ ಯೋಗ್ಯವನ್ನಾಗಿಸುವದು, ರೊಕ್ಕದ ಬೆಳೆಗಾಗಿ ಉಪಯೋಗಿಸುತಿದ್ದ ಭೂಮಿಗಳಲ್ಲಿ ಆಹಾರ ಪದಾರ್ಥಗಳನ್ನು ಬೆಳೆವಂತೆ ಯೋಜಿಸುವದು ಮತ್ತು ನೀರಾವರಿ ಪ್ರದೇಶದಲ್ಲಿ ಎರಡು ಮೂರು ಬೆಳೆಗಳನ್ನು ಬೆಳೆಯುವದು ಮೊದಲಾದ ಯೋಜನೆಗಳತ್ತ ಹೆಚ್ಚು ಲಕ್ಷ್ಯ ಪೂರೈಸುವದು ಮತ್ತು ಒಕ್ಕಲಿಗರಿಗೆ ಆಹಾರೋತ್ಪಾದನೆಯಲ್ಲಿ ಎಲ್ಲ ಬಗೆಯ ಅನುಕೂಲತೆಗಳನ್ನು ಕಲ್ಪಿಸಿ ಕೊಡುವದು ಮೊದಲಾದ ಉಪಾಯಗಳನ್ನು ಕೈಕೊಳ್ಳಬೇಕೆಂದು ಈ ಪರಿಷತ್ತಿನಲ್ಲಿ ನಿರ್ಧರಿಸಲಾಗಿದೆಯೆಂದು ತಿಳಿಯುತ್ತದೆ. ಆಹಾರ ಪದಾರ್ಥಗಳ ಬೆಲೆಗಳ ಧಾರಣೆಯ ಸಂಬಂಧದಲ್ಲಿಯೂ ಈ ಪರಿಷತ್ತು ವಿಚಾರ ಮಾಡಿ ಸದ್ಯದಲ್ಲಿ ಅದನ್ನು ನಿರ್ಧರಿಸಬಾರದೆಂದು ಗೊತ್ತು ಮಾಡಲಾಯಿತು. ಆಹಾರ ಪದಾರ್ಥಗಳ ಧಾರಣೆ ಹೆಚ್ಚಿದ್ದರಿಂದ ಇತರ ಅವಶ್ಯಕ ಪದಾರ್ಥಗಳ ಧಾರಣೆಗಳೂ ಏರಿವೆಯೆಂದು ಹೇಳಲಾಗುತ್ತದೆ. ಆದರೆ ವಸ್ತುಸ್ಥಿತಿಯು ಮಾತ್ರ ಇದಕ್ಕೆ ವಿಪರೀತವಾಗಿದೆ. ಇತರ ಅವಶ್ಯಕ ಪದಾರ್ಥಗಳ ಧಾರಣೆ ಏರಿದ್ದರಿಂದ ಆಹಾರ ಪದಾರ್ಥಗಳ ಧಾರಣೆಗಳನ್ನು ಏರಿಸಲಾಯಿತು. ಇತರ ಆಹಾರ ಪದಾರ್ಥಗಳ ಧಾರಣೆಗಳನ್ನು ಇಳಿಸಿದ್ದಾದರೆ ಆಹಾರೋತ್ಪಾದನೆಯನ್ನು ಹೆಚ್ಚಿಸಬೇಕೆಂಬ ಯೋಜನೆಯು ನಿಷ್ಫಲವಾಗಬಹುದು. ಒಕ್ಕಲಿಗರಲ್ಲಿ ಈ ಸಂಬಂಧದಲ್ಲಿ ಇರಬೇಕಾದ ಉತ್ಸಾಹ ಪುರುಷು ಉಳಿಯದೆ ಹೆಚ್ಚು ರೊಕ್ಕ ಬರುವ ಬೆಳೆಗಳನ್ನು ಅವರು ಬೆಳೆಯಬಹುದು. ಆಹಾರೋತ್ಪಾದನೆಯನ್ನು ಹೆಚ್ಚಿಸುವತ್ತ ಹೆಚ್ಚು ಗಮನವನ್ನು ಕೊಡಬೇಕಾದ ಈ ಸಮಯದಲ್ಲಿ ಆಹಾರ ಪದಾರ್ಥಗಳ ಧಾರಣೆಗಳನ್ನು ಇಳಿಸದಿರುವ ನಿರ್ಣಯ ಸ್ವೀಕರಿಸಿದ್ದು ಉಚಿತವೇ ಆಯಿತು.

ಪಡಭೂಮಿಗಳ ಸಾಗುವಳಿ

ಆಹಾರೋತ್ಪಾದನೆಯಲ್ಲಿ ಹೆಚ್ಚು ಮಹತ್ವದ್ದಾದ ಪಡಭೂಮಿಗಳನ್ನು ಸಾಗುಮಾಡುವಲ್ಲಿ ಹಿಂದುಸ್ತಾನ ಸರಕಾರವು ಯಶಸ್ವಿಯಾಗಿ ಪ್ರಯತ್ನಿಸಿದೆಯೆಂದು ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಬೇಸಾಯಕ್ಕೆ ಯೋಗ್ಯವಾದ ೬|| ಕೋಟಿ ಎಕರೆ ಭೂಮಿಯನ್ನು ಸಾಗುಮಾಡುವತ್ತ ಸರಕಾರವು ಗಮನಿಸಿದೆ. ೧೯೪೮ ರಲ್ಲಿ ೪೮೫೫೩೩ ಎಕರೆ ಪಡಭೂಮಿಯನ್ನು ಸಾಗುಮಾಡಿ ಸುಮಾರು ೧೩೦೪೯೫ ಟನ್ನು ಆಹಾರ ಧಾನ್ಯವನ್ನು ಬೆಳೆಯಲಾಯಿತು. ಈ ಜೂನ ತಿಂಗಳೊಳಗಾಗಿ ೫೦,೦೦೦ ಎಕರೆ ಪಡಭೂಮಿಯನ್ನು ಬೇಸಾಯಕ್ಕೊಳಪಡಿಸಬೇಕೆಂದು ಕೇಂದ್ರ ಸರಕಾರವು ಪ್ರಾಂತೀಯ ಸರಕಾರಗಳಿಗೆ ಸೂಚಿಸಿದೆ. ಈ ಸಾಗುವಳಿಕೆಲಸಕ್ಕೆ ಎತ್ತುಗಳ ಕೊರತೆಯಾಗಿದೆಯೆಂದು ತಿಳಿಯುತ್ತದೆ. ಪೂರ್ವಪಂಜಾಬದಲ್ಲಿ ಎತ್ತುಗಳ ಅಭಾವ ವಿಶೇಷವಾಗಿದೆ. ಅಲ್ಲಿನ ಮುಸಲ್ಮಾನರು ಪಾಕಿಸ್ತಾನಕ್ಕೆ ಹೋಗುವಾಗ ಎತ್ತುಗಳನ್ನೆಲ್ಲ ಒಯ್ದುದ್ದರಿಂದ ಈ ಅಭಾವ ಹೆಚ್ಚಿದೆ. ಕೇಂದ್ರ ಟ್ರಾಕ್ಟರ ಸಂಸ್ಥೆಯ ಮಾರ್ಗದರ್ಶನದಲ್ಲಿ ಪಡಭೂಮಿ ಸಾಗುವಳಿಯ ಈ ಕಾರ್ಯವು ನಡೆಯುತ್ತಿದೆ. ಜನರೂ ಸಲಕರಣೆಗಳೂ ಸಾಕಷ್ಟು ಇಲ್ಲದ್ದರಿಂದ ಯಾಂತ್ರಿಕ ಉಪಕರಣಗಳನ್ನು ಉಪಯೋಗಿಸಿ ಸಾಧಾರಣ ತುಂಡುಗಳಂತೆ ಸುಮಾರು ೩೦ ಲಕ್ಷ ಎಕರೆ ಪಡಭೂಮಿಯನ್ನು ಸಾಗುಮಾಡಬೇಕೆಂದು ಯೋಜಿಸಲಾಗಿದೆ. ಹಾಗಾದಲ್ಲಿ ೩೦ ಲಕ್ಷ ಟನ್ನು ಆಹಾರ ಪದಾರ್ಥಗಳ ಉತ್ಪಾದನೆ ಹೆಚ್ಚುವದು. ಯುಕ್ತಪ್ರಾಂತದಲ್ಲಿ ೪೭ ಸಾವಿರ ಎಕರೆ ಪಡಭೂಮಿಯನ್ನು ಸಾಗುಮಾಡಬೇಕೆಂದಿದೆ. ಇದಲ್ಲದೆ ೧೩ ಸಾವಿರ ಎಕರೆ ಭೂಮಿಯನ್ನು ಸಾಗುಮಾಡಲು ಹೇಳಿದೆ. ಮದರಾಸ ಪ್ರಾಂತದಲ್ಲಿ ಆರು ವರುಷಗಳಲ್ಲಿ ೪ ಲಕ್ಷ ಎಕರೆ ಪಡಭೂಮಿಯನ್ನು ಸಾಗುಮಾಡುವ ೧೫ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಇಟ್ಟುಕೊಳ್ಳಲಾಗಿದೆ. ಮುಂಬಯಿ ಮಧ್ಯಪ್ರಾಂತ ಮತ್ತು ಬಿಹಾರಗಳಲ್ಲಿ ಪಡಭೂಮಿಸಾಗುಮಾಡುವ ಕಾರ್ಯಕ್ರಮ ಅಲ್ಪಪ್ರಮಾಣದಲ್ಲಿ ಸಾಗಿದೆ.

ಹೈದರಾಬಾದದಲ್ಲಿ ಲೋಕಪ್ರಿಯ ಸರಕಾರ

ನಿಜಾಮುಸಾಹೇಬರ ಮತ್ತು ಅವರ ನಿರಂಕುಶ ಹಸ್ತಕರ ದವಡೆಯೊಳಗಿಂದ ಮುಕ್ತವಾದ ಹೈದರಾಬಾದ ಸಂಸ್ಥಾನದಲ್ಲಿ ಬೇಗನೆ ಲೋಕಪ್ರಿಯ ಸರಕಾರವೇರ್ಪಡಲಿ ಎಂದು ಅಲ್ಲಿನ ಜನತೆ ಅಪೇಕ್ಷಿಸುವದು ಸ್ವಾಭಾವಿಕವಾಗಿದೆ. ಆದರೆ ಸಂಸ್ಥಾನ ಕಾಂಗ್ರೆಸ್ಸಿಗರಲ್ಲಿ ಇನ್ನೂ ಒಮ್ಮತವಾಗದ್ದರಿಂದ ಮತ್ತು ಕಮ್ಯುನಿಸ್ಟರ ಹಾವಳಿಯು ಇನ್ನೂ ತಲೆತಿನ್ನುತಿರುವದರಿಂದ ಸಲಹೆ ಸಮಿತಿಯ ಸಹಾಯದಿಂದ ಮಿಲಿಟರಿ ಗವರ್ನರರೆ ಆಡಳಿತೆಯನ್ನು ನಡೆಸಬೇಕೆಂದು ಸಂಸ್ಥಾನ ಶಾಖೆಯವರು ಸದ್ಯದಲ್ಲಿ ನಿರ್ಧರಿಸಿದ್ದಾರೆ. ಅಂತೆಯೆ ಹೈದರಾಬಾದ ಸಂಸ್ಥಾನದ ಆಡಳಿತೆಯಲ್ಲಿ ನೆರವಾಗಲು ಸಲಹೆ ಸಮಿತಿಗಳನ್ನು ನೇಮಿಸಬೇಕೆಂದು ಮಿಲಿಟರಿ ಗವರ್ನರರು ಮಾಡಿದ ಸೂಚನೆಯನ್ನು ಸಂಸ್ಥಾನ ಕಾಂಗ್ರೆಸ ಕಾರ್ಯಸಮಿತಿಯು ತಿರಸ್ಕರಿಸಿರುವದೆಂದು ತಿಳಿಯುತ್ತದೆ. ಮಿಲಿಟರಿ ಗವರ್ನರರ ಈ ಸೂಚನೆಗಳು ಜನತೆಯ ಆಸೆ ಆಕಾಂಕ್ಷೆಗಳಿಗೆ ಅನುಗುಣವಾಗಿಲ್ಲ ಎಂದು ಅವನ್ನು ತಿರಸ್ಕರಿಸಲಾಗಿದೆ. ಸಂಸ್ಥಾನದ ಆಡಳಿತೆಯನ್ನು ಪ್ರಾತಿನಿಧಿಕವಾಗಿಸಬೇಕೆಂದಿದ್ದಾರೆ. ಲೋಕಪ್ರಿಯ ಸರಕಾರವನ್ನು ರಚಿಸಬೇಕು ಇದು ಸಾಧ್ಯವಿಲ್ಲದಿದ್ದರೆ ಈಗಿರುವ ಮಂತ್ರಿಮಂಡಲದಲ್ಲಿ ಜನತೆಯ ಪ್ರತಿನಿಧಿಗಳನ್ನಾದರೂ ಸೇರಿಸಿಕೊಳ್ಳಬೇಕು ಎಂದು ಕಾಂಗ್ರೆಸ್ಸಿನ ಮತವಾಗಿದೆ. ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ದಿಲ್ಲಿಗೆ ಹೋಗಿ ಸಂಸ್ಥಾನ ಶಾಖೆಯವರಿಗೆ ಸಂಸ್ಥಾನ ಕಾಂಗ್ರೆಸ್ಸಿನ ಈ ನಿರ್ಣಯವನ್ನು ತಿಳಿಸಲಿದ್ದಾರೆ. ಸಲಹೆ ಸಮಿತಿಗಳನ್ನು ನೇಮಿಸಬೇಕೆಂಬ ಸೂಚನೆಯನ್ನು ಕಾಂಗ್ರೆಸ್ಸು ನಿರಾಕರಿಸಿದ್ದರೂ ಸಂಸ್ಥಾನದಲ್ಲಿ ಆಹಾರ ಮತ್ತು ಪುನರ್ನಿವೇಶನದ ವಿಚಾರದಲ್ಲಿ ರಾಷ್ಟ್ರದ ಹಿತವನ್ನು ಗಮನಿಸಿ ಸರಕಾರದೊಡನೆ ಸಹಕರಿಸಬೇಕೆಂದು ಅದು ನಿರ್ಧರಿಸಿದೆ. ಸಂಸ್ಥಾನದಲ್ಲಿಯ ವಿವಿಧ ಭಾಷಾಪ್ರದೇಶಗಳನ್ನು ಆಯಾ ಭಾಷಾಸ್ವಯ ಪ್ರಾಂತಗಳಲ್ಲಿ ಸಮಾವೇಶಮಾಡಿಬಿಟ್ಟರೆ ಈ ಬಗೆಯ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಉಳಿಯಲಾರದು. ಲೋಕಪ್ರಿಯ ಸರಕಾರವನ್ನು ಒಮ್ಮೆ ರಚಿಸಿದ್ದಾದರೆ ಆಯಾ ಭಾಷಾಪ್ರದೇಶಗಳನ್ನು ಭಾವೀ ಭಾಷಾಸ್ವಯ ಪ್ರಾಂತಗಳಲ್ಲಿ ಸೇರಿಸಲು ವಿಧವಿಧದ ಅಡೆತಡೆಗಳು ಬರುವವು. ಸ್ವಾರ್ಥ, ಅಧಿಕಾರಲಾಲಸೆ ಮೊದಲಾದವುಗಳೂ ತಾಂಡವವಾಡಬಹುದು. ಸದ್ಯದ ಹಲವು ಸಂಸ್ಥಾನಗಳು ವಿಲೀನಹೊಂದಲು ಹಿಂದೆ ಮುಂದೆ ನೋಡುವದಕ್ಕೆ ಈ ಬಗೆಯ ಸ್ವಾರ್ಥ ಮತ್ತು ಅಧಿಕಾರಲಾಲಸೆಯೆ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದುದರಿಂದ ಸಂಸ್ಥಾನದ ಆಡಳಿತೆಗೆ ಶಾಶ್ವತವಾದ ಸ್ವರೂಪವನ್ನು ಕೊಡುವ ಮೊದಲು ಸಂಸ್ಥಾನ ಶಾಖೆಯವರು ಎಲ್ಲ ಪ್ರಶ್ನೆಗಳನ್ನೂ ತೂಗಿನೋಡಿ ಸೂಕ್ತವಾದ ಕ್ರಮ ಕೈಕೊಳ್ಳಬೇಕೆಂದು ಬಿನ್ನವಿಸುತ್ತೇವೆ.

ಲಂಡನ ಪರಿಷತ್ತಿನಿಂದ ಸಮಾಧಾನ


ಲಂಡನದಲ್ಲಿ ಕೂಡಿದ್ದ ಕಾಮನ್‌ವೆಲ್ತ ಪರಿಷತ್ತನ್ನು ಮುಗಿಸಿಕೊಂಡು ಹಿಂದುಸ್ತಾನಕ್ಕೆ ಹೊರಟಿರುವ ಹಿಂದುಸ್ತಾನದ ಮುಖ್ಯಮಂತ್ರಿ ಪಂಡಿತ ಜವಾಹರಲಾಲ ನೆಹರು ಇವರು ಬರ್ನದಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಪರಿಷತ್ತಿನ ಫಲಿತಾಂಶವನ್ನು ಕುರಿತುಸ್ಪಷ್ಟೀಕರಿಸಿದರು. ಹಿಂದುಸ್ತಾನವು ಪ್ರಜಾರಾಜ್ಯವಾದ ಬಗ್ಗೆ ಇನ್ನು ನಾಲ್ಕೈದು ತಿಂಗಳುಗಳಲ್ಲಿಯೆ ಘೋಷಣೆ ಹೊರಬೀಳುವದು. ಲಂಡನ ಪರಿಷತ್ತಿನ ಫಲಿತಾಂಶದಿಂದ ತಮಗೆ ಸಮಾಧಾನವಾಗಿದ್ದು ಹಿಂದುಸ್ತಾನವು ಸಕಲರಾಷ್ಟ್ರಗಳೊಡನೆ ಸ್ನೇಹಭಾವದಿಂದುಳಿದು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗುವದು ಎಂದು ಅವರು ಹೇಳಿದರು. ಘಟನಾಸಮಿತಿಯು ಈಗಾಗಲೆ ಮೂರರಲ್ಲಿ ಎರಡುಪಾಲು ಘಟನೆಯನ್ನು ಸ್ವೀಕರಿಸಿದ್ದು ಬೇಗನೆ ಕೂಡಲಿರುವ ಅದು ಇನ್ನೆರಡು ಮೂರು ತಿಂಗಳಲ್ಲಿ ಉಳಿದ ರಾಜ್ಯಘಟನೆಯನ್ನೂ ಸ್ವೀಕರಿಸಿ ಶುಭ ಮುಹೂರ್ತದಲ್ಲಿ ಪ್ರಜಾರಾಜ್ಯದ ಘೋಷಣೆ ಮಾಡುವದು. ಜಾಗತಿಕ ಶಾಂತಿಸ್ಥಾಪನೆಯ ಕಾರ್ಯದಲ್ಲಿಯೂ ಹಿಂದುಸ್ತಾನವು ಕೈಲಾದಷ್ಟು ನೆರವಾಗಬೇಕೆಂದು ಬಯಸಿದೆ. ನಮ್ಮ ದೇಶದ ಹಿನ್ನೆಲೆ ಶಾಂತಿಪೂರ್ಣವಾಗಿದೆ. ನಮ್ಮಂತೆ ಇತರ ರಾಷ್ಟ್ರಗಳ ಪ್ರಗತಿಯನ್ನು ಕುಂಠಿಸುವ ಘರ್ಷಣೆಗಳು ಜಗತ್ತಿನಲ್ಲಿ ನಡೆದಿರುವದನ್ನು ಕಂಡು ನಾವು ಬೆರಗಾಗಿದ್ದೇವೆ. ಯುರೋಪಿನಲ್ಲಿವೈಜ್ಞಾನಿಕಪ್ರಗತಿಹೆಚ್ಚಾಗಿಆಗಿದೆ; ಅದರಂತೆ ಅದು ಸಮರಭೂಮಿಯೂ ಆಗಿದೆ. ಇವೆರಡೂ ಕೂಡಿಯೆ ಸಾಗಿವೆ. ಯುರೋಪು ತನ್ನ ನಾಗರಿಕತೆ ಸಂಸ್ಕೃತಿಗಳ ಅಭಿವೃದ್ಧಿಯ ಮೂಲಕ ಜಗತ್ತಿನ ರಾಜಕಾರಣದಲ್ಲಿ ಇನ್ನೂ ಮಹತ್ವದ ಭಾಗ ವಹಿಸಬೇಕಾಗಿದೆ, ಎಂದೂ ಅವರು ಹೇಳಿದರು. ಜಗತ್ತಿನ ರಾಜಕಾರಣದಲ್ಲಿ ಏಶಿಯವು ಮತ್ತೆ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ ವಹಿಸುತ್ತಲಿದೆ. ದಕ್ಷಿಣ ಆಫ್ರಿಕೆಯಲ್ಲಿಯ ವರ್ಣದ್ವೇಷ ಸಮಸ್ಯೆಯು ಸಮಾಧಾನಕರವಾಗಿ ಬಗೆಹರಿಯದಿದ್ದರೆ ತಿಕ್ಕಾಟವು ಕಟ್ಟಿಟ್ಟದ್ದೆಂಬದನ್ನು ಮರೆಯಲಾಗದು ಎಂದೂ ಅವರು ಅಭಿಪ್ರಾಯಪಟ್ಟರು. ಪ್ರತಿಯೊಂದು ದೇಶವು ಸ್ವತಂತ್ರವಾಗಬೇಕು ಮತ್ತು ವಸಾಹತು ರಾಷ್ಟ್ರಗಳ ಸುಲಿಗೆ ನಡೆಯಬಾರದು ಎಂದು ಇಬ್ಬಗೆಯ ಧೋರಣೆಗಳನ್ನು ನಾವು ಇಟ್ಟುಕೊಂಡಿದ್ದೇವೆ. ಈ ಸ್ವತಂತ್ರ ರಾಷ್ಟ್ರಗಳು ಜಗತ್ತಿನ ಹಿತಕ್ಕಾಗಿ ಸಹಕಾರದಿಂದಿರಬೇಕು, ರಾಷ್ಟ್ರರಾಷ್ಟ್ರಗಳಲ್ಲಿ ಇಂತು ನಿಕಟ ಸಹಕಾರಸಂಬಂಧ ಬೆಳೆವವರೆಗೆ ಜಗತ್ತಿನ ಸಮಸ್ಯೆಗಳ ಪರಿಹಾರವಾಗದೆಂದೂ ಅವರು ಅಭಿಪ್ರಾಯಪಟ್ಟರು. ಜಾತ್ಯತೀತವಾದ ಹಿಂದುಸ್ತಾನದಲ್ಲಿ ಎಲ್ಲ ಧರ್ಮ ಜಾತಿಗಳ ಜನರಿಗೂ ತಮ್ಮ ತಮ್ಮ ಧರ್ಮಗಳಂತೆ ನಡೆಯಲು ಸ್ವಾತಂತ್ರ್ಯವಿದೆ ಎಂದೂ ಅವರು ಸ್ಪಷ್ಟೀಕರಿಸಿದರು.

ಸೇವಾದಲ ಸಮ್ಮೇಲನ

ಕರ್ನಾಟಕ ಪ್ರಾಂತೀಯ ಸೇವಾದಲ ಸಮ್ಮೇಲನ ಕಳೆದ ತಿಂಗಳು ೨೭ ೨೮ ಕ್ಕೆ ಬಾಗಲಕೋಟಿಯಲ್ಲಿ ಸೇವಾದಲದ ಸಂಸ್ಥಾಪಕರಾದ ಡಾ. ಎನ್. ಎಸ್. ಹರ್ಡಿಕರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಬಾಬೂ ರಾಜೇಂದ್ರಪ್ರಸಾದರು ಅದರ ಪ್ರಾರಂಭ ಮಹೋತ್ಸವವನ್ನು ಜರುಗಿಸಿದರು. ಸೇವಾದಲ ಸಂಸ್ಥೆಯ ಸದ್ಯದ ಪರಿಸ್ಥಿತಿ ಮತ್ತು ಅವಶ್ಯಕತೆ ಕೂಲಂಕಷವಾಗಿ ಚರ್ಚಿಸಿ ಮಹತ್ವದ ಗೊತ್ತುವಳಿಗಳು ಸ್ವೀಕೃತವಾದವು. ಕಾಂಗ್ರೆಸ ಸಂದೇಶವನ್ನು ನೇರವಾಗಿ ಪ್ರಚಾರ ಮಾಡುವ ಮತ್ತು ಅದರ ಇಚ್ಛೆಯಂತೆ ರಾಷ್ಟ್ರನಿರ್ಮಾಣದ ಕಾರ್ಯವನ್ನು ಮಾಡುವ ಮಹತ್ವದ ಸಾಧನವು ಸೇವಾದಲವಿರುವದರಿಂದ ಕಾಂಗ್ರೆಸ ಕಾರ್ಯಸಮಿತಿಯು ಈ ಸಂಸ್ಥೆಯತ್ತ ವಿಶೇಷ ಗಮನಕೊಡಬೇಕು, ಸೇವಾದಲ ಕಾರ್ಯದ ಸಾರ್ವಾಂಗಿಕ ಪರಿಣಾಮವಾಗಬೇಕಾದರೆ ಸೇವಾದಲವು ಹಳ್ಳಿಹಳ್ಳಿಗಳಲ್ಲಿ ಸ್ಥಾಪಿತವಾಗಿ ಹೆಚ್ಚು ಹೆಚ್ಚಾಗಿ ರೈತರನ್ನು ಸೇವಾದಲದಲ್ಲಿ ತೆಗೆದುಕೊಂಡು ಶಿಕ್ಷಣಕೊಡುವ ವಿಶೇಷ ಪ್ರಯತ್ನಮಾಡುವದು ಅವಶ್ಯವಿದೆ. ರಾಷ್ಟ್ರನಿರ್ಮಾಣ ಕಾರ್ಯದ ದೃಷ್ಟಿಯಿಂದ ಸೇವಾದಲದವರು ತಮ್ಮ ಶಿಕ್ಷಣ ಕಾರ್ಯಕ್ರಮಗಳನ್ನು ಪುನಃ ಪರಿಶೀಲಿಸಬೇಕು. ನಾಡಿನ ಯುವಕರೆಲ್ಲ ಸೇವಾದಲದಲ್ಲಿ ಸೇರಿ ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕು. ಸೇವಾದಲವು ಮಾತ್ರ ಮಹಾತ್ಮರ ತತ್ವಗಳಂತೆ ರಾಷ್ಟ್ರನಿರ್ಮಾಣಕಾರ್ಯವನ್ನು ಮಾಡಬಲ್ಲದು, ಎಂದು ಮುಂತಾದ ಗೊತ್ತುವಳಿ ಸ್ವೀಕೃತವಾದವು.

ನ್ಯಾಯಾಧೀಶನಿಗೆ ಬಡತರ್ಫ

ಅಲಹಾಬಾದ ಹಾಯಕೋರ್ಟಿನ ನ್ಯಾಯಾಧೀಶರಾಗಿದ್ದ ಶಿವಪ್ರಸಾದ ಸಿಂಹರನ್ನು ಫೆಡರಲ್ ಕೋರ್ಟಿನ ಪುರಸ್ಕಾರವನ್ನನುಲಕ್ಷಿಸಿ ಗವರ್ನರ ಜನರಲ್‌ರು ಮನೆಗೆ ಕಳಿಸಿ ಪ್ರಕಟವಾಗಿದೆ. ಇವರ ಮೇಲೆ ಗಂಭೀರ ಆರೋಪಗಳು ಅನೇಕ ಇದ್ದು ಮಹತ್ವದ ಎರಡು ಆರೋಪಗಳನ್ನು ಫೆಡರಲ್ ಕೋರ್ಟಿನವರು ತಮ್ಮ ಪುರಸ್ಕಾರದಲ್ಲಿ ಉಲ್ಲೇಖಿಸಿರುವರು. ಪದ್ರಾವುನಾ ಮತ್ತು ಮುರಾರಿಲಾಲ ಈ ಎರಡು ಖಟ್ಲೆಗಳಲ್ಲಿ ಶಿವಪ್ರಸಾದರು ಸರಿಯಾಗಿ ನಡೆಯಲಿಲ್ಲೆಂದು ಆರೋಪಿಸಲಾಗಿದೆ. ಅಲ್ಲದೆ ತಮ್ಮ ಜನ್ಮದಿನಾಂಕವನ್ನೂ ಸರಕಾರಕ್ಕೆ ಅವರು ತಪ್ಪಾಗಿ ತಿಳಿಸಿರುವರಂತೆ. ಪದ್ರಾವುನಾ ಖಟ್ಲೆಯಲ್ಲಿ ಒಂದನೆ ಪ್ರತಿವಾದಿಯ ಪಕ್ಷಪಾತ ವಹಿಸಿ ಹುಕುಮು ಮಾಡಿದ್ದಲ್ಲದೆ ತಮ್ಮ ತಮ್ಮ ಶ್ರೀ ಶಂಭುಪ್ರಸಾದರಿಗೆ ವಕೀಲರೆಂದು ಹಾಜರಾಗಲು ಅನುಮತಿ ಕೊಟ್ಟರಂತೆ. ಇವೆರಡೂ ಕಾರಣಗಳಿಗಾಗಿ ಶಿವಪ್ರಸಾದರು ನ್ಯಾಯಾಧೀಶರಾಗಲು ಅನರ್ಹರಾದರೆಂದು ಫೆಡರಲ್‌ಕೋರ್ಟಿನ ಅಭಿಪ್ರಾಯವಾಗಿದೆ. ಇದಲ್ಲದೆ ಆ ಮೊಕದ್ದಮೆಯಲ್ಲಿ ಬಹಿರಂಗ ಕೋರ್ಟಿನಲ್ಲಿಯೆ ತಮ್ಮ ಜೊತೆ ನ್ಯಾಯಾಧೀಶರಾದ ವಾಲಿಯುಲ್ಲಾರವರನ್ನು ಮನವಾರೆ ತೆಗಳಿದರಂತೆ. ಮುರಾರಿಲಾಲ ಫೌಜದಾರಿ ಖಟ್ಲೆಯಲ್ಲಿ ಶಿವಪ್ರಸಾದರು ಅನುಸರಿಸಿದ ರೀತಿನೀತಿಗಳು ಆಕ್ಷೇಪಾರ್ಹವಿದ್ದವೆಂದೂ ಫೆಡರಲ್ ಕೋರ್ಟಿನ ಅಭಿಪ್ರಾಯ. ಮೊದಲು ಮಾಡಿದ ಆಜ್ಞೆಯನ್ನು ಕೂಡ ಅವರು ಹಿಂದುಗಡೆ ಬದಲು ಮಾಡಿದರಂತೆ. ಇದಲ್ಲದೆ ಕೆಲ ವಕೀಲರಿಗೆ ಅವರು ತೋರುತಿದ್ದ ಪಕ್ಷಪಾತವೂ ಫೆಡರಲ್ ಕೋರ್ಟಿನ ಮುಂದೆ ಬಂದುದುಂಟು. ಎಂಥ ಉಚ್ಚಾಧಿಕಾರಿಯಾಗಿದ್ದರೂ ದಾರಿ ತಪ್ಪಿ ನಡೆದರೆ ಮನೆಗೆ ಹೋಗತಕ್ಕವನೇ ಎಂಬುದನ್ನು ಮನದಂದು ಎಲ್ಲ ಸಣ್ಣದೊಡ್ಡ ಅಧಿಕಾರಿಗಳು ತಮ್ಮ ವರ್ತನೆಯನ್ನಿಡುವದು ಕ್ರಮಪ್ರಾಪ್ತವಾಗಿದೆ.



ಅಶಾಂತ ಮಲಯದಲ್ಲಿ ಭಾರತೀಯರ ಸ್ಥಿತಿಗತಿ

ಶೋಷಣಕ್ಕೆ ಇನ್ನು ಎಡೆಯಿಲ್ಲ— ಬ್ರಿಟಿಶ ಸತ್ತೆಯ ಕೊನೆಗಾಲ ಸಮೀಪಿಸಿದೆ— ಮಲಯದಲ್ಲಿ ಜಾಗ್ರತಿ

ಮಲಯದಲ್ಲಿ ನಮ್ಮ ಹಿತಸಂಬಂಧ ವಿಶೇಷವಾಗಿದೆ. ಸಿಂಗಾಪುರ ಸೇರಿ ಮಲಯದಲ್ಲಿ ೬ ಲಕ್ಷ ಮೇಲ್ಪಟ್ಟು ಹಿಂದೀಯರು ವಾಸಿಸುತ್ತಿದ್ದಾರೆ. ಇದಲ್ಲದೆ ಆರ್ಥಿಕ ಮತ್ತು ಸಂರಕ್ಷಣ ದೃಷ್ಟಿಯಿಂದಲೂ ಆ ದೇಶದೊಡನೆ ನಮ್ಮ ಸಂಬಂಧ ಗಾಢವಾಗಿದೆ. ಆದುದರಿಂದ ಅಲ್ಲಿ ನಡೆಯುವ ಘಟನೆಗಳ ಕಡೆ ನಾವು ಆಸ್ಥೆಯಿಂದ ನೋಡುವದು ಸ್ವಾಭಾವಿಕ.

ಅಶಾಂತಿಯ ತವರುಮನೆ

ಮಲಯವಿಂದು ಗೊಂದಲದ ಸ್ಥಿತಿಯಲ್ಲಿದೆ. ಚೀನ ಮತ್ತು ಬ್ರಹ್ಮದೇಶಗಳನ್ನು ಬಿಟ್ಟರೆ ಇಂದು ಪೂರ್ವದೇಶಗಳಲ್ಲಿ ಮಲಯದಷ್ಟು ಅರಾಜಕತೆಯಿರುವ ದೇಶ ಬೇರೊಂದಿಲ್ಲವೆನ್ನಬಹುದು. ಆಗ್ನೇಯ ಏಶಿಯದಲ್ಲಿ ಬ್ರಿಟಿಶರ ಅಂಕೆಯಲ್ಲಿ ಉಳಿದಿರುವ ಅವಶೇಷಗಳಲ್ಲಿ ಅದೇ ಅತಿ ದೊಡ್ಡ ಭೂಭಾಗ. ಆದರೂ ನಾಡಿ ಬಲ್ಲ ನಿರೀಕ್ಷಕರು ಅಲ್ಲಿಯೂ ಬ್ರಿಟಿಶ ಆಳಿಕೆಯ ಆಯುಷ್ಯ ಬಹಳಾದರೆ ಇನ್ನು ಹತ್ತು ವರ್ಷ ತಾಳೀತೆಂದು ಹೇಳುತ್ತಾರೆ. ಬ್ರಿಟಿಶ ಮುಖ್ಯಮಂತ್ರಿ ಅಟ್ಲೀಯವರು ಮೊನ್ನೆ "ಮಲಯವನ್ನು ಸ್ವ-ರಾಜ್ಯಕ್ಕೆ ಅರ್ಹವನ್ನಾಗಿ ತರಬೇತು ಮಾಡುವ ವರೆಗೆ ಅದರ ಮೇಲಿರುವ ತಮ್ಮ ಹೊಣೆಯನ್ನು ತೊರೆದು ಹೋಗುವದಿಲ್ಲ"ವೆಂದು ಗಂಭೀರವಾಗಿ ತಮ್ಮ ಸರಕಾರದ ಪರವಾಗಿ ಸಾರಿದ್ದರೂ ದೀರ್ಘಕಾಲ ಆ ನಾಡಿಗೆ ಅಂಟಿಕೊಳ್ಳುವ ಸಾಮರ್ಥ್ಯ ಬ್ರಿಟನ್ನಿನಲ್ಲಿಲ್ಲ.

ಸಿಂಗಾಪುರದಲ್ಲಿ ಎಲ್ಲವೂ ಸರಿಯಾಗಿದ್ದಂತೆ ಕಾಣುವದು. ಸೌಂದರ್ಯದ ನೆಲೆವೀಡಾದ ಈ ದ್ವೀಪಕದಲ್ಲಿ ವಸ್ತುಗಳು ಅಗ್ಗವಾಗಿಯೆ ದೊರೆಯುತ್ತವೆ, ಮನೋರಂಜನೆಯ ಸ್ಥಳಗಳು ಕಿಕ್ಕಿರಿದಿರುತ್ತವೆ, ಎಲ್ಲವೂ ಐಷಆರಾಮದಿಂದ ಸಾಗಿದೆ. ಅಲ್ಲಿ ಆಳುತಿರುವ ಬ್ರಿಟಿಶ ಅಧಿಕಾರಿಗಳು ಏಳೇ ವರ್ಷಗಳ ಕೆಳಗೆ ಜಪಾನಿಗಳಿಂದ ತಿಂದ ಒದೆಯ ನೋವನ್ನು ಪೂರ್ತಿಯಾಗಿ ಮರೆತುಬಿಟ್ಟಂತೆ ತೋರುತ್ತದೆ. ಅವರ ಬಗ್ಗೆ ಸ್ಥಳೀಯ ಜನತೆಯ ಭಯಭಕ್ತಿ ಇಳಿದು ಹೋಗಿದ್ದರೂ ಸ್ವತಃ ಅವರಂತೂ ತಾವು ದೇವತೆಗಳು, ಸ್ಥಳೀಯ ಜನರು ಪಶುಗಳೆಂಬ ಬುದ್ಧಿಯಿಂದಲೇ ವರ್ತಿಸುತಿದ್ದಾರೆ. ಬಿಳಿಯರ ಕ್ಲಬ್ಬುಗಳಲ್ಲಿ ಇತರರಿಗೆ ಪ್ರವೇಶ ದೊರೆಯುವದಿಲ್ಲ. ನಿಜವಾಗಿ ಈ ಜನರು ಇನ್ನೂ ೧೯೧೦ ನೆ ಇಸವಿಯಲ್ಲಿ ಇದ್ದಾರೆಂದು "ಹಿತವಾದ" ಪತ್ರಿಕೆಯ ಶ್ರೀ. ಎ. ಡಿ. ಮಣಿಯವರು ಪ್ರತ್ಯಕ್ಷ ದರ್ಶನದ ನಂತರ ವರದಿ ಮಾಡಿದ್ದಾರೆ.

ಸಿಂಗಾಪುರದಿಂದ ಹೊರಬಿದ್ದು ದ್ವೀಪಕಲ್ಪದಲ್ಲಿ ಸಂಚರಿಸಿದಾಗಲೇ ಪರಿಸ್ಥಿತಿಯ ಅನಿಶ್ಚಿತತೆಯ ಅರಿವಾಗುವದು. ಅಲ್ಲಿ ಬ್ರಿಟಿಶರ ಆಜ್ಞೆ ನಡೆಯದ ಎಷ್ಟೋ ಭಾಗಗಳಿವೆ. ಅಲ್ಲಿ ಕಾಯದೆ ಸುವ್ಯವಸ್ಥೆಗಳು ಅಪರೂಪವಾಗಿವೆ. ಮಲಯದ ಸಂಯುಕ್ತ ರಾಜ್ಯದ ರಾಜಧಾನಿಯಾದ ಕೌಲಾಲಂಪೂರಿನಲ್ಲಿ ಕೂಡ ರಾತ್ರಿ ಕಾಲದಲ್ಲಿ ಯಾರೂ ಏಕಾಕಿಯಾಗಿ ಓಡಾಡಲು ಧೈರ್ಯ ಪಡುವದಿಲ್ಲ. ದೂರದ ಪರ್ಲಿಸ್ ಪ್ರಾಂತದಲ್ಲಂತೂ ವಿತ್ತ ಜೀವಿತಗಳು ಅಸುರಕ್ಷಿತವಾಗಿಯೆ ಇರುವವು.

ಕಮ್ಯುನಿಜಮ್ಮಿನ ಬೆನ್ನೆಲುಬು

ಮಲಯದಲ್ಲಿ ಹಬ್ಬಿರುವ ಈ ಅರಾಜಕತೆಗೆ ಕಮ್ಯುನಿಸ್ಟರೇ ಮೂಲ ಕಾರಣ. ಅವರ ಪ್ರಾಬಲ್ಯ ಈಗ ಕೆಲ ಮಟ್ಟಿಗೆ ಕುಗ್ಗಿದ್ದರೂ ಒಳಗೊಳಗೆ ದೇಶವನ್ನು ಅಶಾಂತ ಸ್ಥಿತಿಯಲ್ಲಿಡಲು ಅವರು ಸಮರ್ಥರಾಗಿದ್ದಾರೆ. ಮಲಯದಲ್ಲಿ ಒಂದೂ ಸೇರಿದ ಚೀನೀಯರು ಕಮ್ಯುನಿಸ್ಟ ಚಟುವಟಿಕೆಗಳ ಬೆನ್ನೆಲುಬು. ಅಲ್ಲಿನ ೫೦ ಲಕ್ಷ ಜನಸಂಖ್ಯೆಯಲ್ಲಿ ಚೀನೀಯರು ೧೮ ಲಕ್ಷ ಇದ್ದಾರೆ. ಅಂದಬಳಿಕ ಕಮ್ಯುನಿಜಂಗೆ ಅಲ್ಲಿರುವ ಶಕ್ತಿಯನ್ನು ಕಂಡು ಯಾರೂ ಅಚ್ಚರಿಪಡಬೇಕಾಗಿಲ್ಲ. [illegible] ಎಲ್ಲ ಬಗೆಯ [illegible] ಚೀನೀಯರೂ ಅಲ್ಲಿ ಬಂದು ನೆಲಸಿದ್ದಾರೆ. ಇನ್ನೂ ನೆಲಸುತ್ತಿದ್ದಾರೆ. ಸಿಂಗಾಪುರದಲ್ಲಂತೂ ಅವರೇ ಬಹುಸಂಖ್ಯರು. ಚೀನೀಯರು ಎಲ್ಲಿದ್ದರೂ ಚೀನೀಯರೆ. ಮೂಲ ದೇಶಕ್ಕೇ ಅವರ ಗೌರವ ಹೊರತು ಇರುವ ದೇಶಕ್ಕಲ್ಲ. ಆದ್ದರಿಂದ ಚೀನದಲ್ಲಿ ಕಮ್ಯುನಿಸ್ಟರ ಉಚ್ಛ್ರಾಯವಿರುವಾಗ ಮಲಯದಲ್ಲಿಯೂ ಅದರ ಗಾಳಿ ಬೀಸಿದ್ದು ಸ್ವಾಭಾವಿಕ.

ಯುದ್ಧದಿಂದುಂಟಾದ ಪರಿಸ್ಥಿತಿ ಕಮ್ಯುನಿಸ್ಟರಿಗೆ ತುಂಬ ನೆರವಾಯಿತು. ಮೊದಲೇ ಗುಪ್ತವಾಗಿ ಮಲಯದಲ್ಲಿ ಸ್ಥಾಪಿಸಲ್ಪಟ್ಟಿದ್ದ ಕಮ್ಯುನಿಸ್ಟ ಪಕ್ಷ ಯುದ್ಧಕಾಲದಲ್ಲಿ ಕೂಟಯುದ್ಧ ದಲಗಳನ್ನು ನಿರ್ಮಿಸಿಕೊಂಡು ಜಪಾನಿಗಳ ವಿರುದ್ಧ ಚಟುವಟಿಕೆ ನಡೆಸಿತು. ಅವರಿಗೆ ಕಮ್ಯುನಿಸ್ಟರು ಅಷ್ಟಿಷ್ಟು ತೊಂದರೆ ಕೊಡುತಿದ್ದರೂ ಪ್ರಬಲವಾದ ಹೋರಾಟವನ್ನು ಸಂಘಟಿಸಲು ಇನ್ನೂ ಸಮರ್ಥರಾಗುವ ಮೊದಲೇ ಅಕಸ್ಮಾತ್ತಾಗಿ ಜಪಾನದ ಪತನವಾಯಿತು. ಜಪಾನದ ಪತನಕ್ಕೂ ಬ್ರಿಟಿಶರು ತಿರುಗಿ ಬಂದು ಮಲಯದಲ್ಲಿ ಸತ್ತೆಯನ್ನು ಸ್ಥಾಪಿಸುವದಕ್ಕೂ ನಡುವಣ ಕಾಲಾವಧಿಯೇ ಕಮ್ಯುನಿಸ್ಟರ ಶಕ್ತಿಯ ಅಪಾರ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿತು. ಅವರು ತಾನೇ ಜಪಾನಿಗಳನ್ನು ಸೋಲಿಸಿದವರೆಂದು ಮೆರೆದಾಡಿ ತಮ್ಮ ಪ್ರಸ್ಥವನ್ನು ಹೆಚ್ಚಿಸಿಕೊಂಡದಲ್ಲದೆ, ಶಸ್ತ್ರಾಸ್ತ್ರಗಳನ್ನೂ ಕೂಡಹಾಕಿ ಬ್ರಿಟಿಶರು ಮರಳಿದಾಗ ಅವರನ್ನು ಉಚ್ಚಾಟನೆ ಮಾಡಲು ಹಂಚಿಕೆ ಹಾಕಿದರು. ಲಾರ್ಡ ಲುಯಿ ಮೌಂಟಬ್ಯಾಟನ್ನರು ಶಸ್ತ್ರಾಸ್ತ್ರಗಳನ್ನು ತಂದೊಪ್ಪಿಸಬೇಕೆಂದು ಕೂಟಸೈನಿಕರಿಗೆ ವಿಧಿಸಿದಾಗ ಬಹಳ ಶಸ್ತ್ರಾಸ್ತ್ರಗಳು ಹೊರಬರಲಿಲ್ಲ. ಗುಡ್ಡಗಾಡುಗಳಿಂದ ಕಡಿದಾಗಿರುವ ಮಲಯದ ನೈಸರ್ಗಿಕ ಸ್ವರೂಪವೂ ಕಮ್ಯುನಿಸ್ಟರಿಗೆ ಶಸ್ತ್ರಾಸ್ತ್ರಗಳನ್ನು ಬಚ್ಚಿಡಲು ತುಂಬ ಅನುಕೂಲವಾಗಿತ್ತು. ಮಿಲಿಟರಿ ಆಡಳಿತೆಯನ್ನು ಅವಸರದಿಂದ ಕೊನೆಗೊಳಿಸಿದ್ದರಿಂದ ಬಚ್ಚಿಟ್ಟ ಶಸ್ತ್ರಾಸ್ತ್ರಗಳನ್ನು ಹೊರಗೆಳೆಯಲಿಕ್ಕೂ ಸಾಕಷ್ಟು ಸಮಯ ಸಿಗಲಿಲ್ಲ. ಸಮಯ ನೋಡಿ ಕಮ್ಯುನಿಸ್ಟರು ಬ್ರಿಟಿಶರನ್ನು ಹೊರದಬ್ಬುವ ಧೈರ್ಯದಿಂದ ಭಯಂಕರ ಗಲಭೆಗಳನ್ನು ಪ್ರಾರಂಭಿಸಿದರು. ಈಗ ಅವರು ಬೆಳ್ಳಂಬೆಳಕಿನಲ್ಲಿ ಕೆಲಸ ಮಾಡದಂತೆ ತಡೆಯಲು ಬ್ರಿಟಿಶ ಮತ್ತು ಗುರ್ಖಾ ಸೈನ್ಯಕ್ಕೆ ಸಾಧ್ಯವಾಗಿದ್ದರೂ ಅವರ ಕೂಟಕ್ರಮಗಳನ್ನು ಹತ್ತಿಕ್ಕುವದು ಇನ್ನೂ ಸಾಧ್ಯವಾಗಿಲ್ಲ. ಕಮ್ಯುನಿಸ್ಟರ ನಿಶ್ಚಯ ಕಾರ್ಯಕ್ಷಮತೆಯನ್ನು ನೋಡಿದರೆ ಬೇಗನೆ ಮಲಯದಲ್ಲಿ ಶಾಂತ ವಾತಾವರಣ ಕಲ್ಪಿತವಾಗುವಂತೆ ತೋರುವದೂ ಇಲ್ಲ.

ಎಚ್ಚೆತ್ತ ಮಲಯಿಗಳು

ಕಮ್ಯುನಿಸ್ಟರ ಸಂಖ್ಯೆ ಮತ್ತು ಅವರಿಗಿರುವ ಬೆಂಬಲ ಮಲಯದ ಚೀನಿಯರಲ್ಲೇ ಹೆಚ್ಚೆಂಬಲ್ಲಿ ಸಂಶಯವಿಲ್ಲ. ಮಲಯದ ಮೂಲ ನಿವಾಸಿಗಳಾದ ಮಲಯಿಗಳು ಬಹುತರವಾಗಿ ಮುಸ್ಲಿಮರು. ತುಂಬ ವ್ಯಕ್ತಿವಾದಿಗಳಾಗಿರುವ ಅವರು ಕಮ್ಯುನಿಝಮ್ಮಿಗೆ ಬಲಿಬೀಳುವ ಸಂಭವವಿಲ್ಲ. ಮೇಲಾಗಿ ತಮ್ಮನ್ನು ಎಲ್ಲ ವಿಧದಿಂದ ಶೋಷಿಸುವ ಚೀನೀಯರನ್ನು ಮಲಯಿಗಳು ದ್ವೇಷಿಸುತ್ತಾರೆ. ಆದರೂ ಅವರು ಪ್ರತ್ಯಕ್ಷವಾಗಿ ಕಮ್ಯುನಿಝಮ್ಮನ್ನು ಪ್ರತಿರೋಧಿಸಲೂ ಸಿದ್ಧರಿಲ್ಲ. ಈಚೆಗೆ, ಅಂದರೆ ಜಪಾನಿ ಆಕ್ರಮಣದ ನಂತರದ ಘಟನೆಗಳಿಂದ ಅವರಲ್ಲಿ ರಾಷ್ಟ್ರೀಯ ವೃತ್ತಿ ಜಾಗ್ರತವಾಗಿದ್ದರೂ ಅವರಿನ್ನೂ ಅಲಸಿಗಳಾಗಿಯೆ ಇದ್ದಾರೆ. ಮೇಲಾಗಿ ಮಲಯದ ಸುಲ್ತಾನರಲ್ಲಿ ಅವರಿಗೆ ತುಂಬ ಭಕ್ತಿ. ಈ ಸುಲ್ತಾನರನ್ನು ಸಾಕಷ್ಟು ಯೋಗ್ಯವಾಗಿ [illegible] ಕೊಂಡಿಲ್ಲವೆಂದು ಬ್ರಿಟಿಶರ ಮೇಲೆ ಅವರ [illegible]ವುಂಟು. [illegible] ಪಕ್ಷಗಳ [illegible] ನಂತರವೂ ಮಲಯದಲ್ಲಿ ಬ್ರಿಟಿಶ ಪಕ್ಷಪಾತಿಗಳಾದ ಸ್ಥಾನಿಕ ಜನರ ಗುಂಪು ಇಲ್ಲದಿರುವದು ಬ್ರಿಟಿಶರ ಬಗ್ಗೆ ಮಲಯಿಗಳಿಗಿರುವ ಅಭಿಪ್ರಾಯಕ್ಕೆ ಒರೆಗಲ್ಲಾಗಬಹುದು. ಈಗೀಗ ಬ್ರಿಟಿಶರು ಮಲಯಿಗಳ ಧಾರ್ಮಿಕ ಭಾವನೆಯನ್ನು ಜಾಗ್ರತಗೊಳಿಸಿ ಅವರನ್ನು ತಮ್ಮ ಪಕ್ಷಪಾತಿಗಳಾಗಿ ಕಮ್ಯುನಿಸ್ಟರ ವಿರುದ್ಧ ಕಟ್ಟಲು ಪ್ರಯತ್ನಿಸುತಿದ್ದಾರೆ. ಪಾಕಿಸ್ತಾನದಿಂದ ಈ ಬಗ್ಗೆ ಸಹಾಯ ಪಡೆಯಲು ಕೂಡ ಅವರು ಪ್ರಯತ್ನಿಸುವ ಲಕ್ಷಣಗಳಿವೆ. ಪಾಕಿಸ್ತಾನವಾದರೂ ತನ್ನವೇ ಕಾರಣಗಳಿಗಾಗಿ ಅದರಲ್ಲಿ ಸಂತೋಷದಿಂದ ನೆರವಾಗಬಹುದು. ಶ್ರೀ

ಲೇ:- "ನಿರೀಕ್ಷಕ"

ಡಟ್ಟೊ ಅಂಗರೆಂಬವರು ಮಲಯಿಗಳಲ್ಲಿ ರಾಜಕೀಯ ಜಾಗ್ರತಿಯನ್ನುಂಟುಮಾಡಿ ಬ್ರಿಟಿಶ ಸಾಮ್ರಾಜ್ಯದ ಅಂಕಿತದಲ್ಲಿ ವಸಾಹತು ಸ್ವರಾಜ್ಯವನ್ನು ಸಾಧಿಸುವ ಉದ್ದೇಶದಿಂದ ಅಖಿಲ ಮಲಯ ಕಾಂಗ್ರೆಸ್ಸನ್ನು ಹಿಂದೀ ಕಾಂಗ್ರೆಸ್ಸಿನ ಮಾದರಿಯ ಮೇಲೆ ಸಂಘಟಿಸತೊಡಗಿದ್ದಾರೆ.

ಹೀಗೆ ಒಣ ಪ್ರತಿಷ್ಠೆಯ ಮಬ್ಬಿನಲ್ಲಿರುವ ಬ್ರಿಟಿಶ ಆಡಳಿತೆಗಾರರು, ಮಲಯಿಗಳನ್ನು ಶೋಷಿಸಿ, ಅವರ ಮಾತೃಭೂಮಿಯಲ್ಲಿ ಬಂದು ಮುಕುರಿ, ಅವರ ದ್ವೇಷಕ್ಕೆ ಪಾತ್ರರಾಗಿ ಕಮ್ಯುನಿಜಂನ ಹಸ್ತಕರಾಗಿರುವ ಚೀನಿಯರು, ತಮ್ಮ ಮಾತೃಭೂಮಿಯಲ್ಲೆ ತಾವು ದುರ್ಬಲರಾಗಿರುವ ೨೩ ಲಕ್ಷ ಮಲಯಿಗಳ ನಡುವೆ ಇರುವ ೬೫೦೦೦೦ ಹಿಂದೀಯರ ಸ್ಥಿತಿಗತಿಗಳೇನಿವೆಯೆಂಬುದು ಶ್ರೀ ಮಣಿಯವರು ತಮ್ಮ "ಹಿತವಾದ" ಲೇಖದಲ್ಲಿ ವಿವರಿಸಿದ್ದಾರೆ.

ಹಿಂದೀಯರ ಭೀತಿ

೧೯೪೫ ರಲ್ಲಿ ಜಪಾನದ ಪತನಾನಂತರ ಸುಭಾಷಚಂದ್ರರ ಆಜಾದ ಹಿಂದ ಸೇನೆಯೊಡನೆ ಸಹಕರಿಸಿದ ಹಿಂದೀಯರ ಮೇಲೆ ರಾಜದ್ರೋಹದ ಕಟ್ಲೆಗಳು ಹೂಡಲ್ಪಟ್ಟಾಗ ಕೂಡ ಮಲಯದಲ್ಲಿದ್ದ ಹಿಂದೀಯರ ಹುರುಪು ತಗ್ಗಿದ್ದಿಲ್ಲ. ಆದರೆ ಇಂದು ಅವರು ತುಂಬ ಭಯಗ್ರಸ್ತರಾಗಿದ್ದಾರೆ. ದಕ್ಷಿಣ ಭಾರತದಿಂದ ಬಂದು ಬಡ್ಡಿ ವ್ಯವಹಾರದಿಂದ ಕೋಟ್ಯಂತರ ರೂಪಾಯಿಗಳನ್ನು ಗಳಿಸಿದ ಚೆಟ್ಟಿಯಾರರೇ ಮಲಯದಲ್ಲಿ ಹಿಂದೀ [illegible] ಸಾಧನವಾಗಿದ್ದಾರೆಂದು ನಾವು ನೆನಪಿನಲ್ಲಿಡಬೇಕಾಗಿದೆ. ಚೆಟ್ಟಿಯಾರರು ಈಗ ಗಾಬರಿಯಾಗಿದ್ದಾರೆ. ಬ್ರಹ್ಮದೇಶದಲ್ಲಿ ತಮ್ಮವರ ಭೂಮಿಕಾಣಿಗಳನ್ನು ಸರಕಾರ ವಶಪಡಿಸಿಕೊಂಡದ್ದನ್ನು ನೋಡಿ ಅವರು ಭಾರತ ಸರಕಾರದ ದೌರ್ಬಲ್ಯವನ್ನು ದೂರುತ್ತಾರೆ. ಹೀಗಾಗಿ ಅವರು ಹಿಂದೀಯರನ್ನು "ಮರಳಿ ಭಾರತಕ್ಕೆ" ಹೊರಡುವಂತೆ ಪ್ರೇರಿಸುವ ಚಳವಳಿ ಹೂಡಿದ್ದಾರೆ.

ಆದರೆ ಮಲಯದಲ್ಲಿರುವ ಭಾರತೀಯರು ಗಾಬರಿಯಾಗಲು ಕಾರಣವಿಲ್ಲ. ನಿಜ, ಸ್ಥಾನಿಕ ಜನರನ್ನು ನಿರ್ದಯವಾಗಿ ಶೋಷಿಸಲು ಇನ್ನು ಚೆಟ್ಟಿಯಾರರಿಗೆ ಅವಕಾಶವಿಲ್ಲ. ನೂರಕ್ಕೆ ಹದಿನೆಂಟರಿಂದ ಮೂವತ್ತಾರರ ವರೆಗಿನ ಬಡ್ಡಿಯೂ ಅವರಿಗೆ ಇನ್ನು ದೊರೆಯಲಾರದು. ಶೋಷಕ ಜನಕ್ಕೆ ಸಂರಕ್ಷಣೆ ಕೊಡಲು ಹಿಂದೀ ಸರಕಾರಕ್ಕೆ ಅಸಾಧ್ಯವೂ ಆಗಬಹುದು. ಆದರೆ ಭಾರತೀಯರ ವ್ಯಾಪಾರ ವ್ಯವಹಾರಗಳಿಗೆ ಇಂದಿಗೂ ಇನ್ನು ಮುಂದೆಯೂ ಮಲಯದಲ್ಲಿ ತುಂಬ ಅವಕಾಶವಿದೆ. ಆಯಾತ ನಿರ್ಯಾತ ವ್ಯಾಪಾರದಲ್ಲಿಯೂ ಅವರು ಲಾಭದಾಯಕವಾಗಿ ಭಾಗ ವಹಿಸಬಹುದು.

ಜಪಾನಿ ಆಕ್ರಮಣ ಕಾಲದಲ್ಲಿ ಅಲ್ಲಿ ಉಳಿದು ಹೋದ ಹಿಂದೀಯರು ತಮ್ಮ ಎಂದಿನ ವ್ಯವಹಾರದಲ್ಲಿ ತೊಡಗಿದ್ದಾಗ ಕೇಳಬಿಟ್ಟ ಕೋಟ್ಯಂತರ ಡಾಲರುಗಳ ಜಪಾನಿ ನೋಟುಗಳೂ ಆ ನೋಟುಗಳ ರೂಪದಲ್ಲಿ ನಡೆಸಿದ ವ್ಯವಹಾರಗಳೂ ಬ್ರಿಟಿಶರು ಮರಳಿದೊಡನೆ ರದ್ದುಗೊಳಿಸಲ್ಪಟ್ಟದ್ದರಿಂದ ಅನೇಕ ಹಿಂದೀ ಕುಟುಂಬಗಳು ಸರ್ವನಾಶವನ್ನೆದುರಿಸಬೇಕಾಯಿತು. ಇದರಿಂದುಂಟಾದ ದುಃಸ್ಥಿತಿಯೇ "ಮರಳಿ ಭಾರತಕ್ಕೆ" ಚಳವಳಿಗೆ ಕಾರಣವಾಗಿದೆ. ಆದರೆ ಇವರಿಂದ ಭೀತರಾಗಿ ಹಿಂದೀಯರು ಸ್ವದೇಶಕ್ಕೆ ಮರಳುವದು ಜಾಣತನವಲ್ಲ. ಇದೊಂದು ದೈವೀ ಪ್ರಕೋಪವೆಂದು ಬಗೆದು ಭವಿಷ್ಯತ್ತಿನ ಮೇಲೆ ಕಣ್ಣಿಟ್ಟು ಅವರು ಮುಂದೆ ಸಾಗಬೇಕು. ಮಾತೃಭೂಮಿಯಲ್ಲಾದರೂ ಅವರಿಗೆ ಅಂಥ ಸ್ವರ್ಗ ಕಾದಿಲ್ಲ. ಇಲ್ಲಿಯೂ ಶೋಷಕರ ದಿನಗಳು ಮುಗಿದಿವೆ. ಇನ್ನು ಕಮ್ಯುನಿಜಂನ ಭಯ ಮಲಯದಷ್ಟೇ ಭಾರತಕ್ಕೂ ಇದೆಯಲ್ಲವೆ?

"ನೇತಾಜಿ"ಯ ವರದಾನ

ದುರ್ಭಾಗ್ಯದಿಂದ ಯುದ್ಧದ ಫಲವಾಗಿ ಭಾರತೀಯ ಕುಟುಂಬಗಳು ಕೆಲವು ಅನರ್ಥಗಳನ್ನೆದುರಿಸಬೇಕಾಗಿ ಬಂದಿದ್ದರೂ ಅದರಿಂದ ಒಂದು ಸುಪರಿಣಾಮವೂ ಆಗಿದೆ. ಭಾರತೀಯರ ಬಗ್ಗೆ ಹಿಂದೆ ಮಲಯಿಗಳ ಭಾವನೆಗಳೇನೇ ಇದ್ದಿರಬಹುದಾದರೂ ಸುಭಾಷಬಾಬುರವರ ಜೋಶದ ಚಟುವಟಿಕೆಗಳ ಫಲವಾಗಿ ಹಿಂದೀಯರ ಬಗ್ಗೆ ಇಂದು ಎಲ್ಲ ವರ್ಗಗಳೂ ಆದರ ತಳೆದಿವೆ. ಅವರ ಭಾಷಣಗಳಿಂದ ಮಲಯದ ಮಲಯಿಗಳೂ ಚೀನೀಯರೂ ಹೃದಯ ತುಂಬಿಬಂದು ಅತ್ತುಬಿಟ್ಟಿದ್ದರಂತೆ, ಅವರಿಂದು ಮಲಯದಲ್ಲಿ ಬೋಸರೆಂದು ಪ್ರಸಿದ್ಧರಾಗದೆ "ನೇತಾಜಿ"ಯೆಂಬ ಹೆಸರಿನಲ್ಲೇ ಪ್ರಸಿದ್ಧರಾಗಿದ್ದಾರೆ. ನೇತಾಜಿಯ ಬೆಂಬತ್ತಿ ಹಿಂದೀಯರು ಮಾಡಿದ ಅಪ್ರತಿಮ ತ್ಯಾಗವನ್ನು ಕಣ್ಣಾರೆ ಕಂಡ ಮಲಯಿಗಳಲ್ಲಿ ಹಿಂದೀಯರ ಬಗ್ಗೆ ಉನ್ನತ ಭಾವನೆಯುಂಟಾಗಿದೆ. ಇಂಥ ಅನುಕೂಲ ವಾತಾವರಣವನ್ನು ತುಚ್ಛೀಕರಿಸಿ ಸಂಶಯಾಸ್ಪದ ಭವಿಷ್ಯತ್ತನ್ನೆದುರಿಸಲು ಭಾರತಕ್ಕೆ ಮರಳುವದೊಳಿತಲ್ಲ.

ಭಾರತ ಸರಕಾರವಾದರೂ ಈ ಪ್ರವಾಸಿ ಭಾರತೀಯರಿಗೆ ಹಲ ಚಿಕ್ಕಪುಟ್ಟ [illegible]ಗಳನ್ನು ಮಾಡಬಲ್ಲದು. ಈಗಾಗಲೆ ಆಯಾತ ನಿರ್ಯಾತ ವ್ಯಾಪಾರದಲ್ಲಿ ಹಿಂದೀಯರು ಹಿರಿಯ ಭಾಗವನ್ನು ವಹಿಸಿದ್ದಾರೆ. ಅಲ್ಲಿಗೆ ಕಳಿಸುವ ಹಿಂದೀ [illegible] ಪ್ರಮಾಣವನ್ನು ಹೆಚ್ಚಿಸುವದು ಅಪೇಕ್ಷಣೀಯ. ಭಾರತದಲ್ಲಿ [illegible] ಕೊರತೆ ವಿಶೇಷವಾಗಿರುವದು ನಿಜ. ಆದರೆ

(೧೩ ನೆಯ ಪುಟಕ್ಕೆ)

ವಿಚಾರದ್ವಂದ್ವ

ಈ ತಲೆಬರಹದ ಕೆಳಗೆ ಜನಾಭಿಪ್ರಾಯವನ್ನು ಪ್ರಕಟಿಸಬೇಕೆಂದಿದ್ದೇವೆ. ಕೇವಲ ಸ್ಥಾನಿಕ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

*

ನೌಕರಶಾಹಿಯ ಪ್ರಾಬಲ್ಯ

ಸುದ್ದಿ ಮಂತ್ರಿ ಶ್ರೀ ದಿವಾಕರರು ಕಳೆದ ವಾರ ಹುಬ್ಬಳ್ಳಿಯಲ್ಲಿ ಕಾಂಜರಪೋಳ ಸಂಸ್ಥೆಗೆ ದರ್ಶನವಿತ್ತಾಗ ನೌಕರಶಾಹಿಯ ಪ್ರಾಬಲ್ಯದ ಗಂಡಾಂತರವನ್ನು ಕುರಿತು ಕೊಟ್ಟ ಎಚ್ಚರಿಕೆ ಸಕಾಲಿಕವಾಗಿದೆ. ಅದರಲ್ಲಿಯೂ ಕೆಲ ತಿಂಗಳ ಮಂತ್ರಿತ್ವದ ಅನುಭವದ ನಂತರ ಅವರಿಂದ ಬಂದ ಈ ಮಾತುಗಳಿಗೆ ಇನ್ನಷ್ಟು ಬೆಲೆಯಿದೆಯೆನ್ನಬೇಕು. ಪ್ರತಿಯೊಂದಕ್ಕೂ ಸರಕಾರದ ಮುಖ ನೋಡುತ್ತ ಕೂಡುವ ಜನರ ಪ್ರವೃತ್ತಿಯಿಂದ ಸರಕಾರದ ಹೊಣೆಗಳು ಬೆಳೆದು ಆ ಹೊಣೆಗಳನ್ನು ನಿರ್ವಹಿಸಲು ಸರಕಾರದವರು ತಮ್ಮ ಕೈಕೆಳಗಿನ ನೌಕರರ ಸಂಖ್ಯೆಯನ್ನು ಬೆಳೆಸಬೇಕಾಗುತ್ತದೆ. ಹಾಗಾದರೆ ರಾಷ್ಟ್ರದ ಮುಖ್ಯ ವ್ಯವಹಾರಗಳೆಲ್ಲವೂ ನೌಕರಶಾಹಿಯೆಂಬ ವರ್ಗದ ಕೈಯಲ್ಲಿ ಸಿಕ್ಕು ಆ ವರ್ಗದ ಸರ್ವಾಧಿಕಾರವೇ ಸ್ಥಾಪಿತವಾದೀತು. ಇಂಥ ಸರ್ವಾಧಿಕಾರದ ಪರಿಣಾಮವು ಶ್ರೀಮಂತರ ಸರ್ವಾಧಿಕಾರಕ್ಕಿಂತಲೂ ಭಯಾನಕವಾಗದಿರದು. ಏಕೆಂದರೆ ಶ್ರೀಮಂತರ ಸರ್ವಾಧಿಕಾರದಲ್ಲಿ—ಅರ್ಥಾತ್ ಬಂಡವಳಶಾಹಿಯಲ್ಲಿ,-ಕಾರ್ಯಕ್ಷಮತೆಯಾದರೂ ಕಂಡುಬರುತ್ತದೆ. ಆದರೆ ನೌಕರಶಾಹಿಯ ಮುದಗಜಗಮನದ ವರ್ಣನೆಯೇ ಅವಶ್ಯವಿಲ್ಲ. ಶ್ರೀ ದಿವಾಕರರು ಮೇಲೆ ಹೇಳಿದ ಎಚ್ಚರಿಕೆ ಕೊಟ್ಟ ಕೆಲ ದಿನಗಳಲ್ಲೇ Illustrated Weekly of India ಪತ್ರಿಕೆಯಲ್ಲಿ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಎಮರಿ ಬಾರ್ಕ್ಸರ ಒಂದು ಮಹತ್ವದ ಲೇಖ ಪ್ರಕಟವಾಗಿದೆ ನೌಕರಶಾಹಿಯ ಬೆಳವಣಿಗೆಯ ಗಂಡಾಂತರದ ಮನವರಿಕೆಯಾಗಬೇಕಾಗಿದ್ದರೆ ಆ ಲೇಖದಲ್ಲಿ ಉಕ್ತವಾದ ಅಂಕಿಸಂಖ್ಯೆಗಳ ಮೇಲೊಮ್ಮೆ ಕಣ್ಣು ಹಾಯಿಸಿದರೆ ಸಾಕು.

ಭಾರತದಲ್ಲಿ ೧೯೩೮-೩೯ ರಲ್ಲಿ ಸೈನ್ಯೇತರ ಸರಕಾರಿ ವೆಚ್ಚ ೨೯ ಕೋಟಿಯಿತ್ತು. ಅದು ೧೯೪೫—೪೬ ರಲ್ಲಿ ೧೨೧ ಕೋಟಿಗೇರಿದ್ದಲ್ಲದೆ ೧೯೪೮—೪೯ ರಲ್ಲಿ ೧೮೪ ಕೋಟಿಗೇರುವಂತೆ ಕಾಣುತ್ತದೆ. ಕೇಂದ್ರ ಸರಕಾರದಲ್ಲಿದ್ದ ೮ ಮಂತ್ರಿ ಶಾಖೆಗಳು ೧೮ ಕ್ಕೇರಿದ್ದು ಕೇಂದ್ರ ನೌಕರಶಾಹಿಯ ಜನಸಂಖ್ಯೆ ೮೨,೦೦೦ ದಿಂದ ೨,೬೫,೦೦೦ ಕ್ಕೇರಿದೆ. ಇನ್ನು ಪ್ರಾಂತಿಕ ನೌಕರರು ಬೇರೆಯೆ.

ಆದರೆ ಇದು ಭಾರತಕ್ಕೊಂದಕ್ಕೆ ಮಾತ್ರ ಅಂಟಿದ ರೋಗವಲ್ಲ. ನಿಜವಾಗಿ ಇತರ "ಮುಂದುವರಿದ" ದೇಶಗಳಿಗಿಂತ ಭಾರತ ಈ ವಿಷಯದಲ್ಲಿ ಇನ್ನೂ ವಾಸಿಯೆನ್ನಬೇಕು. ಅದೇ ಅವಧಿಯಲ್ಲಿ ಬ್ರಿಟನ್ನಿನ ನೌಕರಶಾಹಿ ೩,೦೦,೦೦೦ ದಿಂದ ೭,೧೧,೦೦೦ ಕ್ಕೂ ಅಸ್ಟ್ರೇಲಿಯದ್ದು ೨,೨೮,೦೦೦ ದಿಂದ ೬,೦೦,೦೦೦ ಕ್ಕೂ ಅಮೇರಿಕೆಯದು ೫,೮೦,೫,೦೦೦ ದಿಂದ ೧೮,೫೯,೦೦೦ ಕ್ಕೂ ಫ್ರಾನ್ಸಿನದು ೭,೮೫,೦೦೦ ದಿಂದ ೧೬,೨೨,೦೦೦ ಕ್ಕೂ ಏರಿದ್ದನ್ನು ನೋಡುತ್ತೇವೆ. ಫ್ರಾನ್ಸಿನ ಜನಸಂಖ್ಯೆ ಭಾರತದ್ದರ ಅಷ್ಟಾಂಶವೂ ಇಲ್ಲವೆಂದು ಗಮನಿಸಿದರೆ ಈ ಅದ್ಭುತ ಬೆಳವಣಿಗೆಯ ಕಲ್ಪನೆ ಬರಬಹುದು.

ಸರಕಾರಿ ನೌಕರಿಗೆ ಜನರು ಮುಗಿಬೀಳಲು ಕಾರಣವೇನೆಂದರೆ ಅದು ಆಲಸಿಗರಿಗೆ ಅಧೀರರಿಗೆ ಆದರ್ಶ ವಿಹಾರಭೂಮಿಯಾಗಿರುವದು. ಅದರಲ್ಲಿ ಅತ್ಯುಚ್ಚಶ್ರೇಣಿಯ ಅಧಿಕಾರಿಗಳಲ್ಲದೆ ಉಳಿದವರಾರೂ ಯಾವ ನಿರ್ಣಯವನ್ನೂ ಮಾಡಬೇಕಾಗಿಲ್ಲ. ಸ್ವತಂತ್ರ ಉದ್ಯೋಗದಲ್ಲಿ ಅಥವಾ ಖಾಸಗಿ ನೌಕರಿಯಲ್ಲಿ ಪ್ರಸಕ್ತರಾದವರು ತಮ್ಮ ಕೃತಿಗಳ ಲಾಭಾಲಾಭಗಳನ್ನು ಅನುಭವಿಸಲೇಬೇಕಾಗುವದು. ಆದರೆ ನೌಕರಶಾಹಿಯಲ್ಲಿ ಅಲಾಭಕ್ಕೆ ಹೊಣೆಯಾಗುವ ಪ್ರಸಂಗ ಯಾರಿಗೂ ಬರುವದಿಲ್ಲ. ಕೆಳ ತರಗತಿಗಳ ನೌಕರರು ತಮಗೆ ದೊರೆತ ಮಾಹಿತಿಯನ್ನು ಮೇಲಿನ ಅಧಿಕಾರಿಗಳಿಗೆ ಸಾಗಿಸಿಬಿಟ್ಟು ಸಗ್ಗನೆ ಕೂಡುವರು. ಮೇಲಿನವರು ಅವಶ್ಯ ಮಾಹಿತಿಗಳು ಪೂರ್ತಿಯಾಗಿ ಕೈಸೇರಿದಲ್ಲದೆ ನಿರ್ಣಯ ಮಾಡಲು ಧೈರ್ಯ ಮಾಡಲೊಲ್ಲರು. ಹೀಗೆ ಯಾರಿಗೂ ಸ್ವಂತ ಹೊಣೆಯಿಂದ ನಿರ್ಣಯ ಮಾಡುವ ಪ್ರಸಂಗವೇ ಬರುವದಿಲ್ಲ. ಮಾಡಿದ ನಿರ್ಣಯಗಳ ಫಲ ನೇರ್ಪೇ ಆಗಲಿ, ಅದು ಅವರ ಸ್ವಂತಜೇಬುಗಳ ಮೇಲೆ ಪರಿಣಾಮ ಮಾಡುವದಿಲ್ಲ. ಅವರ ಸಂಬಳ ಹೇಗಿದ್ದರೂ ಕೈಗೆ ಬಂದೇ ಬರುವದು. ನಿಶ್ಚಿತ ಪ್ರಕಾರದಲ್ಲಿ ಬಢತಿಗಳೂ ದೊರೆಯುವವು. ಆದರೆ ಅವರ ಮದಗಜ ಗಮನದ ಫಲವಾಗಿ ಅದು ಯಾವುದೊಂದು ಪ್ರಶ್ನೆಯನ್ನು ತೀರ್ಮಾನಿಸುವಷ್ಟರಲ್ಲಿ ಆ ಪ್ರಶ್ನೆಯ ಸ್ವರೂಪವೇ ಬದಲಾಗಿರುತ್ತದೆ.

ನೌಕರಶಾಹಿ ತನ್ನಿಂದ ತಾನೇ ಅಭಿವೃದ್ಧಿ ಹೊಂದುತ್ತದೆ. ಹಳೆಯ ವ್ಯವಸ್ಥೆಯಲ್ಲಿದ್ದ ಲೋಪದೋಷಗಳನ್ನು ಕಂಡುಹಿಡಿದು ಅವನ್ನು ನಿವಾರಿಸಲು ಹೊಸ ಉಪಾಯಗಳನ್ನು ಕಲ್ಪಿಸಿ ಆ ಉಪಾಯಗಳನ್ನು ಅಮಲಿಗೆ ತರಲು ಹೊಸ ನೌಕರರ ನೇಮಕಕ್ಕೆ ಆಸ್ಪದ ಮಾಡಿಕೊಡುವದು ಅದರ ನಿತ್ಯರೂಢಿ ಇದೆಲ್ಲದರ ವೆಚ್ಚವನ್ನು ಜನತೆಯೆ ಹೊರಬೇಕು.

ಆದರೆ ಆಲಸ್ಯ, ಮಾಂದ್ಯ, ಧನವ್ಯಯಗಳಷ್ಟೇ ನೌಕರಶಾಹಿಯ ಗಂಡಾಂತರಗಳಲ್ಲ. ದೇಶದ ಹಣೆಬರಹವನ್ನು ಕೂಡ ಅದು ಬದಲು ಮಾಡುವ ಭಯವುಂಟು. ಸಾರ್ವಜನಿಕ ಜೀವನದ ಬಹುಭಾಗದ ವ್ಯವಸ್ಥೆ ಸರಕಾರದ ಕೈಯಲ್ಲಿರುವಾಗ ನೌಕರಶಾಹಿ ಬೆದರಿಕೆಹಾಕಿ ದೇಶಕ್ಕೆ ಹಾನಿಯಾದರೂ ಲೆಕ್ಕಿಸದೆ ತನ್ನ ವರ್ಗದ ಸೌಖ್ಯವನ್ನು ಹೆಚ್ಚಿಸಿಕೊಳ್ಳಬಲ್ಲದು. ಖಾಸಗಿ ಆಡಳಿತದಲ್ಲಿ ರೈಲುಗಳಿದ್ದಾಗಿಗಿಂತ ಸರಕಾರದ ಆಡಳಿತಕ್ಕೆ ಸೇರಿದ ನಂತರದ ರೈಲ್ವೇ ಸಂಪಿನ ಭಯ ಹೆಚ್ಚು ವ್ಯಾಪಕವೂ ಘೋರವೂ ಆಗಿದೆಯೆಂದು ಈಚೆಗೆ ಅನುಭವಕ್ಕೆ ಬಂದಿದೆ.

ಒಮ್ಮೆ ನೌಕರ ಶಾಹಿ ಬೆಳೆಯಿತೆಂದರೆ ಆ ಮೇಲೆ ಅದನ್ನು ಕುಗ್ಗಿಸುವದು ಅಸಾಧ್ಯಪ್ರಾಯವಾಗುವದು. ಇದರ ತಕ್ಕಮಟ್ಟಿನ ಅನುಭವ ನಮಗೂ ಆಗಿದೆ. ಆದರೆ ಪ್ರಜಾತಂತ್ರ ರಾಜ್ಯಗಳಲ್ಲಿಯೂ ಬೆಳೆದು ನಿಂತ ನೌಕರಶಾಹಿ ಹೇಗೆ ಸರಕಾರಗಳನ್ನು ನಿರುಪಾಯವಾಗಿ ಮಾಡುವವೆಂಬದಕ್ಕೆ ಫ್ರಾನ್ಸೇ ಸಾಕ್ಷಿ. ಎರಡನೆ ಮಹಾಯುದ್ಧಾನಂತರ ಬಂದ ಪ್ರತಿಯೊಂದು ಮಂತ್ರಿಮಂಡಲವೂ ಅನವಶ್ಯಕ ನೌಕರರನ್ನು ಕಿತ್ತುಹಾಕಲು ಪ್ರಯತ್ನ ಮಾಡಿತು. ಆದರೆ ಅದೆಲ್ಲ ವಿಫಲವೇ ಆಯಿತು. ಲಕ್ಷಾಂತರ ನೌಕರರಿರುವಾಗ ಅವರು ಮತ್ತು ಅವರ ಆಶ್ರಿತ ಬಂಧುಬಾಂಧವರು ಸೇರಿ ದೇಶದಲ್ಲಿ ಒಂದು ಅತ್ಯಂತ ಪ್ರಬಲ ಮತದಾರ ಗುಂಪಾಗುವದು. ಯಾವ ಪಕ್ಷವೂ ನೌಕರರನ್ನು ಮನೆಗೆ ಕಳಿಸಿ ಇಷ್ಟು ಬಲಿಷ್ಠವಾದ ಮತದಾರ ಗುಂಪಿನ ವೈರಕಟ್ಟಿಕೊಳ್ಳಲು ಧೈರ್ಯಪಡುವದಿಲ್ಲ.

ಪ್ರಜಾತಂತ್ರದ ನೂರಾರು ವರ್ಷಗಳ ಅನುಭವವುಳ್ಳ ದೇಶಗಳಲ್ಲೇ ಹೀಗಾದರೆ ಭಾರತದಂಥ ಅನನುಭವಿ ಪ್ರಜಾತಂತ್ರದಲ್ಲಿ, ಅದೂ ಸೇವಾಬುದ್ಧಿಯಲ್ಲಿ ತರಬೇತಿಯನ್ನೇ ಹೊಂದದಿರುವ ನೌಕರಶಾಹಿಯನ್ನು ಬೆಳೆಸಿ ಕುಳಿತರೆ ಮತ್ತೆ ಕೇಳಬೇಕೆ?

—ಶಂಕರನಾರಾಯಣರಾವ್

* * *

ಸೋಲು ಗೆಲುವಿನ ಮೆಟ್ಟಲು

ಮೊನ್ನೆ ಮುಂಬಯಿ ಶಾಸನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳಾದ ಶ್ರೀ ಮ್ಹಸ್ಕರರು ಸೋತದ್ದು ಒಂದಕ್ಕೆ ಒಳ್ಳೆಯದೇ ಎನ್ನಬೇಕು. ಈ ಸೋಲು ಕಾಂಗ್ರೆಸ್ಸಿಗರ ಕಣ್ಣು ತೆರೆಯಿಸಬಲ್ಲುದಾಗಿದೆ ಮತ್ತು ನಗರಸ್ಥರಲ್ಲಿ ನಾಗರಿಕ ಹೊಣೆಗಾರಿಕೆಯಿದೆ ಎಂಬುದಕ್ಕೆ ಪ್ರಮಾಣ ಕೊಡತಕ್ಕದಾಗಿದೆ.

ಸೋಶಲಿಸ್ಟ್ ಹುರಿಯಾಳಿಗೆ ನೂರಕ್ಕೆ ೪೦ ರಷ್ಟು ಮತ ಸಿಕ್ಕಿದ್ದು ವಿಚಾರಾರ್ಹವಾಗಿದೆ. ಹರಿಜನರ ಮತ್ತು ಕಾಂಗ್ರೆಸ್ಸಿನ ಹುರಿಯಾಳುಗಳಲ್ಲಿ ಒಬ್ಬೊಬ್ಬರು ಕೇವಲ ೩೦ ರಷ್ಟು ಮತ ಪಡೆದದ್ದು ಕಾಂಗ್ರೆಸ್ಸಿನ ಬಗ್ಗೆ ಜನಾಭಿಪ್ರಾಯ ಹೇಗಿದೆ ಎಂಬುದನ್ನು ಸೂಚಿಸುತ್ತದೆ. ಕಾಂಗ್ರೆಸ್ಸಿಗರು ಸೋಶಲಿಸ್ಟರಿಗಿಂತ ಹೆಚ್ಚು ಜನಸೇವೆ ಮಾಡಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅವರೀಗ ಕೊಟ್ಟ ವಚನಗಳಲ್ಲಿ ಅನೇಕವನ್ನು ಪೂರಯಿಸಲಾರದಾಗಿರುವುದೇ ಅವರಲ್ಲಿ ಜನರಿಗೆ ಅವಿಶ್ವಾಸವು ಅಂಶತಃ ಆದರೂ ತಲೆದೋರಲು ಕಾರಣವಾಯಿತು. ಸೋಶಲಿಸ್ಟರಾದರೆ ಯಾವ ವಚನವನ್ನೂ ಜನರಿಗೆ ಕೊಟ್ಟಿಲ್ಲ. ಇನ್ನು ಮೇಲೆ ತಾವು ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದು ಅವರು ಜನರಲ್ಲಿ ವಿಶ್ವಾಸ ಹುಟ್ಟಿಸಬಲ್ಲವರಾಗಿದ್ದಾರೆ. ಕಾಂಗ್ರೆಸ್ ಆಡಳಿತೆಯಲ್ಲಿಯ ಲೋಪದೋಷಗಳನ್ನು ಎತ್ತಿ ತೋರಿಸಿ, ಅವೆಲ್ಲವನ್ನೂ ತಾವು ಇಲ್ಲದಂತೆ ಮಾಡುವೆವೆಂದಾಗ ಅವರು ಹೇಳುತ್ತಿದ್ದಾರೆ. ನಾಳೆ ಎಲ್ಲ ವಯಸ್ಕರಿಗೆ ಮತದಾನಾಧಿಕಾರ ಸಿಕ್ಕಾಗ "ಫ್ರೀ ಪ್ರೆಸ್" ಹೇಳುವಂತೆ ಸೋಶಲಿಸ್ಟರಿಗೆ ಮತ್ತಷ್ಟು ಬೆಂಬಲ ಸಿಗಬಹುದಾಗಿದೆ. ಇದರಿಂದ ನಮ್ಮ ಕಾಂಗ್ರೆಸ್ ಸರಕಾರಗಳು ಈಗಲೇ ಪಾಠ ಕಲಿತುಕೊಳ್ಳಬೇಕಾಗಿದೆ.

ಶ್ರೀ ಎಸ್. ಕೆ. ಪಾಟೀಲರು ಶ್ರೀ ಮ್ಹಸ್ಕರರ ಸೋಲಿಗೆ ಕಾಂಗ್ರೆಸ್ಸಿನ ಪಾನಪ್ರತಿಬಂಧ ಧೋರಣವೇ ಕಾರಣವಾಯಿತೆಂದು ಹೇಳಿರುವುದು ಅಷ್ಟೇನೂ ಸಮರ್ಥನೀಯವಾಗಿಲ್ಲ. ಒಂದು ವೇಳೆ ಅದು ಅನೇಕ ಕಾರಣಗಳಲ್ಲಿ ಒಂದಾಗಿದ್ದರೂ ಆ ಕಾರಣಕ್ಕಾಗಿ ಸೋಲಾದರೆ ಹಾಗೆ ಸೋಲುವುದೇ ಲೇಸಲ್ಲದೆ ಅದನ್ನು ಬಿಟ್ಟುಕೊಡುವುದು ಕಾಂಗ್ರೆಸ್ಸಿಗೆ ಮರ್ಯಾದೆ ತರತಕ್ಕದ್ದಲ್ಲ.

'ಹರಿಜನ' ಪತ್ರಿಕೆಯಲ್ಲಿ ಕೆಲವೊಮ್ಮೆ ವ್ಯಕ್ತಪಡಿಸಿದ ವಿವಿಧ ಲೇಖಕರ ಅಭಿಪ್ರಾಯದಲ್ಲಾದರೂ ಕಾಂಗ್ರೆಸ್ಸು ತನ್ನ ಪ್ರತಿಷ್ಠೆಯನ್ನು ಕಳೆದುಕೊಳ್ಳುತ್ತಿದೆಯೆಂದೂ ಹಾಗೆ ಕಳೆದುಕೊಳ್ಳಲು ಅದು ತಳೆದಿರುವ ಧೋರಣೆ ಮತ್ತು ಮಾಡುತ್ತಿರುವ ಸುಧಾರಣೆಗಳ ಮಂದಗತಿಗಳೇ ಮುಖ್ಯ ಕಾರಣಗಳೆಂದೂ ಸೂಚಿತವಾಗಿದೆ. ಇದು ಸಾಮಾನ್ಯ ಜನತೆಗಾದರೂ ಅನುಭವಕ್ಕೆ ಬಂದ ವಿಷಯ. ಅವರ ಬೇಸರಕ್ಕಾದರೂ ಈ ಕೂರ್ಮಗತಿ, ಮತ್ತು ಇತ್ತೀಚೆಗೆ ತಮ್ಮ ಮೇಲೆ ಹೇರಿದ ಹೊಸ ತೆರಿಗೆಗಳು, ಆಹಾರ ವಸ್ತುಗಳ ಅಭಾವದ ನಿವಾರಣೆಯನ್ನು ತೃಪ್ತಿಕರವಾಗಿ ಮಾಡಲಾಗದಿರುವುದು ಮುಂತಾದವೇ ಕಾರಣಗಳಾಗಿವೆ. ಕಾಂಗ್ರೆಸ್ ವರಿಷ್ಠರು ಮುಂಬಯಿಯ ಸೋಲನ್ನು ಉಪೇಕ್ಷಿಸಿದರೆ ಮುಂದೆ ಗಂಡಾಂತರದ ಸನ್ನಿವೇಶಗಳನ್ನು ಎದುರಿಸಬೇಕಾದೀತು, ಅಲ್ಲದೆ, ಈ ಸೋಲನ್ನು ಗೆಲುವಿನ ಮೆಟ್ಟಲನ್ನಾಗಿ ಮಾಡಿಕೊಳ್ಳಬೇಕಾದರೆ ತಮ್ಮ ಕಾರ್ಯವೇಗ ಮತ್ತು ಧೋರಣೆಗಳಲ್ಲಿ ಅಗತ್ಯವಾದ ಪರಿವರ್ತನವನ್ನು ಮಾಡಿಕೊಳ್ಳಬೇಕು.

—ಕಾಂಗ್ರೆಸ್ ಭಕ್ತ

● ಪಾಕಿಸ್ತಾನದ ಉದಯವಾದ ನಂತರದಲ್ಲಿ ಇದೀಗ ಮೊದಲನೆಯ ಸಲ ಪೂರ್ವ ಬಂಗಾಲ ಶಾಸನ ಸಭೆಯ ಉಪಚುನಾವಣೆಯಲ್ಲಿ ಮುಸ್ಲಿಂ ಲೀಗಿನ ಓರ್ವ ಅಧಿಕೃತ ಹುರಿಯಾಳು ಸೋತಿದ್ದಾನೆ. ಸ್ವತಂತ್ರ ಪಕ್ಷದ ಹುರಿಯಾಳು ಜಯಶಾಲಿಯಾಗಿದ್ದಾನೆ.

ಲೇಖಕರು:— ಅರ್ಜುನ

...ಷ್ಮ ದ್ರೋಣಾದಿಗಳು

...ನಿಸ್ಟರ ಧೋರಣೆಯ ವೈಶಿಷ್ಟ್ಯ

...ಸುಲ್ಲಿರುವಾಗಲೇ
...ವನ್ನು ಅಭ್ಯಸಿಸ
...್‌ಯತ್ ಸೇನರ
... ಕ್ರಾಂತಿಕಾರಕ
...ರ ೧೯೨೭ ರಲ್ಲಿ
...ಕ್ಷವನ್ನು ಅವನು
... ಕಲ್ಪನೆಗಳಿಗೂ
... ಅಂತರವಿ
...ತಿಯದ ಟಿಟೋ
...ಪ್ರಾಯ.

...ಚಾರ್ಯ

...ವ್ಯಾವಂತ,
...ಣಾಚಾರ್ಯನು
...ಕಟ ಬೆಂಬಲಿಗ.
...ವವನ್ನೂ ವಿಚಾ
...ಲ್ಲವನು. ಇವ
...ಸ್ವನೇ ಇದ್ದಾನೆ.

ಕಮ್ಯುನಿಸ್ಟರನ್ನಾಗಿಯೇ ತರಬೇತು ಮಾಡಿಯಾನೆಂದು ಅಂಜುತ್ತಾರೆ. ಆದರೆ ಅವನ ಪ್ರಭಾವ ಚೀನೀ ಕಮ್ಯುನಿಸ್ಟರ ಮೇಲೆ ಒಟ್ಟನಲ್ಲಿ ಎಷ್ಟರಮಟ್ಟಿಗೆ ಬೀಳಬಹುದೆಂಬುದು ಸಂದಿಗ್ಧವೇ ಆಗಿದೆಯೆನ್ನಬಹುದು.

ಲಿ ತ್ಸಂಗ್‌ಜೆನ್

ಕುಮಿಂಟಾಂಗಿನ ತಾತ್ಕಾಲಿಕ ಅಧ್ಯಕ್ಷ ಲಿ ತ್ಸಂಗ್‌ಜೆನ್ನನು ಸಂಯುಕ್ತ ರಾಜ್ಯಭಾರ ಕ್ರಮವೇನಾದರೂ ಅಮಲಿನಲ್ಲಿ ಬರುವುದಾದರೆ ಅದರಲ್ಲಿ ಸ್ಥಾನಪಡೆಯತಕ್ಕ ಒಬ್ಬ ಹುದ್ದರಿ. ಲೀಯು ಒಬ್ಬ ಸೇನಾನಾಯಕ. ಅವನು ಕೆಲಕಾಲ ಚಿಯಾಂಗರೊಡನೆಯೂ ಮತ್ತೆ ಕೆಲಕಾಲ ಅವನ ವಿರುದ್ಧವಾಗಿಯೂ ಹೋರಾಡಿದನು. ಅವನು ಕ್ವಾಂಗ್ಸಿ ಪ್ರಾಂತದ ಸರದಾರನು. ಅಲ್ಲಿ ಅವನದೇ ಆದ ಒಂದು ಸಣ್ಣ ಪಕ್ಷವಿದೆ. ಆ ಪ್ರಾಂತದಲ್ಲಿ ಅವನು



ಚಿಯಾಂಗ್ ಕೈಶೇಕ್

ಮಟ್ಟಿನ ಸೈನ್ಯ ಬಲವಿದೆ. ಕಮ್ಯುನಿಸ್ಟರು ಬಹಳ ಕಾಲ ತಮ್ಮನ್ನು ವಿರೋಧಿಸಿದ ಕಾರಣದಿಂದ ಅವನನ್ನು ಅಧಿಕಾರದ ಸ್ಥಾನದಲ್ಲಿ ನಿಯಮಿಸುವರೆಂಬುದು ದುರೂಹ್ಯ.

ಸದ್ಯದ ಸಂಗತಿಯ ಅವಲೋಕನದಿಂದ ಸಂಯುಕ್ತ ರಾಜ್ಯಭಾರ ಕೇವಲ ಕಲ್ಪನೆಯ ಮಾತು ಮಾತ್ರ ಎನ್ನಬೇಕು. ಏಕೆಂದರೆ, ಸರಕಾರಕ್ಕೂ ಕಮ್ಯುನಿಸ್ಟರಿಗೂ ಯಾವ ಒಪ್ಪಂದವೂ ಆಗಲಿಲ್ಲ; ಸಂಧಾನ ಪ್ರಯತ್ನವೆಲ್ಲ ವಿಫಲವಾಯಿತು. ಕಮ್ಯುನಿಸ್ಟರು ಲಕ್ಷೋಪಲಕ್ಷವಾಗಿ ಯಾಂಗ್‌ಟ್ಸೀಯನ್ನು ದಾಟಿ ದಕ್ಷಿಣ ಚೀನವನ್ನು ಹೊಕ್ಕಿದ್ದಾರೆ!

ಸೈನಿಕ ಸರಕಾರ

ಐದುಲಕ್ಷ ಚೀನಿ ಕಮ್ಯುನಿಸ್ಟರು ಈಗ ಯಾಂಗ್‌ಟ್ಸೀ ನದಿಯನ್ನು ದಾಟಿ ಬಂದಿದ್ದಾರೆಂದು ತಿಳಿದಿದೆ. ಸೂಚೋ ಅವರ ವಶವಾಗಿದೆ. ಶಾಂಘಾಯಿಯನ್ನು ಸದ್ಯದಲ್ಲೇ ಮುಕ್ತಗೊಳಿಸುವದಾಗಿ ಅವರ ಹೇಳಿಕೆ. ಅಧ್ಯಕ್ಷ ಚಿಯಾಂಗರು ಪುನಃ ಸಿಂಹಾಸನಾರೂಢರಾಗುವರೆಂದೂ ತಮ್ಮ ದಲಗಳ ಪ್ರತಿಭಟನೆಯನ್ನು ಮುಂದೆ ಸಾಗಿಸಿಕೊಂಡು ಹೋಗುವ ವಿಷಯದಲ್ಲಿ ರಾಜತಂತ್ರಜ್ಞರು, ಸೇನಾಪತಿಗಳು ಮತ್ತು ವಾಣಿಜ್ಯನೇತ್ರರು ಇವರೊಡನೆ ಚರ್ಚೆ ನಡೆಸಿದರೆಂದೂ ಸುದ್ದಿ. ಶಾಂಘಾಯಿಗೆ ೫೦ ಮೈಲು ದಕ್ಷಿಣಕ್ಕೆ ೪೦೦೦ ಕಮ್ಯುನಿಸ್ಟ್ ತುಳಿಲಾಳುಗಳು ರಣಭೈರವರಂತೆ ದಾಳಿಮಾಡಲು ಮುನ್ನುಗ್ಗಿದರೆಂದು ತಿಳಿಯುತ್ತದೆ. ಚೀನದೊಡನೆ ಸಮಾನತ್ವದಿಂದ ವ್ಯಾಪಾರಾದಿಗಳ ಸಂಬಂಧವಿಟ್ಟುಕೊಳ್ಳಬಯಸುವ ವಿದೇಶೀಯ ಪ್ರಭುತ್ವಗಳು ತಮ್ಮ ಜಲಸ್ಥಲವಾಯು ಬಲಗಳನ್ನು ಚೀನದಿಂದ ಹಿಂತೆಗೆದುಕೊಳ್ಳಬೇಕೆಂದು ಕಮ್ಯುನಿಸ್ಟ್ ಆಕಾಶವಾಣಿ ಸಾರಿದೆ.

ಯಾಂಗ್‌ಟ್ಸೀಗೆ ದಕ್ಷಿಣದಲ್ಲಿ ೫೦ ಸಾವಿರ ಚದುರ ಮೈಲು ಪ್ರದೇಶದಲ್ಲಿ ತಾವೇ ತಾವಾಗಿ ಕಮ್ಯುನಿಸ್ಟರು ವಿಹರಿಸುತ್ತಿದ್ದಾರೆ. ಚಲಾವಣೆ ಪೂರ್ಣವಾಗಿ ಬಿದ್ದುಹೋಗಿದೆ. ಕಮ್ಯುನಿಸ್ಟ್ ಆಕಾಶವಾಣಿಯ ಪ್ರಕಾರ ನಾನ್‌ಕಿಂಗಿನಲ್ಲೀಗ ಸೈನಿಕ ಸರಕಾರವನ್ನು ಕಮ್ಯುನಿಸ್ಟರು ಸ್ಥಾಪಿಸಿದ್ದಾರೆ.

ಇತ್ತೀಚಿನ ಸುದ್ದಿಯಂತೆ .ಚೀನೀ ರಾಷ್ಟ್ರೀಯ ಸೈನ್ಯವು ಹ್ಯಾಂಗ್ ಚೋ ಪಟ್ಟಣದಿಂದ ಸಂಪೂರ್ಣವಾಗಿ ಹೊರಬಿದ್ದು ಬೇರೆಯ ಸ್ಥಳದಲ್ಲಿ ಸಂರಕ್ಷಣೆಗಾಗಿ ಸಜ್ಜುಗೊಳ್ಳುತ್ತಿದೆ. ಗಣ್ಯ ಸಮರನೈತಿಕ ರೇಲ್ವೇ ಸಂಗಮವಾದ ಕ್ಯಾಶಿಂಗನ್ನು ಮುತ್ತಲು ಕಮ್ಯುನಿಸ್ಟರು ಧಾವಿಸುತ್ತಿದ್ದಾರೆ. ಗುಂಡು ಹೊಡೆದು ¦ಉರುಳಿಸಿದ ಬ್ರಿಟಿಶ್ ಯುದ್ಧ ನೌಕೆಗಳಲ್ಲಿದ್ದ ಗಾಯಗೊಂಡ ೭೭ ಜನರನ್ನು ಅಮೇರಿಕದ ಆಸ್ಪತ್ರೆ ಹಡಗು ಶಾಂಘಾಯಿಯಿಂದ. ಸುರಕ್ಷಿತವಾಗಿ ಹಾಂಕಾಂಗಿಗೆ ತಂದಿದೆ ಎಂದು ತಿಳಿಯುತ್ತದೆ.

ಈಯೆಲ್ಲ ಸಂಗತಿಗಳು ಕಮ್ಯುನಿಸ್ಟರ ವಿಜಯವನ್ನು ಖಾತ್ರಿ ಮಾಡಿವೆ ಯೆಂದೂ ಭಾವೀ ಚೀನದ ಇತಿಹಾಸವನ್ನು ರೂಪಿಸುವ ಅಧಿಕಾರವನ್ನು ಅವರ ಕೈಗೆ ಕೊಡಲಿವೆ. ಯೆಂದೂ ಊಹಿಸಬಹುದಾಗಿದೆ.

ಚೌ ಎನ್ ಲೈ

ಲಿ ತ್ಸಂಗ್ ಜೆನ್

...ಂತಾದವನ್ನು
...ನ ಪಾಲಿಗಿದೆ.
...ಲ್ಲಿ ಸಂಯುಕ್ತ
...ಒಡರಿಸುವಲ್ಲಿ
...ಹಾಯಕನಾಗ
...ಕಾರದ ಕೆಲ
...ಮಿಶ್ರ ಮಂತ್ರಿ
...ಕಾರಿಯಾಗತಕ್ಕ
... ಸಂಗ್ರಾಮದ
...ಂಗಿನಲ್ಲಿ ಸಂಬಂ
...ಯಾಂಗರ ಕೆಲ
... ಸ್ನೇಹದಿಂದ
...ದ್ದಿಗೆ ಕಾರಣ.
...ಾದರೂ ಮಂದ
... ಕ್ರಾಂತಿಯನ್ನು

...ನ್ನಮಾದರಿಯ
...ಮಾಸ್ಕೋಮರಿ'
... ಒಮ್ಮೆ ಅವನು
...ಗಿದ್ದ. ೧೯೩೦
...ೂರಗೆ ಅಟ್ಟ
...ರಿತೆ ಅವ
...ಯನ್ನು ಹಿಡಿದ.
... ಕಮ್ಯುನಿಸ್ಟ್
...ಯಿತು. ಅನಂತರ
...ಂಚೂರಿಯಕ್ಕೆ
... ಅಲ್ಲಿಗೆ ಬಂದೊ
...ಲ್ಲಿಂದ ಹಿಂದಕ್ಕೆ
...ಕರು ಲಿಸಾನನು
...ೂ ಮಾಸ್ಕೋ

ಕೃಷಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಬಹಳ ಸುಧಾರಣೆ ಮಾಡಿದ್ದಾನೆ. ಇದೇ ಕಮ್ಯುನಿಜಂ ಬರದಂತೆ ತಡೆಗಟ್ಟುವ ಅತ್ಯುತ್ತಮ ಉಪಾಯವೆಂಬುದು ಅವನ ವಿಚಾರ.

ಲಿ ಚಿಶೇನ

ಲಿಚಿಶೇನನೂ ಸಮರ ನೈತಿಕವಾಗಿ ಮುಖ್ಯಸ್ಥಾನವನ್ನು ಪಡೆದಿದಿದ್ದಾನೆ. ಚಿಶೇನನು ಒಮ್ಮೆ ಕುಮಿಂಟಾಂಗಿನ ಸದಸ್ಯನಾಗಿದ್ದ. ಬಹಳ ಕಾಲ ರಾಷ್ಟ್ರೀಯ ಸರಕಾರನನ್ನು ವಿರೋಧಿಸಿ ಕೊನೆಗೆ ಹಾಂಕಾಂಗಿಗೆ ಅವನು ಓಡಿ ಹೋದನು. ಚಿಯಾಂಗರನ್ನು ಕಿತ್ತೊಗೆಯಬೇಕೆಂಬುದೇ ಅವನು ಎಂದಿನಿಂದಲೂ ಹಾಡುತ್ತ ಬಂದ ಪಲ್ಲವಿ. ಅವನು ಕುಮಿಂಟಾಂಗ್ ಕ್ರಾಂತಿಕಾರಕ ಪಕ್ಷದ ಸಂಸ್ಥಾಪಕನಾಗಿಯೂ ನೇತಾರನಾಗಿಯೂ ಕೆಲಸ ಮಾಡುತ್ತಿದ್ದಾನೆ. ಹಾಂಕಾಂಗಿನಲ್ಲಿ ಎಡ ಪಕ್ಷದ ಉಲ್ಲಮುಖರೂ ಕಮ್ಯುನಿಸ್ಟರೂ ಅವನನ್ನು ಸುತ್ತಿದರು. ಅವನು ಅವರೆಲ್ಲರೊಡನೆಯೂ ಸಹಕರಿಸಿ ನಡೆದುಕೊಳ್ಳುತಿದ್ದಾನೆ. ಸಂಯುಕ್ತ ರಾಜ್ಯಪದ್ಧತಿಯಲ್ಲಿ ಅವನಿದ್ದರೆ ಅನೇಕ ಬೇರೆ ಬೇರೆ ಚೀನೀ ಪಕ್ಷಪಂಗಡಗಳು ಅವನೊಡನೆ ಸಹಕರಿಸಲು ಮುಂದೆ ಬಂದಾವು.

ಫು ತ್ಸೋಯಿ

ಸೇನಾನಾಯಕ ಫು ತ್ಸೋಯಿಯಾದರೂ ಮಿಶ್ರ ಮಂತ್ರಿಮಂಡಲದ ಆಳಿಕೆಗೆ ಅನುಕೂಲನಾಗಿಯೇ ಇದ್ದಾನೆ. ಅವನು ಮೊದಲು ಚಿಯಾಂಗರ ಅತಿ ಬಲಿಷ್ಠ ಸೇನಾನಾಯಕರಲ್ಲಿ ಒಬ್ಬನೆನಿಸಿದ್ದ; ಈಗ ಕಮ್ಯುನಿಸ್ಟರಿಂದ ಅನೇಕಬಾರಿ ಪೆಟ್ಟು ತಿಂದು ಓಡಿ ಬಂದಿರುತ್ತಾನೆ. ಈಗಲೂ ಅವನ ಹತ್ತಿರ ತಕ್ಕ

ಮೂಲೆ ಮೂಲೆಗಳಿಂದ

ದಕ್ಷಿಣ ಆಫ್ರಿಕದ ಮಲಾನ್ ಸರಕಾರ ಈಗ ಬಿಳಿಯರ ಮತ್ತು ಮಿಶ್ರವರ ನಡುವೆ ವಿವಾಹವಾಗಕೂಡದೆಂಬ ಮಸೂದೆಯನ್ನು ಶಾಸನಸಭೆಯಲ್ಲಿ ಮಂಡಿಸಿದೆ. ಅವರ ಪ್ರಕಾರ ದೃಷ್ಟಿಯೇ ಇವರು ಬಿಳಿಯರು, ಇವರಲ್ಲ ಎಂಬುದಕ್ಕೆ ನಿರ್ಣಾಯಕವಾಗಿರುತ್ತದೆ. ಇದು ಐರೋಪ್ಯ ಐರೋಪ್ಯೇತರರಲ್ಲಿ ರಕ್ತಸಂಬಂಧ ಬೆಳೆಯದಂತೆ ನೋಡಿಕೊಳ್ಳುವ ಹಿಟ್ಲರೀ ಧೋರಣೆಯ ಪ್ರಥಮಾಂಕ.

ಬ್ರಿಟನ್ನಿನ ಉಪಮುಖ್ಯಮಂತ್ರಿ ಹರ್ಬರ್ಟ್ ಮೊರಿಸನ್ನರು ಪ್ರಜಾರಾಜ್ಯ ಭಾರತವು ರಾಷ್ಟ್ರಕೂಟದಲ್ಲಿ ಉಳಿಯಲು ನಿಶ್ಚಯಿಸಿದ್ದು ಚರಿತ್ರಾರ್ಹವಾದುದು ಎಂದು ಪಾರ್ಲಿಮೆಂಟಿನಲ್ಲಿ ಹೇಳಿದರು. ಆ ಮಾತಿಗೆ ವಿರೋಧಿ ಪಕ್ಷದ ಮುಖಂಡ ವಿನ್‌ಸ್ಟನ್ ಚರ್ಚಿಲ್ಲರು ಅನುಮೋದನೆ ಕೊಟ್ಟರು.

ಬ್ರಹ್ಮೀ ಗಡಿಯಿಂದ ೧೦೦ ಮೈಲು ದೂರದಲ್ಲಿರುವ ಸುಂಕದ ನಗರವಾದ ಪಯೋಜಾನನ್ನು ೨೦೦೦ ಚೀನೀ ಕಮ್ಯುನಿಸ್ಟರು ಮುತ್ತಿಗೆ ಹಾಕಿ ವಶಪಡಿಸಿಕೊಂಡು ಬ್ರಹ್ಮ ಮತ್ತು ಚೀನಗಳ ಸುಂಕದ ಸಾರಿಗೆ ರಸ್ತೆಗೆ ತಡೆಹಾಕಿದ್ದಾರೆಂದು ಬ್ರಹ್ಮೀ ಸೈನ್ಯದ ಆಕಾಶವಾಣಿ ಬಿತ್ತರಿಸಿದೆ.

ರಂಗೂನ್ ಮತ್ತು ಮಂಡಾಲೆಯ ನಡುವಿರುವ ಕಾರೆನ್ನರ ಬಲಿಷ್ಠ ಕೇಂದ್ರವಾದ ಟೂಂಗೂದಲ್ಲಿ ಸರಕಾರೀ ಸೈನಿಕರು ಪ್ರವೇಶಿಸುವರೆಂದು ಬ್ರಹ್ಮೀ ಸರಕಾರದ ವಕ್ತಾರನ ಹೇಳಿಕೆಯಿದೆ.

ಬಿಳಿ ಪಟ್ಟೆಯ ದಾಳಿಗಾರರು ಮಧ್ಯ ಬ್ರಹ್ಮದ ರೇಲ್ವೆ ಪಟ್ಟಣವಾದ ಯಮೇಥಿನನ್ನು, ವಶಪಡಿಸಿಕೊಂಡರೆಂದು ಬ್ರಹ್ಮೀ ಸರಕಾರ ತಿಳಿಸುತ್ತದೆ.

ಡಚ್ ಮತ್ತು ಇಂಡೊನೇಶಿಯನ್ ಮುಖಂಡರಲ್ಲಿ ನಡೆಯುತ್ತಿರುವ ಮಾತುಕತೆ ಯಶಸ್ವಿಯಾಗಬಹುದೆಂದೂ ಈ ವರೆಗೆ ನಡೆದ ಮಾತುಕತೆಯಿಂದ ಪರಸ್ಪರರ ಅಭಿಪ್ರಾಯಗಳನ್ನು ಪರಸ್ಪರರು ಚನ್ನಾಗಿ ಅರ್ಥಮಾಡಿಕೊಂಡಿದ್ದಾರೆಂದೂ ಪ್ರಜಾರಾಜ್ಯದ ಒಂದು ವಾರ್ತಾಪರ ತಿಳಿಸುತ್ತದೆ. ಆದರೆ ಇನ್ನೂ ಯಾವ ರೀತಿಯ ಸಾಮ್ಯ ಸಂಧಿಯೂ ಸಾಧಿಸಿಲ್ಲ ಎನ್ನಲಾಗಿದೆ.

ಫಿಲಿಪ್ಪೈನ್ ದ್ವೀಪಸ್ತೋಮದಲ್ಲಿ ಕೂಟಯೋಧರು ಹಿಂದಿನ ಅಧ್ಯಕ್ಷ ಡಾ.

[illegible]
...ಮುಗಳನ್ನು ಮುಕ್ತ [illegible]
ಸುದ್ದಿ ಬಂದಿದೆ. ಗಾಯಗೊಂಡ...
...ನ್ ಸೈನ್ಯದ ಮುಖ್ಯಾಧಿಕಾರಿ, ...
ಸೇನಾನಾಯಕ ಮತ್ತು ...
ಅಳಿಯ ಇವರು ಗಣ್ಯರು.

ಕಳೆದ ೧೦ ತಿಂಗಳುಗಳಿಂದ ...
ಬರ್ಲಿನ್ ದಿಗ್ಬಂಧ ಇನ್ನು ...
ಮುಕ್ತಾಯಗೊಳ್ಳಬಹುದೆಂದು ...
ಸುದ್ದಿ ಶಾಖೆಯ ಮುಖ್ಯಸ್ಥ ...
ಹೋದವನು ಸೂಚಿಸಿದ್ದಾನೆ.

ಇರಾಕ್ ತನ್ನ ಜೊತೆಯಾದ ...
[illegible]
[illegible]
... ಜಗತ್ತಿನಲ್ಲೆಲ್ಲ ...
ಎಂದು ಜನಪ್ರಿಯನಾಗಿದ್ದಾನೆ.
ಈಗ ಇಂಗ್ಲೆಂಡಿನಲ್ಲಿ ಭಾವೀ ...
[illegible]
ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದಾ...

ಇಡೀ ಜಗತ್ತಿನ ಮಜೂರ ಸ...
ಕೂಲಿಕಾರರೂ ಮೇ ೧ ರಲ್ಲಿ ...
ಆಚರಿಸಿದರು. ಪೂರ್ವ ಯುರೋಪಿನ...
ಮುಖಂಡರು ಕೆಲಸಗಾರರ ಮೆರವಣಿ...
ನಿರೀಕ್ಷಿಸಿದರು. ಲಂಡನ್ ಮತ್ತು ...
ನಗರಗಳಲ್ಲಿ ಕೆಲ ಕೆಲಸಗಾರರಿಗೂ
ಪೋಲೀಸರಿಗೂ ಘರ್ಷಣ ಉಂಟಾಯಿತು.

ಬ್ರಿಟನ್ನಿನ ೮೦ ಲಕ್ಷ ...
ಮಜೂರ ಸಂಘವೀಗ ಬೇರೆ ದೇಶಗ...
ಮಜೂರ ಚಟುವಟಿಕೆಯ ...
ಸಂಬಂಧ ಬೆಳೆಸಿಕೊಂಡು ...
ಅಂತಾರಾಷ್ಟ್ರೀಯ ಮಜೂರ ...
ಪದಿ ಹಾಕಬೇಕೆಂದು ಪ್ರಯತ್ನಿಸುತ್ತ...

ಹಂಗೇರಿ ಮತ್ತು ಬಲ್ಗೇರಿಯಗಳ...
ಜೆಗೆ ಮಾಡಿದ ಮಾನವ ಹಕ್ಕುಗಳ ...
ಬಗ್ಗೆ **ಫ್ಲಶಿಂಗ್ ಮೆಡೋಸಿನಲ್ಲಿ**
ಸಂ. ರಾ. ಸಂಘದ ಸರ್ವ ಸದಸ್ಯ...
ಬೊಲಿವಿಯದ ಒಂದು ಮಸೂ...
ಸ್ವೀಕರಿಸಿ, ಅದರ ಪ್ರಕಾರ ...
ಮಾನವ ಹಕ್ಕುಗಳಿಗೆ ಸಂಬಂಧಿಸಿದ ...
ಸಂಧಿಯ ಆಧಾರದ ಮೇಲೆ ಈ ...
ವನ್ನು ತನಿಖೆಯಲು ಯುಕ್ತಸಬೇಕೆಂದು...
ಯಿಸಿತು.



ದೋಣಿಯ ಪಂದ್ಯದಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದವರು ಗೆದ್ದರು. [illegible]

ರೂಪರಂಗ

ಕಲೆಯ 'ಅವತಾರ'

[illegible]

...ಕ್ಕಲು ಶಾಸ್ತ್ರ, ಭಾವನೆಯ [illegible] ಸಾಕು. ಅವರೆ ಇವಾದರೂ ಅತಿರೇಕವಾದರೆ [illegible]. ಇದೇ [illegible] ಭಾರತೀಯ

'ಸಿಂಗಾರಿ'ಯಲ್ಲಿ ಜೈರಾಜ ಬರಲು ತೋ—
ರಿತ್ತು ಬಣ್ಣ ಬಣ್ಣ;
ಬಂಗಾರವಾದನವ ವಿಯಜೆಗೆ ಮಧು—
ಶಾಲೆಗಿತ್ತು ಕಣ್ಣ!

ಪರಂಪರಾಗತ ಸಂಸ್ಕೃತಿಪ್ರಕಾಶಕ ಕಲಾಕೃತಿಗಳ ಮೇಲೆ ಹೊರಿಸುತ್ತಾರೆ. ಏನಾದರೂ ಪಾವಿತ್ರ್ಯ ಹೋದ ಕಲೆ ಕಲೆಯಲ್ಲ, ಸೌಂದರ್ಯವಲ್ಲ, ರಸವಲ್ಲ, ಮಾನವವಿಕಾಸದ ಸಾಧನವಲ್ಲ, ಮಾನವಯೋಗ್ಯ ಪರಿನಿರ್ವೃತಿದಾಯಕವಲ್ಲ. ಅದುದರಿಂದ ಪ್ರಜಾರಾಜ್ಯದ ಈ ದಿನಗಳಲ್ಲಿ ಸಮಾಜದ ಹಿರಿಯರು, ಗ್ರಾಮಸ್ಥರು, ತಮ್ಮ ಸುತ್ತಲಿನ ಪರಿಸರದಲ್ಲಿ ನಡೆವ ಕಲಾಪ್ರದರ್ಶನದ ರೀತಿ ನೀತಿಗಳ ಬಗ್ಗೆ ಎಚ್ಚರದಿಂದಿದ್ದು ಸಾಮಾಜಿಕರಿಗೆ ಮಾರ್ಗದರ್ಶನ ಮಾಡಬೇಕು, ಕಲೆಗಾರರಿಗೆ, ಪ್ರದರ್ಶಕರಿಗೆ ಅಗತ್ಯಬಿದ್ದಾಗ ಕಿವಿಹಿಂಡಿ ಹೇಳಬೇಕು. ಸರಕಾರ ಎಲ್ಲವನ್ನೂ ಮಾಡಬೇಕೆನ್ನುವದು ಹೊಣೆಗಾರಿಕೆಯೂ ಅಲ್ಲ, ಅಗತ್ಯವೂ ಅಲ್ಲ. ಮಾನವಕುಲದ ಘಟಕಗಳೆನಿಸಿದ ಕುಟುಂಬ ಮತ್ತು ಊರುಕೇರಿಗಳು ಸ್ವಾವಲಂಬನವನ್ನು ದೈನಂದಿನ ವ್ಯವಹಾರದಲ್ಲಿ ಸಾಮೂಹಿಕವಾಗಿ ಅಳವಡಿಸಿಕೊಳ್ಳುವದೊಂದೇ ಸಾರ್ವಕಾಲಿಕವಾದ ಸಾರ್ವತ್ರಿಕ ಸುರಕ್ಷಿತತೆಯ ಹಾದಿಯಾದುದರಿಂದ ಅಕ್ಷರ, ವರ್ಣ ಮತ್ತು ಮೂರ್ತ್ಯಾದಿ ವಿವಿಧರೂಪಗಳಲ್ಲಿ ಎದುರಾಗುವ ಕಲಾಕೃತಿಗಳ ಪ್ರಚಾರವನ್ನು ಹಿರಿಯರು ನಿಯಂತ್ರಿಸುವದೊಂದೇ ಆದರ್ಶ ಸಮಾಜದಲ್ಲಿ ವ್ಯಕ್ತಿಗಳು ಪರಸ್ಪರವಾಗಿ ಆದರ್ಶ ರೀತಿಯಿಂದ ನಡೆದುಕೊಳ್ಳುವಂತೆ ಮಾಡುವ ಮಾರ್ಗ. ಇಂದು ಸಾಮಾನ್ಯವಾಗಿ ಕಂಡು ಬರುವ ಕಲೆಯ ಅಧಃಪಾತವನ್ನು ಯಾವ ಕಾರಣದಿಂದರೇ ಆಗಲಿ ಉನ್ನತಿಯೆಂದು ತಿಳಿದುಕೊಂಬವರಿಗೆ ಮಾನವಕುಲದ ಹಿತಚಿಂತನದ ದೂರದೃಷ್ಟಿಯಿಲ್ಲವೆಂದೇ ಹೇಳಬೇಕು.

— ಕಲಾವಂತಂಸ

ಚಿತ್ರವಾರ್ತೆ

"ಆಲಿವರ್ ಟ್ವಿಸ್ಟ್" ಎಂಬ ಬ್ರಿಟಿಶ್ ಚಿತ್ರವು ಸೂರಾರು ಯೆಹೂದಿಗಳ ಕೋಪಕ್ಕೆ ತುತ್ತಾಯಿತು. ಬರ್ಲಿನ್ನಿನ ಬ್ರಿಟಿಶ್ ವಲಯದ ಯುರ್ಕೆಟ್ ರಂಗದಲ್ಲಿ ಅದನ್ನು ಪ್ರದರ್ಶಿಸುತ್ತಿದ್ದಾಗ ಸಶಸ್ತ್ರ ಜರ್ಮನ ಪೋಲೀಸರ ಮೇಲೆ ಯೆಹೂದಿಗಳು ಕಲ್ಮಳೆ ಸುರಿಸಿದರು.

ಆ ಚಿತ್ರದಲ್ಲಿ ಯೆಹೂದಿಗಳ ಬಗ್ಗೆ ಅಪಪ್ರಚಾರವಿರುವುದೇ ಅವರ ಉದ್ರೇಕಕ್ಕೆ ಕಾರಣವಾಯಿತು. ತಾತ್ಕಾಲಿಕವಾಗಿ ಚಿತ್ರ ಪ್ರದರ್ಶನವನ್ನು ನಿಲ್ಲಿಸಿದಾಗ ಮತಪ್ರದರ್ಶಕರು ಇಸ್ರೇಲಿನ ರಾಷ್ಟ್ರಗೀತವನ್ನು ಹಾಡಿದರು.

× × ×

ಪ್ರಸಿದ್ಧ ಆಕಾಶವಾಣಿ ತಾರೆ ಕುಮಾರಿ ಪೆಟ್ರೀಶಿಯ ರ್‍ಯಾನಳು "ವ್ಯಾಲೆಂಟೈನ್ ಫಾರ್ ಸೋಫಿಯ" ಎಂಬುದರಲ್ಲಿ ಚೆನ್ನಾಗಿ ಅಭಿನಯಿಸಿ ಇತ್ತೀಚೆಗೆ ಹೆಸರು ಪಡೆದಿದ್ದಳು. ಅವಳು ನ್ಯೂಯಾರ್ಕಿನ ತನ್ನ ಮನೆಯಲ್ಲಿ ಸತ್ತುಬಿದ್ದುದನ್ನು ಪೋಲೀಸರು ಕಂಡು ಅವಳ ಸಾವು ಸ್ವಾಭಾವಿಕವೆಂದು ತೀರ್ಮಾನಿಸಿದರು.

× × ×


ಕುದುರೆ ಜೂಜಿನಂತೆ ಹಾಲಿವುಡ್ಡಿನ ರಸಿಕ ರಸಿಕೆಯರು ಬಿಳಿ ಇಲಿಯ ಓಟದ ಸ್ಪರ್ಧೆಯನ್ನು ನಡೆಸುವ ರೂಢಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಕುದುರೆಗಳನ್ನು ಹೇಗೋ ಹಾಗೇ ಅವುಗಳನ್ನು ಅಂಗಳದಲ್ಲಿ ಓಡಿಸುತ್ತಾರೆ. ಆದರೆ ಅವುಗಳ ಬೆನ್ನೇರುವ ಗಣಪತಿ ಮಹಾಶಯರು ಮಾತ್ರ ಇಲ್ಲ. ಅವಕ್ಕೆ ಪ್ರಸಿದ್ಧ ತಾರಾ ಸುಂದರ ಸುಂದರಿಯರ ಹೆಸರುಗಳನ್ನು ಇಡಲಾಗುತ್ತದೆ. ಈ ಜೂಜಿನಲ್ಲಿ ಸಾವಿರಾರು ಡಾಲರುಗಳು ಕೈಬದಲಾಗುತ್ತವೆ.

× × ×

ವಾಶಿಂಗ್‌ಟನ್ನಿನಲ್ಲಿರುವ ಹಿಂದೀ ಸಮಾಚಾರ ಕಾರ್ಯಾಲಯವು ಭಾರತೀಯ ವಾರ್ತಾ ಚಿತ್ರಗಳನ್ನು ಫ್ರೆಡ್‌ರಿಕ್ ಡಿ ವೆ.ಲ್ಲೋ ಅವರ ಆಶ್ರಯದಲ್ಲಿ ಜನಪ್ರಿಯವಾಗಿ ಮಾಡುತ್ತಿದೆಯೆಂದು ತಿಳಿಯುತ್ತದೆ. ದೂರವೀಕ್ಷಕ ಪಂಗಡಗಳು (Television groups) ತಪ್ಪದೆ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ದೂರ ಪ್ರದರ್ಶನಕ್ಕಾಗಿ ಕಳಿಸುತ್ತಿವೆ. ಭಾರತದಲ್ಲಿ ಆಧುನಿಕತೆ ಬೆಳೆಯುತ್ತಿರುವ ಅಂಶವನ್ನು ಚಿತ್ರಿಸುವ ಚಿತ್ರಗಳ ಬಗ್ಗೆ ಅಮೇರಿಕದಲ್ಲಿ ಬಹಳ ಬೇಡಿಕೆಯಿದೆಯಂತೆ.

× × ×

"ಹಿಂದುಸ್ತಾನ ಮಾತಾಡುತ್ತದೆ" ಎಂಬ ಚಿತ್ರವು ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಡುತ್ತಿದ್ದಾಗ ಭಾರತೀಯ ವಿದ್ಯಾರ್ಥಿಗಳು ವಿರೋಧ ಮತಪ್ರದರ್ಶನ ಮಾಡಿದರು. ಅದರಲ್ಲಿ ಭಾರತದ ಬಗ್ಗೆ ಬಹಳ ಅಪಪ್ರಚಾರವಿರುವುದೇ ಅವರು ಹಾಗೆ ಮಾಡಲು ಕಾರಣ.



ಭಾರತಕ್ಕೆ ಹೊಸ [illegible] ಹಡಗು [illegible] ಬಂದರಿನಲ್ಲಿ ಭಾರತಕ್ಕಾಗಿ ಕಟ್ಟ[illegible] [illegible] ಚಿತ್ರ.

ವಿಶೇಷ ಲೇಖ

ಭಾವೀ ಚೀನದ ಭ[illegible]

ಚೀನದ ಆಂದೋಲನದಿಂದ ಜಯಶಾಲಿಯಾಗಿ ಹೊರಬೀಳುತ್ತಿರುವ ಕಮ್ಯುನಿಸ್ಟ ಮುಖಂಡರೇ ಇನ್ನು ಮುಂದೆ ಅದರ ಹಣೆಬರಹವನ್ನು ರೂಪಿಸತಕ್ಕವರು. ಕಳೆದ ಎರಡು ಶತಕಗಳಿಂದ ಬಲಿಷ್ಠರಾಗಿ ಚೀನದಲ್ಲಿ ಆಳಿದ ಚಿಯಾಂಗ್ ಕೈಶೇಕರ ಕೈಯೀಗ ಅದೃಢವಾಗಿದೆ. ಅವರ ಪದತ್ಯಾಗವನ್ನು ಕೇವಲ ಕಮ್ಯುನಿಸ್ಟರಲ್ಲವೆ ಅವರ ಜನರಲ್ಲಿಯೇ ಅನೇಕರು ಬಯಸುತ್ತಾರೆ.

ಇದರ ಪರಿಣಾಮವಾಗಿ ಚೀನದಲ್ಲಿ ನಾಳೆ ಸಂಯುಕ್ತ ರಾಜ್ಯಭಾರವಿರಲಿ, ಇಲ್ಲದಿರಲಿ— ಕಮ್ಯುನಿಸ್ಟ ರಣಪಂಡಿತರೇ ಬಲಿಷ್ಠ ನೇತೃಗಳಾಗುವರು ಎಂಬುದರಲ್ಲಿ ಸಂಶಯವಿಲ್ಲ. ಇದರಿಂದ ಅಮೇರಿಕನ್ನರಿಗೆ ಚಿಂತೆ, ಭಯ, ಸಂಶಯಗಳು ಉಂಟಾಗಿವೆ. ಏಕೆಂದರೆ ಅವರು ಚಿಯಾಂಗರ ಬೆನ್ನುಕಟ್ಟಿ ಚೀನದಲ್ಲಿ ಹೇರಳ ಧನವನ್ನು ಸುರಿದಿದ್ದಾರೆ. ಬಡ್ಡಿಗೆ ಹಾಕಿದ ಹಣದಂತೆ ಆ ಧನಕ್ಕಾದರೂ ಅವರು ಪ್ರತಿಫಲವನ್ನು ಬಯಸಿದ್ದರು. ಬಡ್ಡಿ ಅಲ್ಲಿರಲಿ,



ಲಿ ಚಿಶೇನ



ಮಯೋತ್ಸೇತಂಗ್

ಅಸಲಿಗೇ ಎಲ್ಲಿ ಲೋಪ ಬರುವುದೋ ಎಂದು ಅವರಿಗೀಗ ಚಳಿ ಹಿಡಿದು ಬಿಟ್ಟಿದೆ. ಅದರಿಂದ ಚೀನದ ನಾಳಿನ ರಾಜ್ಯಕ್ರಮದ ಬಗ್ಗೆ ಅವರಿಗೆ ಬಹಳ ಆಸಕ್ತಿ ಆತುರಗಳಿರುವುದು ಸ್ವಾಭಾವಿಕ. ಯಾವ ಕಾರಣದಿಂದಲೇ ಆಗಲಿ ಜನರಲ್ಲಿ ಗಣ್ಯರೆನಿಸಿ ಉಳಿಯಬಹುದಾದ ಕೆಲವು ಮುಖಂಡರ ಮನೋಧರ್ಮಗಳನ್ನು ಸ್ಥೂಲವಾಗಿ ತಿಳಿದುಕೊಳ್ಳುವುದು ಯೋಗ್ಯವಾಗಿದೆ:

ಚೀನೀ ಭೀಷ್ಮ

ಕಮ್ಯುನಿಸ್ಟ ವರ್ಗದ ಭೀಷ್ಮಪದದಲ್ಲಿರುವ ಮಯೋತ್ಸೇತಂಗನು ಸಂಪೂರ್ಣವಾಗಿ ಮಾರ್ಕ್ಸನ ತತ್ವವನ್ನು ಚೀನದ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸಿಕೊಂಡಿದ್ದಾನೆ. ಕಮ್ಯುನಿಸ್ಟ ಆರ್ಥಿಕ ಪರಿವರ್ತನ ಸಿಥಾನವಾಗಿ ಬರಬೇಕೆಂದೂ ಮಧ್ಯಕಾಲದಲ್ಲಿ ಬಂಡವಾಳಶಾಹಿಯ ಉದ್ಯಮಪದ್ಧತಿ ಇರುವುದು ಅವಶ್ಯಕವೆಂದೂ ಅವನ ಮತ. ರಶಿಯದ ಕೂಲಿಕಾರರ ಸ್ಥಾನವನ್ನು ಅವನು ಚೀನದ ಒಕ್ಕಲಿಗರಿಗೆ ಕೊಟ್ಟಿದ್ದಾನೆ. ಅವರನ್ನು ಕ್ರಮೇಣ ಪಟ್ಟಣಿಗ ಕೆಲಸಗಾರರನ್ನಾಗಿ ಮಾಡಬೇಕೆಂದು ಅವನ ಗುರಿ. ಎಲ್ಲ ರಾಷ್ಟ್ರಗಳೊಡನೆಯೂ ತನ್ನ ಸರಕಾರ ಸ್ನೇಹದಿಂದ ವರ್ತಿಸುವುದೆಂದೂ ವಿದೇಶೀಯರು ಚೀನದಲ್ಲಿ ತಮ್ಮ ಬಂಡವಾಳವನ್ನು ಉದ್ಯಮದಲ್ಲಿ ತೊಡಗಿಸಲು ಅವಕಾಶವೀಯುವುದಾಗಿಯೂ ಅವನ ಹೇಳಿಕೆಯಿದೆ.

ಮಯೋ ಪೀಕಿಂಗ್ ವಿಶ್ವವಿದ್ಯಾಲಯದಲ್ಲಿ ಓದಿದವನು. ಮೊದಲಿನಿಂದಲೂ ಅವನಿಗೆ ಓದುವುದೆಂದರೆ ಪ್ರಾಣಕ್ಕಿಂತ ಪ್ರಿಯ; ಅವನೊಬ್ಬ ಪುಸ್ತಕಭಕ್ಷನೇ ಆಗಿದ್ದನೆನ್ನ

ಚೀನೀ ಕ[illegible]

[illegible]

ಚೆಂಬಲಿಗ [illegible]

[illegible]

ಲಿ [illegible]

[illegible]

ಹೊಸ ಪುಸ್ತಕಗಳು

“ಹರಿಜಾತ”ರ ಕಾದಂಬರಿಯ ಉತ್ತರಕಾಂಡ

ಉತ್ಕಲಾ (೨ ನೆಯ ಭಾಗ)

ಬರೆದವರು ಶ್ರೀ “ಹರಿಜಾತ”. ಪ್ರಕಾಶಕರು ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ. ಪುಟ ೧೯೧, ಬೆಲೆ ೨ ರೂಪಾಯಿ.

‘ಉತ್ಕಲೆ’ಯ ಮೊದಲಭಾಗವು ಆಗಲೇ ಓದುಗರಿಗೆ ಪರಿಚಿತವಿದೆ. ಅದನ್ನು ವಿಮರ್ಶಿಸುವಾಗ ಕಾದಂಬರಿಯ ಹೆಸರಾಗಿ ಅಲಂಕೃತವಾದ ಉತ್ಕಲೆಗೆ ಸ್ಥಾನವೇ ಇಲ್ಲವೆಂದು ಬರೆಯಲಾಗಿತ್ತು. ಆ ದೋಷವನ್ನು ಇಲ್ಲದಂತೆ ಮಾಡಲು ಈ ಎರಡನೆಯಭಾಗವನ್ನು ಬರೆಯಲಾಗಿದೆ. ಮೊದಲನೆಯದು ಹೇಗೆ ಒಂದು ಸಂಪೂರ್ಣ ಕಥೆಯೆಂದು ತೋರುತ್ತಿತ್ತೋ ಎರಡನೆಯದೂ ಹಾಗೇ ತೋರುತ್ತದೆ. ಅದೇ ಮೇರೆಗೆ ಮೊದಲನೆಯದನ್ನು ಹೇಗೆ ೨ ನೆಯ ದಕ್ಕೆ ಮುಂದುವರಿಸಲಾಯಿತೋ ಹಾಗೇ ಈ ಎರಡನೆಯದನ್ನೂ ಮನಸ್ಸು ಬಂದರೆ ಗ್ರಂಥಕರ್ತರು ಮುಂದುವರಿಸಬಹುದಾಗಿದೆ.

ಮೊದಲನೆಯ ಭಾಗದಲ್ಲಿಯ ಎಂಕಣ್ಣನೇ ಇದರಲ್ಲೂ ಕಥಾನಾಯಕ; ಉತ್ಕಲೆ ಕಥಾನಾಯಿಕೆ. ಮೊದಲಿನಂತೆಯೇ ಇಲ್ಲಿಯೂ ಎಂಕಣ್ಣನು ಹಿಂದುಸ್ತಾನದ ಇಂದಿನ ಸಾಮಾನ್ಯ ಮಧ್ಯಮ ವರ್ಗದ ಅರ್ಧಶಿಕ್ಷಿತನಾದ ಅರ್ಧಗ್ರಾಮೀಣಸ್ವಭಾವದ ಬ್ರಾಹ್ಮಣನೆನಿಸಿದ್ದಾನೆ. ಉತ್ಕಲೆ ಇಂದಿನ ಸುಶಿಕ್ಷಿತಳೆನಿಸುವ ಸಾರಸ್ವತ ಸುಂದರಿ, ರೂಪಶೀಲಮಾಧುರ್ಯವತಿ, ಸಕಲಂಕಚಂದ್ರನಂತೆ ಅವಳ ಸ್ವಭಾವ. ವಿದ್ಯೆ ರೂಪ ಧನ ಶೀಲಗಳಲ್ಲಿ ಉತ್ಕೃಷ್ಟಳಾದ ಆವಳು ಎಂಕಣ್ಣನಿಗೊಲಿದುದು ಅವಳ ಪ್ರೇಮಕ್ಕೆ ಸ್ವಾಭಾವಿಕತೆಯನ್ನು ತರತಕ್ಕದ್ದಲ್ಲ. ಅತಿ ಸತೀವ್ರತನೆನಿಸಹೋದ ಎರಡನೆಯ ಮದುವೆಯ ಎಂಕಣ್ಣ ತನ್ನ ಮೊದಲಿನ ಹೆಂಡತಿಯನ್ನು ನೆನೆದು ಮಾಡುವ ಪ್ರಲಾಪ ಪಶ್ಚಾತ್ತಾಪಗಳದೆಸೆಯಿಂದ ಇಲ್ಲಿ ಒಬ್ಬ Neurotic ಅಳುಬುರುಕ ವೇದಾಂತಿ ಅಥವಾ ಸಂಶಯಾತ್ಮನೂ ನರಳುವ ಸ್ವಭಾವದವನೂ ಆಗಿ ತೋರುತ್ತಾನೆ. ಈ ಗಂಡಹೆಂಡಿರು ಮಕ್ಕಳನ್ನು ಸಾಕುವ ಬಗೆ, ಶಿಕ್ಷಿಸುವ ಬಗೆ ಇವಾದ್ದೂ ಇಂದಿನ ಸಾಮಾನ್ಯ ಸಭ್ಯಂಮನ್ಯರೆನಿಸುವ ಜಡರೂ ಮುಗ್ಧರೂ ಆದ ತಾಯ್ತಂದೆಯರ ನಡತೆಗೆ ನಿದರ್ಶನಗಳಾಗಿವೆ. ಎಂಕಣ್ಣನ ತಾಯಿ, ತಂದೆ, ತಂಗಿ, ತಮ್ಮ ಭಾವ ಇವರೆಲ್ಲರೂ ಜೀವಂತ ಸಮಾಜದ ಮೂರ್ತಿಮಂತ ಅರ್ಧಜ್ಞರ ಒಂದೊಂದು ಮಾದರಿಯೆನಿಸಿದ್ದಾರೆ. ಒಟ್ಟಿನ ಮೇಲೆ ಈ ‘ಕಾದಂಬರಿ’ ಒಂದು ವಸ್ತುಚಿತ್ರದಂತಿದೆ. ಎಂಕಣ್ಣನ “ಅಪ್ಟುಡೇಟ್” ಕುಮಾರ ಕುಮಾರಿಯರ ಇತಿಹಾಸವನ್ನು ಮುಂದೆ ಗ್ರಂಥಕರ್ತರು ಬರೆದಾರೆಂದು ಊಹಿಸಬಹುದು. ಏಕೆಂದರೆ ಈ ಭಾಗದಲ್ಲಿ ಎಂಕಣ್ಣ ಮತ್ತು ಅವನ ತಾಯ್ತಂದೆಯರ ಐಹಿಕ ಜೀವನಕ್ಕೆ ಇತಿಶ್ರೀ ಮಾಡಲಾಗಿದೆ.

‘ಎಂಕಣ್ಣನು ಅವಾಕ್ಕಾದನು, ಅವನ ಬಾಯಿಯೇ ನಿಂತುಹೋಯಿತು,’ ಎಂಬಂಥ ಪುನರುಕ್ತಿದೋಷಗಳೂ ‘ನಿಸರ್ಗದ ಚಲನೆಗಳು ಅದರ ಚಾಲಕನ ಬಗ್ಗೆ ತಿಳಿದು ಅವನ ಬಗ್ಗೆ ಯೋಚಿಸಿ, ಅವನ ಸಾನ್ನಿಧ್ಯದ ಸುಖವನ್ನು ಅರಿಯಲು ಯತ್ನಿಸಬೇಕು’ ಎಂಬಂಥ ಅಸಂಬದ್ಧ ವಾಕ್ಯರಚನೆಗಳೂ ನುರಿತ ಸಾಹಿತಿಯ ಬರಹದಲ್ಲಿ ಬರಲಾರವು. ನಿರ್ವೀಣ್ಯ, ವರೆಗಲ್ಲು, ಗೃಹಲಕ್ಷ್ಮಿ, ಜಾತ್ಯಾತೀತ, ವಿಶಿಷ್ಟ ಮುಂತಾದ ಶಬ್ದದೋಷಗಳನ್ನು ಮುದ್ರಣದೋಷಗಳೆಂದರೆ ನಂಬುವುದು ಕಷ್ಟ.

ಸಂಪಾದಕರು ತಮ್ಮ ಮಾತಿನಲ್ಲಿ ಹರಿಜಾತರು ಬರೆದ ಈ ಕಾದಂಬರಿ ಹೊಸ ಜಾತಿಗೆ ಸೇರಿದ್ದೆಂದು ಹೇಳಿರುವುದರಲ್ಲಿ ಸತ್ಯಾಂಶವಿರುವುದು ದುರೂಹ್ಯ. ಈ ಕಾದಂಬರಿಯಲ್ಲಿ ಹರಿಜಾತರು ಪ್ರದರ್ಶಿಸಿದ ಸಾಮಾಜಿಕ ಜೀವನ ಸಂಪಾದಕರೆನ್ನುವಂತೆ ಭವಿಷ್ಯತ್ತಿನದಾಗಿರದೆ, ಪಾತ್ರಸ್ವಭಾವಗಳನ್ನು ಕಂಡರೆ ವರ್ತಮಾನ ಕಾಲಿಕವೇಆಗಿದೆ ಎನ್ನಬೇಕಾಗುತ್ತದೆ. ಪುಟಸಂಖ್ಯೆಯ ಮೇಲೆ ಹೇಳುವುದಾದರೆ ಬೆಲೆ ನ್ಯಾಯ್ಯವಾದದ್ದು; ಅಚ್ಚಿನ ಮಾದರಿಯನ್ನು ನೋಡಿದರೆ ಅದರ ನ್ಯಾಯ್ಯತೆಯ ಬಗ್ಗೆ ಸಂಶಯಬರುವಂತಿದೆ. ಮಿಕ್ಕೆಲ್ಲ ಸಂಗತಿಗಳಲ್ಲಿ ಕಾದಂಬರಿ ಚೆನ್ನಾಗಿದೆ, ಸುನೀತಿಯನ್ನು ಸೂಚಿಸುವಂಥದ್ದಾಗಿದೆ, ಸುಧಾರಕರಿಗೆ ಒಳ್ಳೆಯ ಬಂಡವಾಗಬಹುದಾಗಿದೆ.

ಮಹಾತ್ಮವಿಜಯ (ಸಂಸ್ಕೃತ)

ಬರೆದವರು ವಿದ್ಯಾಸಾಗರ ಕೆ. ಎಲ್. ವಿ ಶಾಸ್ತ್ರಿ. ಪ್ರಕಾಶಕರು ಶ್ರೀ ಆರ್. ಎಸ್. ವಾಧ್ಯಾರ್ ಎಂಡ್ ಸನ್ಸ್, ಬುಕ್ ಸೆಲ್ಲರ್ಸ್ ಎಂಡ್ ಪಬ್ಲಿಶರ್ಸ್, ಕಲ್ಪಾಥಿ, ಪಾಲ್ಘಾಟ್.

“ಮಹಾತ್ಮ ವಿಜಯ”ದಲ್ಲಿ ಅಷ್ಟೋತ್ತರ ಶತ ನುಡಿಗಳಿವೆ. ಕಾಲಿದಾಸನ ಶೈಲಿಯನ್ನೂ ಛಂದೋಗತಿಯನ್ನೂ ಅನುಸರಿಸಿ ಗ್ರಂಥಕರ್ತರು ಇದನ್ನು ಬರೆಯಹೊರಟಂತೆ ತೋರುತ್ತದೆ.

ಲೋಕಂ ಸದ್ಯಸ್ತ್ವಾ ತಮಸಾಭಿಭೂತ-
ಮುದ್ವೇಗಮುದ್ವೇಲಮವಾಪ್ಯ ಚಿತ್ರೇ
ಕಂ ಭಾಸಯನ್ನುಜ್ವಲಯಾತ್ಮ ಭಾಸಾ
ಭಾಸ್ವಾನಿವಾದ್ಯೋತತ ಗೋಸಹಸ್ರೈ:
ದೀನಾನದೀನೈಃ ಪರಿಭೂಯಮಾನಾನ್
ವಿಲೋಕ್ಯಲೋಕಂ ಸ ವಿನೇತುಕಾಮ:
ಸ್ವಾರ್ಥಂ ವಿದೂರೇ ತೃಣವದ್ವಿಧೂಯ
ಪರಾರ್ಥಮಾತ್ಮಾನಮುದಾಪ್ಯಯಾಲುಃ

ಎಂಬ ಛಂದೋಬಂಧಗಳು ಮೇಲಿನ ಮಾತಿಗೆ ನಿದರ್ಶನಗಳಾಗಬಲ್ಲವು.

“ಅಲಂಘನೀಯಾ ಖಲು ಸಂಘಶಕ್ತಿಃ” ಎಂಬ ಅರ್ಥಾಂತರ ನ್ಯಾಸ, “ತಸ್ಮಿನ್ನುದಂತೇ ಪ್ರಸೃತೇ ದುರಂತೇ’ ಎಂಬಲ್ಲಿ ಕಾಣುವ ಅನುಪ್ರಾಸ, ಅದರ ಮುಂದಿನ “ಝುಟಿತ್ಯಚಾಲೀದಚಲಾಖಿಲಾಪಿ” ಎಂಬ ಅತಿಶಯೋಕ್ತಿ ಮುಂತಾದ ಅಲಂಕಾರಗಳೂ

ಜಗನ್ಮಹಾಪೋತಪಥಪ್ರದೀಪ:
ಪ್ರಭಂಜನೋ ಭೂಮಿಪತಿದ್ರುಮಾಣಾಂ
ದವಾನಲೋ ದೋಷಸರೀಸೃಪಾಣಾಂ
ಕಲ್ಪಾಂತಕಾಲಃ ಕಪಟೋಚ್ಚಯಸ್ಯ

ಎಂಬ ಗಾಂಧಿವರ್ಣನಾಪರ ರೂಪಕೋಕ್ತಿಯೂ ಸರಳ ಸುಂದರವಾಗಿಯೂ ರಸಪೋಷಕವಾಗಿಯೂ ಇರುವುದು ಈ ಕಾಲದಲ್ಲಿ ಬರೆದ ಈ ಸಂಸ್ಕೃತ ಗ್ರಂಥಕ್ಕೆ ಒಂದು ಹೆಮ್ಮೆಪಡಬೇಕಾದ ಗುಣವೆಂದೇ ಹೇಳಬೇಕು.

ಗೋಡ್ಸೆಯ ಗುಂಡಿನಿಂದ ನೆಲಕ್ಕುರುಳಿದ ಮಹಾತ್ಮರ ವರ್ಣನೆ ಬಹು ರಸಾರ್ದ್ರವಾದ ಚಿತ್ರವನ್ನು ನಮ್ಮೆದುರಿಗಿಡುತ್ತದೆ.—

ತತ್ಪಾದಸೇವಾಮುಕರೋಚ್ಚಿರಂ ಯಾ
ಸಾ ಪಾದುಕಾ ಶೋಕಭರಾಭಿಭೂತಾ
ದೃಷ್ಟ್ವೈವ ತಸ್ಯಾಗ್ನಿಶರೇಣ ವೇಧಂ
ಕ್ವಚಿತ್ತಿರೋಭೂತ್ಕ್ವಚಿದ್ವಿನಾಸಿ
ಮಹಾತ್ಮನೋ ಹಸ್ತತಲೇ ಗೃಹೀತೋ
ದಂಡೋಪಿ ದಾಂತಶ್ಚಿರಸೇವನೇನ
ಅಗ್ನ್ಯಸ್ತ್ರಮೋಕ್ಷಾರಮುತಾದಯಿತ್ವಾ
ಸ್ವಯಂ ಕ್ಷಿತೌ ಮೂರ್ಚ್ಛಿತವತ್ಪಪಾತ

ಗಾಂಧಿಯವರ ಜೀವನದ ಅತಿ ಸ್ವಲ್ಪಾಂಶವನ್ನು ವಸ್ತುವಾಗಿ ತೆಗೆದುಕೊಂಡು ಬರೆದ ಗೀತವಾದರೂ, ಇದು ಸುಶ್ಲಿಷ್ಟ ಕಾವ್ಯಲಕ್ಷಣವುಳ್ಳ ಒಂದು ಖಂಡಕಾವ್ಯವೆನಿಸಿ ಸಹೃದಯರ ಹೃದಯಕ್ಕೆ ಆಪ್ಯಾಯಮಾನವಾಗಬಲ್ಲದು. ಇದರ ಶೈಲಿಯ ಸರಳತೆ, ಪ್ರಸಾದ ಮತ್ತು ಮಾಧುರ್ಯಗಳದೆಸೆಯಿಂದಲೂ ಗಾತ್ರದ ಸ್ವಲ್ಪತೆಯಿಂದಲೂ ಸಂಸ್ಕೃತಾಭ್ಯಾಸಿಗಳಿಗೆ ಇದನ್ನು ಪಠ್ಯ ಪುಸ್ತಕವನ್ನಾಗಿ ಏಕೆ ಇಡಬಾರದು? ಎಂದು ಕೆಲ ಶಿಕ್ಷಕರಿಗೆ ಎನಿಸಿದರೆ ಅದನ್ನು ಅಸಹಜವೆನ್ನಲಾಗದು. ಹೊಸಕಾಲದ ಒಂದು ಜನಪ್ರಿಯ ಶಾಂತವೀರ ವ್ಯಕ್ತಿಯನ್ನು ಸಂಕ್ಷೇಪತಃ ಬಣ್ಣಿಸುವ ಈ ರಮ್ಯಗೀತಕಾರರಾದ ಶ್ರೀ ಶಾಸ್ತ್ರಿಗಳ ಪ್ರಸ್ತುತ ಪ್ರಯತ್ನಕ್ಕೆ ಸಂಸ್ಕೃತ ಸಹೃದಯರ ಸಹಾನುಭೂತಿ ಮತ್ತು ಪ್ರೋತ್ಸಾಹ ಸಿಗುವುದು ಸ್ವಾಭಾವಿಕವೂ ಅವಶ್ಯಕವೂ ಆಗಿದೆ.

ಮುಂಬಯಿಯ ಹಿಂದೀ ಒಕ್ಕಲತನದ ಅರ್ಥಶಾಸ್ತ್ರ ಸಂಘದ ಶ್ರೀ ಬಿ ಎಸ್ ಮಾವಿನಕುರ್ವೆಯವರು Our Farmer (Vora & Co Kalbadevi Rd., Bombay Rs. 1/8.) ಎಂಬ ತಮ್ಮ ಚಿಕ್ಕ ಪುಸ್ತಕದಲ್ಲಿ ಹಿಂದುಸ್ತಾನದ ಒಕ್ಕಲಿಗನ ಅವಸ್ಥೆಯನ್ನೂ ಅದರ ಸುಧಾರಣೋಪಾಯಗಳನ್ನು ಸರಳವಾಗಿ ಚಿತ್ರಗಳ ಸಹಾಯದಿಂದ ಬಣ್ಣಿಸಿದ್ದಾರೆ. ಇದರಲ್ಲಿ ಹೊಸತೇನೂ ಇಲ್ಲದಿದ್ದರೂ ಸಾಮಾನ್ಯ ವಿಷಯಗಳನ್ನು ಪಾರಿಭಾಷಿಕ ಶಬ್ದಗಳ ಬಾಹುಲ್ಯದಿಂದ ಜಟಿಲವಾಗಿ ಮಾಡುವ ಅರ್ಥಶಾಸ್ತ್ರಜ್ಞರ ವಿಧಾನವನ್ನು ಬಿಟ್ಟು ಶಾಸ್ತ್ರಜ್ಞನಲ್ಲದವರಿಗೂ ತಿಳಿಯುವಂತೆ ನಿರೂಪಿಸಿದ್ದೇ ಇದರ ದೊಡ್ಡ ಗುಣ. ಪ್ರಾದೇಶಿಕ ಭಾಷೆಗಳಲ್ಲಿ ಇದರ ಆ ವೃತ್ತಿಗಳು ಹೊರಟರೆ ಉಪಯೋಗವಾದೀತು.

ನಿಮಿಷಾವಲೋಕನ

ಕಾಂಗ್ರೆಸ್ ಸೇವಾದಳ ವ್ಯಾಯಾಮದಲ್ಲಿ ಅಜಾದ ಹಿಂದ ಸೇನೆಯ ಶ್ರೀ ವಿಠಲರಾವ್ ಸಿಂಧೆ ಹಾಗು ಶ್ರೀ ರಾಮರಾವ್ ಇವರ ಸಹಾಯದಿಂದ ಬೆಂಗಳೂರಿನ ಕೇಂದ್ರ ಸೇವಾದಳ ಸಮಿತಿ (ಅರಳೇಪೇಟೆ)ಯವರು ಸೇವಾದಳದ ಕವಾಯತ್ ಮೊದಲಾದ ಅಂಗಸಾಧನ ವಿಧಾನಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಎಂಟಾಣೆ ಬೆಲೆಯ ಪ್ರಸ್ತುತ ಪುಸ್ತಕವು ಮೊದಲನೆ ಭಾಗವಾಗಿದ್ದು ಸೇವಾದಲದವರು ಎಲ್ಲೆಡೆಯಲ್ಲೂ ಒಂದೇ ಪ್ರಕ್ರಿಯೆ ಪರಿಭಾಷೆಗಳನ್ನು ಉಪಯೋಗಿಸಲು ಸಹಾಯವಾಗದಿರದು.

ಶಿವಶರಣರ ಅಸ್ಪೃಶ್ಯೋದ್ಧಾರ ಕಾರ್ಯದಲ್ಲಿ ಶ್ರೀ ಜೀರಿಗೆ ಕಟ್ಟಿಬಸಪ್ಪ ಮತ್ತು ಎಸ್. ಆರ್. ಮಲ್ಲಪ್ಪನವರು ಅಸ್ಪೃಶ್ಯತೆಯೆಂಬ ಕುಪದ್ಧತಿಯನ್ನು ಅಲ್ಲಗಳೆದು ಪ್ರಮುಖ ಶಿವಶರಣರು ನುಡಿದ ವಾಕ್ಯಗಳಲ್ಲಿ ನೂರೊಂದನ್ನು ಆಯ್ದು ಕೊಟ್ಟಿದ್ದಾರೆ. ಲಿಂಗವಂತರಲ್ಲೂ ಅಸ್ಪೃಶ್ಯತೆಯ ಭ್ರಮೆಯುಂಟಾಗಿರುವ ಈ ಕಾಲದಲ್ಲಿ ಮಹಾಲಿಂಗವಂತ ಗುರುಗಳ ಈ ಸ್ಪಷ್ಟಾಭಿಪ್ರಾಯಗಳನ್ನು ಎತ್ತಿ ತೋರಿಸಿದ ಸಂಪಾದಕರು ಅಭಿನಂದನೀಯವಾಗಿದ್ದಾರೆ. ಮುನ್ನುಡಿಯಲ್ಲಿ ಶ್ರೀ ಕಟ್ಟಿ ಬಸಪ್ಪನವರು ವರ್ಣಾಶ್ರಮಧರ್ಮದ ಇತಿಹಾಸವನ್ನು ಸ್ಥೂಲವಾಗಿ ಅವಲೋಕಿಸುವಲ್ಲಿ ಶ್ರೀ ಕೃಷ್ಣನು ವರ್ಣಾಶ್ರಮ ವಿರೋಧಿಯಾಗಿದ್ದನೆಂದುದು ವಸ್ತುಸ್ಥಿತಿಯ ವಿಪರ್ಯಾಸವೇ ಸರಿ. ಅಂತೆಯೇ ಐತಿಹಾಸಿಕ ಸಿಂಹಾವಲೋಕನ ಮಾಡುವಲ್ಲಿ ಲಿಂಗಾಯತರಲ್ಲೂ ಒಂದು ಬಗೆಯ ವರ್ಣಾಶ್ರಮ ಪದ್ಧತಿ ಬೆಳೆದು ಬಂದುದರ ಉಲ್ಲೇಖ ಮಾಡದ್ದು ಅದಕ್ಕೆ ಅಪೂರ್ಣತೆಯನ್ನು ಕೊಟ್ಟಿದೆ. ಆದರೂ ಮಹಾತ್ಮರ ಸ್ಮಾರಕವಾಗಿ ಹೊರಡಿಸಿದ ಈ ಪುಟ್ಟ ಹೊತ್ತಿಗೆ ಅವರ ಮಹಾಧ್ಯೇಯಗಳಲ್ಲೊಂದನ್ನು ಸಾಧಿಸಲು ನಿಶ್ಚಯವಾಗಿಯೂ ಸಹಾಯವಾಗಿದೆ. ಇದನ್ನು ಶಿಕಟೂರಿನ ಶ್ರೀ ಎಸ್. ಆರ್. ಮಲ್ಲಪ್ಪನವರಿಂದ ಒಂದು ರೂಪಾಯಿಗೆ ಪಡೆಯಬಹುದು.

ಲಾವಣಿ ಕಟ್ಟುವಲ್ಲಿ ಈಗಾಗಲೆ ಹೆಸರಾಗಿರುವ ಶ್ರೀ ಕುಲಕರ್ಣಿ ಕೇಶವರಾಯರು ಬಸವ ಜಯಂತಿಯ ಉತ್ಸವದ ಸಮಾರಂಭಕ್ಕಾಗಿ ಬರೆದ **ಶ್ರೀ ಬಸವೇಶ್ವರರ ಲಾವಣಿ ಪದ**ವನ್ನು ಶ್ರೀನಿವಾಸ ಕೇಶೋ ಕುಲಕರ್ಣಿ, ಸ್ವಾತಂತ್ರ್ಯ ಪ್ರಕಾಶನ, ಧಾರವಾಡ ಇವರಿಂದ ೪ ಆಣೆಗೆ ಪಡೆಯಬಹುದು.

ಬಾಗಲಕೋಟೆಯಿಂದ ಶ್ರೀ ಜಿ. ಎಲ್. ಸಜ್ಜನ ಬಿ. ಎ., ಅವರ ಸಂಪಾದಕತ್ವದಲ್ಲಿ ಕ್ರೌನ್ ೧/೪ ಆಕಾರದಲ್ಲಿ ಹೊರಡತೊಡಗಿರುವ ವ್ಯಾಪಾರಿ ಮಾಸಪತ್ರಿಕೆ ವ್ಯಾಪಾರ ವ್ಯವಹಾರ ಆರ್ಥಿಕ ವಿಚಾರಗಳಿಗೆ ಮೀಸಲಾಗಿರುವ ಪತ್ರಿಕೆಗಳ ಅಭಾವವಿರುವ ಕರ್ನಾಟಕಕ್ಕೆ ಖಂಡಿತವಾಗಿ ಸ್ವಾಗತಾರ್ಹವಾಗದಿರದು. ವಾರ್ಷಿಕ ವರ್ಗಣಿ ೫ ರೂ. ಬಿಡಿ ಸಂಚಿಕೆ ೮ ಆಣೆ.

ಮೊನ್ನೆ ಯುಗಾದಿಯಿಂದ ಶ್ರೀ ರ್‍ಯಾಮರಾವ ಚಿತ್ರಗಾರರ ಸಂಪಾದಕತ್ವದಲ್ಲಿ ಎರೇಬೂದಿಹಾಳ (ಪೋ. ಲಕ್ಷ್ಮೇಶ್ವರ)ದಲ್ಲಿ ಹೊರಡತೊಡಗಿರುವ ಕ್ರೌನ್ ೧/೮ ಆಕಾರದ **ನಿಸರ್ಗ ಚಿಕಿತ್ಸಕ** ವೆಂಬ ತ್ರೈಮಾಸಿಕ ಪತ್ರಿಕೆ ಹೆಸರೇ ಸೂಚಿಸುವಂತೆ ನಿಸರ್ಗ ಚಿಕಿತ್ಸಾ ಪದ್ಧತಿಯ ಪ್ರಸಾರಕ್ಕೆ ಮೀಸಲಾಗಿದೆ ವಾರ್ಷಿಕ ರೂ. ೨|– ಬಿಡಿ ಪ್ರತಿ ಆಣೆ ೮.

ಬಾಳೇಕುದುರು ಶ್ರೀಮಠದ (ದ. ಕ.) ಶ್ರೀಮದಾನಂದಾಶ್ರಮ ಸ್ವಾಮಿಗಳ ಅಧ್ಯಕ್ಷತೆಯಲ್ಲಿ **ಶ್ರೀ ಶಂಕರಜಯಂತಿ ಸಭೆ** ೧೯೪೮ ರಲ್ಲಿ ನಡೆದುದರ ವರದಿ ನಮ್ಮ ಕೈಸೇರಿದೆ. ಶಂಕರಜಯಂತ್ಯುತ್ಸವ ಕಾಲದಲ್ಲಿ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ೧೦೦೦ ರೂಪಾಯಿ ಮೇಲ್ಪಟ್ಟು ಸಂಭಾವನೆ ಸಂದಿದ್ದು ಅದ್ವೈತ ತತ್ವದ ಬಗ್ಗೆ ಉಪನ್ಯಾಸಗಳೂ ನಡೆದುದಾಗಿ ವರದಿಯಿಂದ ತಿಳಿಯುತ್ತದೆ.

ಮೇ ೯ ರಿಂದ ೧೫ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ವ್ಯಾಪಾರ ವ್ಯವಸಾಯದಲ್ಲಿರುವವರಿಗೆ ಕ್ಲೇಶ. ನಿಮ್ಮ ಹೆಂಡತಿಯ ಪ್ರಕೃತಿ ನೆಟ್ಟಗಿರುವದು. ನೀವಿಬ್ಬರೂ ಕುರುಡ ಹಿಡಿದದ್ದೇ ಹಟವೆಂದು ನೀವಿಬ್ಬರೂ ಹಟ ಸಾಧಿಸ ಹೋಗುವಿರಿ. ಪ್ರಿಯ ಅಪ್ರಿಯ ವ್ಯಕ್ತಿಗಳ ಸಹವಾಸದಿಂದ ಉಲ್ಲಾಸ ವೃತ್ತಿ ಇವೆರಡನ್ನೂ ಅನುಭವಿಸಬೇಕಾಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ಚನ್ನಾಗಿದ್ದರೂ ಸ್ಥಾವರ ವಸ್ತು ಪ್ರತಿಕೂಲ ಘಟನೆಗಳಿಂದ ಚಿಂತೆಯುಂಟಾದೀತು. ನೀವು ಸ್ವತಂತ್ರ ವ್ಯವಸಾಯ ಮಾಡದೆ ನೌಕರಿ ಮಾಡುತ್ತಿದ್ದರೆ ತುಂಬ ಅನುಕೂಲ. ನಿಮ್ಮ ಶತ್ರುಗಳ ಬಲ ಬೇಗನೆ ಕುಗ್ಗುವ ಲಕ್ಷಣವಿಲ್ಲ. ಅಲ್ಪಸ್ವಲ್ಪ ಜಯ ದೊರೆತರೂ ಅದು ಬರಿ ಮಾತಿನ ಜಯವಲ್ಲದೆ ಬೇರಿಲ್ಲ. ಪ್ರವಾಸಾದಿ ಕಾರ್ಯಗಳು ಸಾಧಾರಣ. ಭರಣಿಗೆ ತೊಂದರೆ ಕಡಿಮೆ. ತಾ. ೧೧, ೧೩, ೧೫ ಅನುಕೂಲ.

ವೃಷಭ

ನಿಮ್ಮ ಭಾಗ್ಯ ಇನ್ನೂ ಕೆಲವಾರ ಕುಂಟುತ್ತ ನಡೆಯುತ್ತ ಸಾಗುವದು. ಹೆಂಡತಿಗೆ ಒಂದಲ್ಲ ಒಂದು ಬಗೆಯ ಅನಾರೋಗ್ಯ. ಬಂಧುಗಳೂ ನೆರೆಹೊರೆಯವರೂ ಅಲ್ಲ ಸಲ್ಲದ ಅಪವಾದ ಹೊರಿಸಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಆದಾಯ ಚನ್ನಾಗಿದ್ದರೂ ಮಿತಿಮೀರಿ ವೆಚ್ಚ ಮಾಡುವ ನಿಮ್ಮ ಬುದ್ಧಿಯನ್ನು ಹಿಡಿತದಲ್ಲಿಟ್ಟುಕೊಳ್ಳದಿದ್ದರೆ ಕಠಿಣ ಹೋಗುವದು. ವಾಯಿದ್ಯಕೊಡನೆ ಕ್ಷುದ್ರಮನಸ್ತಾಪ. ಸ್ಥಾವರದಲ್ಲಿ ನಿಮ್ಮನ್ನು ಮೋಸಗೊಳಿಸುವ ಪ್ರಯತ್ನ ನಡೆಸಲಾಗಬಹುದು ಜೋಕೆ. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸ ಒಳಿತಲ್ಲ, ಭೆಟ್ಟಿ ಪತ್ರ ವ್ಯವಹಾರಗಳೇ ಸುಖ. ರೋಹಿಣಿನಕ್ಷತ್ರದವರು ತುಂಬ ಎಚ್ಚರಪಡಬೇಕು. ತಾ. ೯, ೧೦, ೧೩ ಅನುಕೂಲ.

ಮಿಥುನ

ಈ ವಾರಕ್ಕಿಂತ ಮುಂದಿನವಾರ ನಿಮಗೆ ಹೆಚ್ಚು ಅನುಕೂಲ. ನಿಮ್ಮ ಸ್ವಾಸ್ಥ್ಯ ಕೆಡಬಹುದು. ಹೆಂಡತಿಯ ವರ್ತನೆಯಿಂದ ರೋಸಿ ಪರಸ್ತ್ರೀಯ ಕಡೆ ನಿಮ್ಮ ಚಿತ್ತ ಒಲೆಯದಂತೆ ನೋಡಿಕೊಳ್ಳಿರಿ. ಉದ್ಯೋಗದಲ್ಲಿ ಲಾಭವಿದ್ದರೂ ಪ್ರತಿಷ್ಠೆಗೆ ಧಕ್ಕೆ ಬರುವ ಭಯ. ಸ್ಥಾವರದಲ್ಲಿ ಹೊಚ್ಚ ಹೊಸ ಶತ್ರುಗಳುತ್ಪನ್ನರಾಗಬಹುದಲ್ಲದೆ ಇದ್ದ ಶತ್ರುಗಳೂ ತುಂಬ ಕಾಡುವರು. ಪ್ರವಾಸ ಹಿತ. ಭೆಟ್ಟಿ ಪತ್ರ ವ್ಯವಹಾರಗಳು ಫಲಿಸುವದು ಸಂಶಯ. ಆರ್ದ್ರೆಗೆ ತೊಂದರೆ ಹೆಚ್ಚು. ತಾ. ೧೧, ೧೩, ೧೫ ಉತ್ತಮ.

ಕರ್ಕ

ಎಲ್ಲರ ಪ್ರಕೃತಿಯೂ ಚನ್ನಾಗಿದ್ದರೂ ಒಂದು ಸಾರ್ವಜನಿಕ ಪ್ರಶ್ನೆಯಲ್ಲಿ ನಿಮ್ಮೊಳಗೆ ತೀವ್ರ ಮತಭೇದವಾದೀತು. ಸ್ಥಾವರಜಂಗಮ ಸಂಪತ್ತಿಗೆ ಕುಸು ಕುಸು ಹಾನಿಯಾದರೂ ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ಚನ್ನಾಗಿ ದೊರೆಯುವದರಿಂದ ನಿಮ್ಮ ಹರ್ಷಸ್ಸು ಮತ್ತು ಸಕ್ತಿ ಬೆಳೆಯುವವು. ವಾದ ಸ್ಪರ್ಧೆಗಳಲ್ಲಿ ನಿಮಗೆ ನಿಶ್ಚಿತ ಅನುಕೂಲ ವಾತಾವರಣ ಬರಬೇಕಾದರೆ ಇನ್ನೂ ಕೆಲ ದಿನ ಕಾಯಬೇಕು. ಸದ್ಯಕ್ಕಂತೂ ನಿಮಗೆ ಪ್ರತಿಕೂಲವಿಲ್ಲೆಂದು ಹೇಳಬಹುದು. ಪ್ರವಾಸ ಸುಖದ್ದಲ್ಲ. ಭೆಟ್ಟಿ ಪತ್ರ ವ್ಯವಹಾರ ಅಡ್ಡಿಯುಳ್ಳ. ಪುಷ್ಯ ನಕ್ಷತ್ರದವರಿಗೆ ಬಹಳಷ್ಟು ಪ್ರಯತ್ನಶೀಲತೆ ಬೇಕು. ತಾ. ೯, ೧೦, ೧೩, ೧೫ ಅನುಕೂಲ.

ಸಿಂಹ

ನಿಮ್ಮ ದಂಪತಿಗಳಿಬ್ಬರ ಪ್ರಕೃತಿಯೂ ಚನ್ನಾಗಿದ್ದರೂ ಮಕ್ಕಳ ಅನಾರೋಗ್ಯ ಅಥವಾ ಅವರ ಅಭ್ಯಾಸದ ಮಾರ್ಗದಲ್ಲಿರುವ ಕಂಟಕಗಳಿಂದ ಚಿಂತಿಸಬೇಕಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚನ್ನಾಗಿದೆ. ಆದರೆ ಮುಂದು ವರಿಕೆಯ ಪ್ರವೃತ್ತಿ ಸಲ್ಲದೆಂದು ಎಚ್ಚರಕೊಡಬೇಕಾಗಿದೆ. ಮಿತ್ರರು ಸ್ವಲ್ಪ ವಿರೋಧಿಸಬಹುದು. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಪತ್ರವ್ಯವಹಾರ ಮತ್ತು ಭೆಟ್ಟಿ ಅನುಕೂಲ. ಪ್ರವಾಸ ಅಷ್ಟಕ್ಕಷ್ಟೆ. ಪುಬ್ಬಾ ನಕ್ಷತ್ರದವರಿಗೆ ಅಶುಭ ಫಲ ಕಡಿಮೆ. ತಾ. ೯, ೧೦, ೧೩ ಉತ್ತಮ.

ಕನ್ಯಾ

ಆರೋಗ್ಯ ಚನ್ನಾಗಿರುವದು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಚನ್ನಾಗಿರುವದಲ್ಲದೆ ಅಕಸ್ಮಾತ್ ಲಾಭವೂ ಆಗುವ ಸಂಭವವುಂಟು. ಆದರೆ ಧರ್ಮಕಾರ್ಯದಲ್ಲಿ ಬರಬಹುದಾದ ವಿಘ್ನಗಳಿಂದಲೂ ಪ್ರತಿಯೊಂದು ಕೆಲಸದಲ್ಲಿಯೂ ಇಲ್ಲದ ತೊಂದರೆ, ಇಮ್ಮಡಿ ಖರ್ಚು ಆಗುವದರಿಂದಲೂ ಮನಸ್ಸು ಖಿನ್ನವಾಗಬಹುದು. ವಾದ ಸ್ಪರ್ಧೆಗಳಲ್ಲಿ ವಿಶೇಷವೇನೂ ಘಟಿಸದು. ಪ್ರವಾಸಾದಿ ಕಾರ್ಯಗಳು ಇಷ್ಟದಂತೆ ನೆರವೇರುವವು. ಹಸ್ತಾ ನಕ್ಷತ್ರದವರಿಗೆ ಕೊಂಚ ತೊಂದರೆ ಹೆಚ್ಚು. ತಾ. ೯, ೧೦, ೧೧, ೧೩ ಒಳಿತು.

ತುಲಾ

ದಂಪತಿಗಳಿಬ್ಬರ ಪ್ರಕೃತಿಯೂ ಅಷ್ಟಿಷ್ಟು ಅಸ್ವಸ್ಥವಾದರೂ ತುಂಬ ಸುಖದಿಂದಲೇ ನೀವು ದಿನ ಕಳೆಯುವಿರಿ. ಪ್ರಿಯ ಜನರ ಸಹವಾಸ, ಸಂತತಿಯ ಉನ್ನತಿ, ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ಉತ್ತಮ. ಆದರೆ ವೆಚ್ಚ ಬಹಳ. ಯಾವುದೋ ಒಂದು ಚಿಂತೆಯಿಂದ ಮನಸು ಅಸ್ವಸ್ಥವಾಗುವದು. ವಾದ ಸ್ಪರ್ಧೆಗಳಲ್ಲಿ ನಿಮಗೆ ಅನುಕೂಲತೆ. ಆದರೆ ಹಿತಶತ್ರುಗಳ ಬಗ್ಗೆ ಜಾಗರೂಕರಾಗಿರಿ. ಪ್ರವಾಸಾದಿ ಕಾರ್ಯಗಳಲ್ಲಿ ಸಾಮಾನ್ಯ ಯಶ. ಸ್ವಾತಿಗೆ ಸ್ವಲ್ಪ ಕಷ್ಟ ಹೆಚ್ಚು. ತಾ. ೧೧, ೧೩, ೧೪, ೧೫ ಅನುಕೂಲ.

ವೃಶ್ಚಿಕ

ನಿಮ್ಮ ಸುದೈವ ಇನ್ನೂ ಕೆಲ ದಿನ ಇರುವುದರಿಂದ ನಿಶ್ಚಿಂತರಾಗಿರಿ. ಪ್ರಕೃತಿ ಉತ್ತಮ. ಸ್ತ್ರೀಸುಖವೂ ಚನ್ನಾಗಿರುವದು ಮಕ್ಕಳಲ್ಲೊಬ್ಬನು ಬಹಳ ಏಳಿಗೆ ಹೊಂದುವನು. ಉದ್ಯೋಗದಲ್ಲಿ ನಿಮ್ಮ ಲಾಭ ಪ್ರತಿಷ್ಠೆ ಹೆಚ್ಚುವದು. ಆದರೆ ಅಧಿಕಾರದ ದುರುಪಯೋಗ ಮಾಡಿ ಶತ್ರುಗಳನ್ನು ಹೆಚ್ಚಿಸಿಕೊಳ್ಳಬೇಡಿರಿ. ವಾದ ಸ್ಪರ್ಧೆಗಳಲ್ಲಿ ತುಂಬ ಯಶ. ಮನೋರಂಜನೆಯ ಸಂದರ್ಭಗಳು ಮೇಲಿಂದ ಮೇಲೆ ಘಟಿಸುವವು. ಭೆಟ್ಟಿ ಅಷ್ಟು ಹಿತವಲ್ಲ. ಪತ್ರವ್ಯವಹಾರವೇ ಲೇಸು. ಪ್ರವಾಸವೂ ಅನುಕೂಲವೆ. ಅನುರಾಧೆಗೆ ಅಷ್ಟು ಅನುಕೂಲ ಕಾಲವಿಲ್ಲ. ತಾ. ೯, ೧೦, ೧೪, ೧೫ ಅನುಕೂಲ.

ಧನು

ನಿಮ್ಮ ಆರೋಗ್ಯ ಚನ್ನಾಗಿರುವದು. ಎಂದು ಆರೋಗ್ಯ! ಭಾಗ್ಯವಿಲ್ಲದ ಹೆಂಡತಿಯನ್ನು ಅನಾದರ ಮಾಡಬೇಡಿರಿ. ಪರಸ್ತ್ರೀ ವಿಷಯದಲ್ಲಿ ನಿಮ್ಮ ವರ್ತನೆ ಲೋಕಾಪವಾದಕ್ಕೆ ಕಾರಣವಾಗಬಹುದು. ಮಕ್ಕಳ ಉನ್ನತಿಯಾದರೂ ಅವರು ವಿಮುಖರಾಗಿ ವರ್ತಿಸುವರು. ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಲು ಇನ್ನೂ ಹಲ ವಾರ ಬೇಕು. ಆದರೂ ಇಮ್ಮಡಿ ವೆಚ್ಚವಾಗಬಹುದು ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿ. ಭೆಟ್ಟಿಯಷ್ಟು ಪತ್ರವ್ಯವಹಾರ ಹಿತಕಾರಿಯಲ್ಲ. ಪ್ರವಾಸವೂ ಸುಖಪ್ರದ. ಪೂರ್ವಾಷಾಢಕ್ಕೆ ಅನಿಷ್ಟ ಕಡಿಮೆ. ತಾ. ೯, ೧೦, ೧೧, ೧೩ ಉತ್ತಮ.

ಮಕರ

ಸ್ವಂತದ ಪ್ರಕೃತಿಗಿಂತ ಹೆಂಡಿರುಮಕ್ಕಳದು ಉತ್ತಮ. ಆದರೆ ಅಂತಃಕಲಹ ನೆರೆಹೊರೆಯವರೊಡನೆ ವಿತಂಡವಾದದ ಪರಿಸ್ಥಿತಿ ಬರಬಹುದು. ಸ್ಥಾವರದಲ್ಲಿ ಒಂದೆಡೆ ಅನುಕೂಲ. ಇನ್ನೊಂದೆಡೆ ಪ್ರತಿಕೂಲ ಮಾತುಗಳು. ಎಲ್ಲಕ್ಕಿಂತ ಈ ವಾರ ನೀವು ವಾಹನದಿಂದಾಗಬಹುದಾದ ಹಾನಿ, ಅಪಘಾತಗಳ ಬಗ್ಗೆ ಎಚ್ಚರಿಕೆ ತಾಳಿರಿ. ಉದ್ಯೋಗದಲ್ಲಿ ಲಾಭ ಪ್ರತಿಷ್ಠೆಗೇನೂ ಕೊರತೆಯಿಲ್ಲವಿದ್ದರೂ ಮಾತು ಮಾತಿನಲ್ಲಿ ಉಪದ್ರವ. ವಾದ ಸ್ಪರ್ಧೆಗಳಲ್ಲಿ ಈ ವಾರದ ಅನುಕೂಲತೆ ಮುಂದಿನ ವಾರ ಉಳಿಯದು. ಭೆಟ್ಟಿಗಿಂತ ಪತ್ರವ್ಯವಹಾರ ಒಳಿತು. ಪ್ರವಾಸ ಹಿತಕರ. ಶ್ರವಣಕ್ಕೆ ತೊಂದರೆ ಹೆಚ್ಚು. ತಾ. ೯, ೧೦, ೧೪, ೧೫ ಅನುಕೂಲ.

ಕುಂಭ

ನಿಮ್ಮ ಆರೋಗ್ಯ ಸ್ವಲ್ಪ ಸಂಶಯಾಸ್ಪದವಾದರೂ ಹೆಂಡತಿ ಮಕ್ಕಳದು ಚೆನ್ನಾಗಿರುವದು. ಸ್ಥಾವರದಲ್ಲಿ ಅನುಕೂಲ ಮಾತುಕತೆ. ಉದ್ಯೋಗದಲ್ಲಿ ಲಾಭದಂತೆ ವೆಚ್ಚವೂ ಬಹಳ. ವಾದ ಸ್ಪರ್ಧೆಗಳಲ್ಲಿ ಅನುಕೂಲ. ಪ್ರವಾಸ ಮತ್ತು ಭೆಟ್ಟಿ ಅಷ್ಟಕ್ಕಷ್ಟೆ. ಪತ್ರವ್ಯವಹಾರ ಲೇಸು. ಶತತಾರಿಕೆಗೆ ಪ್ರಯತ್ನವಿಲ್ಲದೆ ಯಶವಿಲ್ಲ. ತಾ. ೧೧, ೧೩, ೧೪, ೧೫, ಅನುಕೂಲ.

ಮೀನ

ಕಳೆದ ವಾರದಂತೆ ಸಾರ್ವತ್ರಿಕ ಅನುಕೂಲತೆಯಿಲ್ಲದಿದ್ದರೂ ಈ ವಾರವೂ ನಿಮಗೆ ಅಷ್ಟೇನೂ ಕೆಡಕಾಗದು. ಪ್ರಕೃತಿ ಚೆನ್ನಾಗಿದ್ದು ಕೌಟುಂಬಿಕ ಉತ್ಕರ್ಷದ ಮಾರ್ಗ ನಿಷ್ಕಂಟಕವಾಗುವದು. ಆದರೆ ಪ್ರಾಪಂಚಿಕ ಕ್ಲೇಶಗಳು ಒಂದೊಂದಾಗಿ ಉದ್ಭವಿಸಬಹುದು. ಲಾಭ ಚೆನ್ನಾಗಿದ್ದರೂ ಹೊಸ ಹೊಸ ಖರ್ಚಿನ ಮಾರ್ಗಗಳೂ ಉಂಟಾಗುವವು. ವಾದ ಸ್ಪರ್ಧೆಗಳಲ್ಲಿ ಅನುಕೂಲ ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರಾಭಾದ್ರಪದಕ್ಕೆ ಅಷ್ಟು ಒಳಿತಲ್ಲ. ತಾ. ೯, ೧೦, ೧೪, ೧೫ ಅನುಕೂಲ.

ವಿಶ್ವಪ್ರೇಮಿ ನೋಬೆಲ್ ಮಹಾಶಯ

ಲೇ— 'ಗಾಯತ್ರೀತನಯ' ಪೆರ್ಡೂರು

ನೊಬೆಲ್ ಮಹಾಶಯನ ಸಂಪೂರ್ಣ ಹೆಸರು ಸರ್ ಆಲ್‌ಫ್ರೆಡ್ ಬರ್ನಾರ್ಡ್ ನೊಬೆಲ್ ಎಂದು. ಈತನು ೧೮೩೩ ನೆಯ ಇಸವಿಯಲ್ಲಿ ಜನಿಸಿದನು. ಈತನು ಸುಪ್ರಸಿದ್ಧ ಎಂಜಿನಿಯರ್ ಮತ್ತು ರಸಾಯನ ಶಾಸ್ತ್ರಜ್ಞ.

ಇಂದು ನಮ್ಮ ಹಳ್ಳಿಹಳ್ಳಿಗಳಲ್ಲಿ ಡೈನಾಮೈಟ್—ಎಂಬ ವಸ್ತುವಿನ ಹೆಸರು ಹರಡಿದೆ. ಊರ ಮುಂದಿನ ಸಿಹಿನೀರಿನ ಭಾವಿತೋಡಿಸುವಾಗ ದೊಡ್ಡ ಬಂಡೆ ಅಡ್ಡಬಂದರೆ ಅದನ್ನು ಸೀಳಲು ಉಳಿ, ಕೊಡತಿಗೆಗಳಿಗಿಂತ ಡೈನಾಮೈಟ್ ಹೆಚ್ಚು ಅನುಕೂಲವಾದುದೆಂದು ಪ್ರತಿಯೊಬ್ಬ ಹಳ್ಳಿಯವನಿಗೂ ಗೊತ್ತಿದೆ. ಆದರೆ ಕಲ್ಲನ್ನು ಕತ್ತರಿಸಿ ಚೂರುಮಾಡಿ ಬಿಡುವಂತಹ ಆ ವಿಚಿತ್ರ ಅದ್ಭುತ ವಸ್ತುವನ್ನು ಕಂಡುಹಿಡಿದ ಮನುಷ್ಯನಾರು? ಆತನ ವಿಚಾರಗಳೇನು? ಎಂಬುದನ ಅವನು ಅರಿಯ— ಅಲ್ಲದೆ ಅನೇಕ ಸುಶಿಕ್ಷಿತರಿಗೆ ಕೂಡ ಈ ವಿಚಾರ ತಿಳಿಯದು. ಈ ಪ್ರಚಂಡ ಸ್ಫೋಟಕ ವಸ್ತುವಿನ ನಿರ್ಮಾಪಕನ ಹೃದಯವು ಎಷ್ಟು ಕೋಮಲವಾದುದು. ಆ ಹೃದಯವು ವಿಶ್ವಪ್ರೇಮ, ವಿಶ್ವಶಾಂತಿಗೆ ಹೇಗೆ ಹಾತೊರೆಯುತ್ತಿತ್ತು ಎಂಬ ವಿಚಾರ ತಿಳಿದವರ ಸಂಖ್ಯೆ ಬಹು ಸ್ವಲ್ಪ.

ನೊಬೆಲ್ ಮಹಾಶಯನು ವೃತ್ತಿಯಲ್ಲಿ ಎಂಜಿನಿಯರ್ ಆದರೂ, ಆತನ ಆಸಕ್ತಿ ಜನಹಿತದ ಕಡೆಗಿತ್ತು. ವಿಶ್ವದಲ್ಲಿ ಶಾಂತಿಯು ನೆಲೆಗೊಂಡು, ಪ್ರತಿವರ್ಷವೂ ಜನಹಿತ ಸಾಧಕವಾದ ಸಂಶೋಧನೆಗಳು ನಡೆಯಬೇಕೆಂಬುದು ಆತನ ಬಯಕೆಯಾಗಿತ್ತು. ವಿಶೇಷ ವಿಚಾರವೆಂದರೆ, ನೊಬೆಲ್ ಮಹಾಶಯನು ತನ್ನ ಪವಿತ್ರ ಉಚ್ಚ ಕನಸಿನ ಆಶೆಯನ್ನು ಸ್ಥಿರವಾದ ಕಾರ್ಯರೂಪಕ್ಕಿಳಿಸಿದನು. ಈತನು ೧೮೯೬ ರಲ್ಲಿ ತಾನು ಸಾಯುವುದಕ್ಕೆ ಮೊದಲು, ತಾನು ಸಂಪಾದಿಸಿದ ಕೋಟ್ಯಂತರ ರೂಪಾಯಿಗಳ ಆಸ್ತಿಯಿಂದ ೩೭೦೦೦,೦೦೦ ರೂಪಾಯಿಗಳ ಒಂದು ದೊಡ್ಡ ನಿಧಿಯನ್ನು ಸ್ಥಾಪಿಸಿ ಈ ನಿಧಿಯಿಂದ ದೊರೆಯುವ ಆದಾಯದಿಂದ ಪ್ರತಿವರ್ಷವೂ, ೧,೨೦,೦೦೦ ರೂ. ನ ೫ ಬಹುಮಾನಗಳನ್ನು ಕೊಡಬೇಕೆಂದು ನಿರ್ಧರಿಸಿದರು. ಅಂದಿನಿಂದ, ಇಂದಿನ ವರೆಗೆ, ಭೌತಿಕ ಶಾಸ್ತ್ರ, ರಸಾಯನ ಶಾಸ್ತ್ರ, ಶರೀರ ಶಾಸ್ತ್ರ, ಸಾಹಿತ್ಯ, ಶಾಂತಿಸನ್ನಾಹ ಈ ಐದು ವಿಭಾಗಗಳಲ್ಲಿ ಒಂದೊಂದು ವರ್ಷವೂ ಜನಹಿತಕ್ಕೆ ಅತ್ಯಮೌಲ್ಯ ಸಹಾಯ ಮಾಡಿದವರಿಗೆ, ಈ ಬಹುಮಾನಗಳು ಕೊಡಲ್ಪಡುತ್ತಿವೆ.

ಈ ಐದು ವಿಭಾಗಗಳಲ್ಲಿ ಶಾಂತಿಸಾಧನೆಯ ವಿಭಾಗದ ವಿಷಯದಲ್ಲಿ ನೊಬೆಲ್ ಮಹಾಶಯನಿಗೆ ತುಂಬಾ ಆಸಕ್ತಿ ಇತ್ತು. ಈ ಬಹುಮಾನಕ್ಕೆ ತಕ್ಕ ಅಧಿಕಾರಿಯನ್ನು ನಿರ್ಧರಿಸುವ ಬಗ್ಗೆ ಹಲವು ನಿಯಮಗಳನ್ನು ಸೂಚಿಸುತ್ತ, ಆತನು ತನ್ನ ಮರಣಶಾಸನದಲ್ಲಿ ಈ ರೀತಿ ಬರೆದಿರುವನು.

"ಈ ಬಹುಮಾನವನ್ನು ನಿರ್ಧರಿಸುವ ಕಾಲದ ಹಿಂದಿನ ವರ್ಷದಲ್ಲಿ ವಿವಿಧ ಜನಾಂಗಗಳಲ್ಲಿ ಪರಸ್ಪರ ಭ್ರಾತೃಭಾವವರ್ಧನೆಗಾಗಿ, ಯುದ್ಧಸಾಮಗ್ರಿಯ ಹಾಗೂ ಸೇನೆಗಳನ್ನು ತಗ್ಗಿಸಲಿಕ್ಕಾಗಿ ಶ್ರೇಷ್ಠ ರೀತಿಯಿಂದ ಶ್ರಮಿಸಿದ ವ್ಯಕ್ತಿಗೆ ಈ ಬಹುಮಾನವು ಸಲ್ಲತಕ್ಕದ್ದು" ಎಂದಿದ್ದಾನೆ, ಅರ್ಥಾತ್ ಈ ಮೂರು ವಿಧಾನಗಳಿಂದ ವಿಶ್ವಶಾಂತಿಯು ಸಾಧಿಸಲ್ಪಡಬೇಕೆಂದು ನೊಬೆಲ್ ಮಹಾಶಯನು ಸಲಹೆ ಕೊಟ್ಟಿರುವನೆಂಬುದರಲ್ಲಿ ಅನುಮಾನವಿಲ್ಲ. ವಾಸ್ತವವಾಗಿ, ಈ ಮೂರು ಸಾಧನೆಗಳು ಯಶಸ್ವಿಯಾಗಿ ನಡೆಯದಿದ್ದರೆ, ವಿಶ್ವ ಶಾಂತಿಯು ಸಾಧಿಸಲ್ಪಡಲಾರದು.

ಈ ನೊಬೆಲ್ ಬಹುಮಾನಗಳಿಗೆ ದೇಶ, ಭಾಷೆಗಳ ಅಡ್ಡಿ ಆತಂಕಗಳಿಲ್ಲ. ಈ ವಿಚಾರವನ್ನು ಕುರಿತು ನೊಬೆಲ್ ಮಹಾಶಯನು ತನ್ನ ಮರಣಶಾಸನದಲ್ಲಿ ಈ ಬಹುಮಾನಗಳನ್ನು ಪಡೆಯಲರ್ಹವಾದ ವ್ಯಕ್ತಿಯನ್ನು ನಿರ್ಧರಿಸುವಾಗ, ಬಹುಮಾನ ಪಡೆಯಬಹುದಾದ ವ್ಯಕ್ತಿಯ ಜನ್ಮ, ಜನಾಂಗಗಳ ವಿಚಾರವನ್ನು ಖಂಡಿತವಾಗಿ ಗಮನಿಸಬಾರದು; ಆ ಬಹುಮಾನಕ್ಕೆ ಆತನು ಅರ್ಹನೆ ಎಂಬುದಿಷ್ಟನ್ನೇ ಲಕ್ಷಿಸಬೇಕೆಂದು ನನ್ನ ಅಪೇಕ್ಷೆ ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಈ ಅಭಿಪ್ರಾಯವನ್ನನುಸರಿಸಿ ಈ ಬಹುಮಾನಗಳು ಜಾತಿ, ಧರ್ಮ, ದೇಶ, ಜನಾಂಗಗಳ ವಿವೇಚನೆಯಿಲ್ಲದೆ, ಅದಕ್ಕೆ ಅರ್ಹತೆಯುಳ್ಳ ವ್ಯಕ್ತಿಗೆ ಕೊಡಲ್ಪಡುವವು.

ಈ ಬಹುಮಾನಗಳಲ್ಲಿ ಮೊದಲನೆಯ ನಾಲ್ಕು ಬಹುಮಾನಗಳು ನೊಬೆಲ್ ಸಂಸ್ಥೆಗೆ ಸಂಬಂಧಪಟ್ಟ ವಿವಿಧ ವಿದ್ವದ್ವರ್ಗದವರಿಂದ ನಿರ್ಧರಿಸಲ್ಪಡುವುವು, ಶಾಂತಿ ಸಾಧನೆಯ ಬಹುಮಾನವನ್ನು ಮಾತ್ರ ಯಾರಿಗೆ ಕೊಡುವದೆನ್ನುವ ವಿಚಾರವು ನಾರ್ವೇ ದೇಶದ ಪ್ರಜಾಪ್ರತಿನಿಧಿ ಸಭೆಯಿಂದ ನಿರ್ಧರಿಸಲ್ಪಡುವುದು.

ಯಾವನಾದರೊಬ್ಬ ವ್ಯಕ್ತಿಯು ಈ ಬಹುಮಾನಕ್ಕೆ ಅರ್ಹನೆಂದು ತೋರಿದಲ್ಲಿ ಆತನ ಸಾಧನೆಗೆ ಸಂಬಂಧಪಟ್ಟ ಶಾಸ್ತ್ರ, ಕಾರ್ಯಗಳಲ್ಲಿ ಪೂರ್ಣತಿಳುವಳಿಕೆಯುಳ್ಳ ಯಾರಾದರೂ ತಕ್ಕ ವಿವರಗಳೊಡನೆ, ಆತನು ಈ ಬಹುಮಾನಕ್ಕೆ ಯೋಗ್ಯ ಉಮೇದವಾರನೆಂದು ಸೂಚಿಸಿ ನೊಬೆಲ್ ಸಂಸ್ಥೆಗೆ ಒಂದು ಪತ್ರವನ್ನು ಬರೆದು ಕಳುಹಿಸಬೇಕು. ಇಂತಹ ಸೂಚನೆಗಳ ಆಧಾರಗಳ ಮೇಲೆ ವಿವಿಧ ಉಮೇದುವಾರರ ಸಾಧನೆಗಳ ಮಹತ್ವವು ವಿವೇಚಿಸಲ್ಪಡುವುದು.

ಈ ಬಹುಮಾನವನ್ನು ಪಡೆದುದಕ್ಕಾಗಿ ಬಹುಮಾನ ಹೊಂದಿದವರು ನೊಬೆಲ್ ಸಂಸ್ಥೆಗೆ ಯಾವ ತರದಲ್ಲಿಯೂ ಋಣಿಗಳಾಗಬೇಕಿಲ್ಲ. ಆದರೆ ಬಹುಮಾನ ಹೊಂದಿದವರು, ಬಹುಮಾನ ದಾನವಾದ ಆರು ತಿಂಗಳೊಳಗಾಗಿ ನಾರ್ವೆ ದೇಶದ ಮುಖ್ಯಪಟ್ಟಣವಾದ "ಆಸ್ಲೋ" ನಗರದಲ್ಲಿ ವಿಶ್ವಶಾಂತಿಯ ವಿಚಾರವಾಗಿ ಒಂದು ಭಾಷಣ ಮಾಡಬೇಕಾಗಿದೆ, ಅಷ್ಟೆ.

ಬಹುಮಾನಗಳು ನೊಬೆಲ ಮಹಾಶಯನ ನಿಧನದ ವಾರ್ಷಿಕೋತ್ಸವ ಕಾಲದಲ್ಲಿ ಕೊಡಲ್ಪಡುವವು. ಆ ಸಮಯ ಬಹುಮಾನಧನದ ಬಗ್ಗೆ ಒಂದು ಚೆಕ್ಕು, ಆ ಬಹುಮಾನವನ್ನು ಪಡೆದ ಬಗ್ಗೆ ಒಂದು ಸನದು ಮತ್ತು ನೊಬೆಲ್ ಮಹಾಶಯನ ಚಿತ್ರವುಳ್ಳ ಒಂದು ಚಿನ್ನದ ಮೆಡಲು ಇವಿಷ್ಟು ಬಹುಮಾನದೊಂದಿಗೆ ಕೊಡಲ್ಪಡುವವು. ಇವನ್ನೆಲ್ಲ ಪಡೆಯಲು ಬಹುಮಾನಿತರು ತಾವೇ ಪ್ರತ್ಯಕ್ಷವಾಗಿ ಬರಬೇಕೆಂದು ನಿರೀಕ್ಷಿಸಲ್ಪಟ್ಟಿದೆ.

ನೊಬೆಲ್ ಬಹುಮಾನ ಪಡೆದ ಅನೇಕ ವ್ಯಕ್ತಿಗಳಲ್ಲಿ ಇಬ್ಬರು ಭಾರತೀಯರು ರವೀಂದ್ರರು ಮತ್ತು ರಾಮನ್ನರು; ವಿಶ್ವಕವಿ ರವೀಂದ್ರರಿಗೆ ೧೯೧೩ ರಲ್ಲಿ ಸಾಹಿತ್ಯ ಭಾಗದ ಬಹುಮಾನವೂ, ವಿಜ್ಞಾನಿ, ಸಿ. ವಿ. ರಾಮನ್ನರಿಗೆ ೧೯೩೦ ರಲ್ಲಿ ಭೌತಿಕ ಶಾಸ್ತ್ರ ವಿಭಾಗದ ಬಹುಮಾನವೂ ಕೊಡಲ್ಪಟ್ಟವು.

ಈ ಬಹುಮಾನಕ್ಕೆ, ದೇಶ, ಭಾಷೆಗಳ ಅಡ್ಡಿ ಆತಂಕಗಳಿಲ್ಲದಂತೆ, ಗಂಡು ಹೆಣ್ಣುಗಳೆಂಬ ಭೇದವೂ ಇಲ್ಲ. ೧೯೦೧ ರಲ್ಲಿ ಈ ಬಹುಮಾನವು ಆರಂಭವಾದಂದಿನಿಂದ ಈ ವರೆಗೆ ಕೆಲವು ಮಂದಿ ಹೆಂಗಸರಿಗೆ ಇದು ದೊರೆತಿದೆಯಲ್ಲದೆ ಮೇಡಂಕ್ಯೂರಿ ಎಂಬಾಕೆಗೆ ೧೯೦೩ ರಲ್ಲಿ ಮತ್ತು ೧೯೧೧ ರಲ್ಲಿ ಎರಡು ಬಾರಿ ಬಹುಮಾನ ದೊರೆಯಿತು. ಹೀಗೆ ಎರಡುಬಾರಿ ಬಹುಮಾನ ಪಡೆದವಳು ಈಕೆಯೊಬ್ಬಳೇ. ರೇಡಿಯಂ ಎಂಬ ಲೋಹವನ್ನು ಕಂಡು ಹಿಡಿಯುವದರಲ್ಲಿ ತನ್ನ ಗಂಡನಿಗೆ ತುಂಬ ಸಹಾಯ ಮಾಡಿದ ಮತ್ತು ಆ

—೧೩ ನೆಯ ಪುಟಕ್ಕೆ

[illegible]

ಅಗ್ರಲೇಖ

ನವ ಬಾಂಧವ್ಯ

ನಂ. ೧೦ ಡೌನಿಂಗ್ ಸ್ಟ್ರೀಟಿನಿಂದಲೂ ಹೊಸ ದಿಲ್ಲಿಯ ಉಪಮುಖ್ಯ ಮಂತ್ರಿಗಳ ಕಚೇರಿಯಿಂದಲೂ ಏಕಕಾಲದಲ್ಲಿ ಹೊರಬಿದ್ದ ಹೇಳಿಕೆಯ ಪಾಠ ಹೀಗಿದೆ:

"ಕಳೆದವಾರ ಬ್ರಿಟನ್, ಆಸ್ಟ್ರೇಲಿಯ, ನ್ಯೂಜಿಲೆಂಡ್, ದ. ಆಫ್ರಿಕ, ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳ ಮುಖ್ಯಮಂತ್ರಿಗಳು ಮತ್ತು ಕೆನಡದ ವಿದೇಶಮಂತ್ರಿ ಇವರು ಪ್ರಜಾರಾಜ್ಯದ ಘಟನೆಯನ್ನು ಸ್ವೀಕರಿಸಬೇಕೆಂದು ನಿರ್ಣಯಿಸಿದ ಮತ್ತು ಕಾಮನ್‌ವೆಲ್ತಿನಲ್ಲಿ ಉಳಿಯಲು ಬಯಸಿದ ಭಾರತದ ಮುಖ್ಯ ಘಟನಾತ್ಮಕ ಪ್ರಶ್ನೆಯ ಬಗ್ಗೆ ಅಭಿಪ್ರಾಯ ವಿನಿಮಯಮಾಡಲು ಲಂಡನ್ನಿನಲ್ಲಿ ಸೇರಿದರು.

"ಕಾಮನ್ ವೆಲ್ತಿನ ಈಗಿರುವ ರಚನೆಯ ಮೇಲೂ ಅದರ ಸದಸ್ಯರ ನಡುವಣ ಘಟನಾತ್ಮಕ ಸಂಬಂಧದ ಮೇಲೂ ಯಾವ ಪರಿಣಾಮವನ್ನು ಭಾರತದ ನಿರ್ಣಯ ಉಂಟುಮಾಡುವುದೆಂಬುದೇ ಚರ್ಚೆಯ ವಸ್ತುವಾಯಿತು.

"ಚರ್ಚೆಯನ್ನು ಸೌಹಾರ್ದ ಮತ್ತು ಪರಸ್ಪರ ಸಹಾನುಭೂತಿಯ ವಾತಾವರಣದಲ್ಲಿ ನಡೆಸಲಾಯಿತು, ಮತ್ತು ಬದಲಾದ ಪರಿಸ್ಥಿತಿಗೆ ತಕ್ಕಂತೆ ಕಾರ್ಯಪದ್ಧತಿಯನ್ನೂ ಘಟನೆಯನ್ನೂ ಸುಧಾರಿಸಿ ಹೊಂದಿಕೊಂಡು ತನ್ನ ಉದ್ದೇಶದ ಐಕ್ಯವನ್ನು ಬಲಪಡಿಸಿಕೊಂಬ ಕಾಮನ್ ವೆಲ್ತಿನ ಪರಂಪರಾಗತ ಸಾಮರ್ಥ್ಯವು ಅದಕ್ಕೆ ಐತಿಹಾಸಿಕ ಹಿನ್ನೆಲೆಯಾಯಿತು.

"ಎಲ್ಲ ಚರ್ಚೆ ಮುಗಿದ ಬಳಿಕ ಕಾಮನ್‌ವೆಲ್ತಿನ ನಾಡುಗಳ ಸರಕಾರಗಳು ಸ್ವೀಕರಿಸಿದ ತೀರ್ಪುಗಳನ್ನು ಕೆಳಗಿನ ಘೋಷಣೆಯಲ್ಲಿ ಬರೆದಿಡಬೇಕೆಂದು ಒಪ್ಪಲಾಯಿತು:

"ಬ್ರಿಟಿಶ್ ಕಾಮನ್‌ವೆಲ್ತ್ ಆಫ್ ನೇಶನ್ಸಿನ ಸದಸ್ಯರೆಂದು ಒಟ್ಟಾಗಿರುವ ಮತ್ತು ತಮ್ಮ ಸ್ವತಂತ್ರ ಒಕ್ಕೂಟಕ್ಕೆ ಪ್ರತೀಕವಾದ ಬ್ರಿಟಿಶ್ ಸಿಂಹಾಸನಕ್ಕೆ ನಿಷ್ಠೆಯಿಂದಿರುವ ಬ್ರಿಟನ್, ಕೆನಡ, ಆಸ್ಟ್ರೇಲಿಯ, ನ್ಯೂಜಿಲೆಂಡ್, ದ. ಆಫ್ರಿಕ, ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳ ಸರಕಾರಗಳು ಭಾರತದಲ್ಲಿ ನಾಳೆ ಬರಲಿರುವ ಘಟನಾತ್ಮಕ ಬದಲಾವಣೆಗಳನ್ನು ಪರಾಮರ್ಶಿಸಿವೆ.

"ಭಾರತ ಸರಕಾರವು ಕಾಮನ್‌ವೆಲ್ತಿನ ಇತರ ಸರಕಾರಗಳಿಗೆ, ಹಿಂದೀಯರು ನಾಳೆ ಬರಲಿರುವ ಘಟನೆಯಲ್ಲಿ ತಮ್ಮ ನಾಡು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗಬೇಕೆಂದು ಬಯಸುವುದನ್ನು ತಿಳಿಸಿದೆ.

"ಹೀಗಿದ್ದರೂ ಕಾಮನ್‌ವೆಲ್ತಿನ ಸದಸ್ಯತ್ವವನ್ನು ಉಳಿಸಿಕೊಳ್ಳುವ ಮತ್ತು ಅದರ ಸ್ವತಂತ್ರ ಸದಸ್ಯರ ಸ್ವತಂತ್ರ ಸಂಘಕ್ಕೆ ಬ್ರಿಟಿಶ್ ದೊರೆಯನ್ನು ಪ್ರತೀಕವನ್ನಾಗಿ ಅಂದರೆ ಕಾಮನ್‌ವೆಲ್ತಿನ ಮುಖ್ಯಸ್ಥನನ್ನಾಗಿ ಸ್ವೀಕರಿಸುವ ಇಚ್ಛೆ ತನಗಿದೆಯೆಂದು ಭಾರತ ಸರಕಾರವು ಸಾರಿ ಹೇಳಿದೆ.

"ಈ ಮೂಲಕ ತಮ್ಮ ಕಾಮನ್‌ವೆಲ್ತಿನ ಸದಸ್ಯತ್ವದಲ್ಲಿ ಯಾವ ಬದಲಾವಣೆಯೂ ಆಗದಿರುವ ಕಾಮನ್‌ವೆಲ್ತಿನ ಮಿಕ್ಕ ನಾಡುಗಳ ಸರಕಾರಗಳು ಮೇಲಿನ ಘೋಷಣೆಯನ್ವಯ ರೂಪಿತವಾಗುವ ಭಾರತದ ಸದಸ್ಯತ್ವವನ್ನು ಸ್ವೀಕರಿಸಿ ಮನ್ನಣೆ ಕೊಡುತ್ತವೆ.

"ಈ ಪ್ರಕಾರ, ಬ್ರಿಟನ್, ಕೆನಡ, ಆಸ್ಟ್ರೇಲಿಯ, ನ್ಯೂಜಿಲೆಂಡ್, ದ. ಆಫ್ರಿಕ, ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳು ಶಾಂತಿ ಸ್ವಾತಂತ್ರ್ಯ ಮತ್ತು ಪುರೋಭಿವೃದ್ಧಿಗಳನ್ನು ಸಾಧಿಸುವಲ್ಲಿ ನಿರಾತಂಕವಾಗಿ ಸಹಕರಿಸುತ್ತ, ಸ್ವತಂತ್ರರೂ ಸಮಾನಸ್ಥರೂ ಎನಿಸಿ ಒಕ್ಕಟ್ಟಿನಿಂದ ಬಾಳುವೆವು ಎಂದು ಈ ಮೂಲಕ ಸಾರುತ್ತವೆ."

ಶಾಂತಿಗಾಗಿ ದುಡಿಯಲು ಮತ್ತು ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಸ್ವತಂತ್ರ ಪ್ರವೃತ್ತಿಯಿಂದ ನಡೆದುಕೊಳ್ಳಲು ಪ್ರಜಾರಾಜ್ಯವನ್ನು ಸ್ಥಾಪಿಸುವ ಇಚ್ಛೆ ನಮಗಿದೆಯೆಂದು ನಾವು ಸಾರಿದರೂ ಮಿಕ್ಕ ಅಧಿರಾಜ್ಯಗಳು ಭಾರತವನ್ನು ಸಮಾನಸ್ಕಂಧ ಸದಸ್ಯನನ್ನಾಗಿ ಇಟ್ಟುಕೊಳ್ಳಲು [illegible] ಸಂಗತಿಯು ಸತ್ಯಾಗ್ರಹ ಶಕ್ತಿಯ ಒಂದು ವಿಜಯವೇ ಸರಿ. ಎಲ್ಲಿ ವರೆಗೆ ಈ ವರೆಗೆ ಹಗೆಗಳಾಗಿದ್ದ ಪಕ್ಷಗಳೊಳಗೆ ಸ್ನೇಹ ಸದ್ಭಾವನೆಗಳನ್ನು ಸಂಸ್ಥಾಪಿಸಿದ ಹೊರತು ಸತ್ಯಾಗ್ರಹವು ಸಂಪೂರ್ಣತೆಯನ್ನು ಮುಟ್ಟಿತು ಎಂದು ಹೇಳಲು ಬರದು. ಈ ಸ್ನೇಹ ಉಂಟಾಗಲಿದೆ. ಭಾರತ, ದ. ಆಫ್ರಿಕ ಮತ್ತು ಇತರ ಅಧಿರಾಜ್ಯಗಳೊಳಗೆ ಶಾಂತಿ ಸೌಹಾರ್ದಗಳು ನೆಲೆ ನಿಲ್ಲುವ ವರೆಗೂ ಅದು ವೃದ್ಧಿ ಹೊಂದೀತು ಎಂದು ನಾವು ಹಾರೈಸೋಣ.

ಪರಸ್ಪರರ ಶಾಂತಿಯುತ ಪುರೋಭಿವೃದ್ಧಿಗಾಗಿ ಸದಸ್ಯರು ಸಹಕರಿಸುವ, ಆದರೆ ಸೈನಿಕ ಧೋರಣೆ ಮತ್ತು ರಾಜಕೀಯ ಅಧಿಕಾರ ಪಂಥ ನಿರ್ಮಿತಿಗಳಲ್ಲಿ ಯಾವಕಾರಣದಿಂದಲೂ ಪರಸ್ಪರ ಬೆಂಬಲಿಸಬೇಕೆಂದಿರದ ಒಂದು ವಿಧದ ಬಾಂಧವ್ಯವಿದು.

ಜಾಗತಿಕ ಶಾಂತಿವರ್ಧನವೇ ತನ್ನ ಧೋರಣೆಯೆಂದು ಸಾರಿದ ಭಾರತ ಒಂದೇಒಂದು ಮಹಾಮಂಡಲದವಿಳು ಜನ ಸದಸ್ಯರನ್ನು ತನ್ನ ಸಂಭಾವ್ಯ ಸಹಕಾರಿಗಳನ್ನಾಗಿ ಪಡೆದಂತಾಯಿತು ಎನ್ನಬಹುದು. ತನ್ನ ಈ ಧೋರಣೆಯನ್ನು ಎಷ್ಟರ ವರೆಗೆ ಸಾಧಿಸಬಹುದು ಎಂಬುದು ಭಾರತದ ಸ್ವಂತ ನಿಷ್ಠೆ, ಸಾಮರ್ಥ್ಯ ಧ್ಯೇಯ ಮತ್ತು ಆಂತರಿಕ ಪ್ರಗತಿ ಇವುಗಳ [illegible] ಮತ್ತು ನಿಷ್ಠೆಗಳ [illegible] ಅವಿರತವಾಗಿ ಸಾವು ಸಾಗಿಸಿಕೊಂಡು [illegible] ಬಲ್ಲೆವಾದರೆ, ಅದನ್ನು ಸಾಧಿಸಲು ಸದ್ಯಕ್ಕೀಗ ಒಂದು ಒಳ್ಳೆಯ ಅವಕಾಶವಿದೆ. ಅದು ಒಂದು ಧ್ಯೇಯದ ನಿರಂತರ ಆರಾಧನೆಯ ದೀರ್ಘಕಾಲಿಕ ಕಾರ್ಯಕ್ರಮ.

ಈ ಕಾಮನ್ ವೆಲ್ತಿನಲ್ಲಿ ರಾಜನ ಸ್ಥಾನವೇತಿದೆಯೆಂಬುದನ್ನು ಹೀಗೆ ಹೇಳಬಹುದು: ಕಾಮನ್‌ವೆಲ್ತಿನ ಮಿಕ್ಕ ಸದಸ್ಯರಿಗೆ ಹಿಂದಿನಂತೆ ಅವನು ಈಗಲೂ ಮುಖ್ಯಸ್ಥನಾಗಿ ಉಳಿಯುತ್ತಾನೆ. ಅವನು ಭಾರತಕ್ಕೆ ಮುಖ್ಯಸ್ಥನಾಗುವುದಿಲ್ಲ. ಆದರೆ ಅವನನ್ನು [illegible] ವೆಲ್ತ್ ಎಂಬ ಹೊಸ ಬಾಂಧವ್ಯದ ಮುಖ್ಯಸ್ಥನೆಂದು ಸ್ವೀಕರಿಸಲಾಗುವುದು. ಸ್ಪಷ್ಟವಾಗಿ ಹೇಳುವುದಾದರೆ, ಬ್ರಿಟನ್ನಿನ ದೊರೆ ಮತ್ತು ಭಾರತದ ಅಧ್ಯಕ್ಷರ ನಡುವೆ ರಾಜನ ಸ್ಥಾನವೇ ಮೇಲಿನದು. ಕಾಮನ್‌ವೆಲ್ತಿನ ಮಿಕ್ಕ ರಾಷ್ಟ್ರಗಳ ಮೇಲೆ ಭಾರತದ ಅಧ್ಯಕ್ಷನಿಗೆ ಹೇಗೆ ಯಾವ ಅಧಿಕಾರವೂ ಇಲ್ಲವೋ ಹಾಗೇ ಬ್ರಿಟಿಶ್ ದೊರೆಗೆ ಭಾರತದ ಮೇಲೆ ಯಾವ ಅಧಿಕಾರವೂ ಇಲ್ಲ. ಅವು ತಂತಮ್ಮ ರಾಜ್ಯಗಳಲ್ಲಿ ಆಯಾ ಘಟನೆ ಅವಕಾಶ ಕೊಟ್ಟಷ್ಟು ಮಟ್ಟಿಗೆ ತಮ್ಮ ಅಧಿಕಾರವನ್ನು ಚಲಾಯಿಸುತ್ತವೆ.

ಕೇವಲ ಶಾಂತಿ ಮತ್ತು ಅಹಿಂಸೆಗಳ ದೃಷ್ಟಿಯಿಂದ ನೋಡಿ, ಹಳೆಯ ಬ್ರಿಟಿಶ್ ಕಾಮನ್ ವೆಲ್ತಿನ ಈ ಹೊಸ ಸುಧಾರಣೆಯನ್ನು ಸ್ವಾಗತಾರ್ಹವಾದ ಒಂದು ಹೆಜ್ಜೆ ಎಂದು ನಾನು ಭಾವಿಸುತ್ತೇನೆ.

ವರ್ಧಾ, ೩೦-೪-೪೯ —ಕಿ. ಘ. ಮಶ್ರುವಾಲಾ

ಭಾಷಾತ್ಮಕ ಸಾಮ್ರಾಜ್ಯವಾದದ ಆರೋಪ

ಉತ್ತರ ಹಿಂದುಸ್ತಾನದ ಒಂದು ಭಾಷೆಯನ್ನು ಅಖಿಲ ಭಾರತದ ಭಾಷೆಯೆಂದು ನಿರ್ಧರಿಸಿರುವುದು ಔತ್ತರೇಯರ "ಭಾಷಾತ್ಮಕ ಸಾಮ್ರಾಜ್ಯವಾದ" ಎಂದು ದ. ಭಾರತದ ಒಂದು ವರ್ಗ ಭಾವಿಸುತ್ತದೆ! ಈ ಆರೋಪವು ಸರಿಯಾದ ಕಲ್ಪನೆಯಲ್ಲ, ಮತ್ತು ಇದನ್ನು ವಿಚಾರವಂತರು ಮನಸ್ಸಿನಲ್ಲಿ ಬೆಳೆಯಲಿಡಗೊಡಬಾರದು ಮತ್ತು ಪ್ರೋತ್ಸಾಹಿಸಬಾರದು. ಭಾರತಕ್ಕೆ ಸರ್ವಸಾಧಾರಣವಾದ ಒಂದು ಭಾಷೆ ಬೇಕೆಂಬುದು ದೊಡ್ಡ ಅವಶ್ಯಕತೆಯಾಗಿತ್ತಲ್ಲದೆ, ಯಾವುದಾದರೊಂದು ಭಾಷೆ ಆಸ್ಥಾನವನ್ನು ಆಕ್ರಮಿಸಿಯೇ ಇತ್ತು. ಸಂಸ್ಕೃತ, ಪಾಳಿ, ಪಾರಸಿ, ಉರ್ದು (ಅಥವಾ ಹಿಂದುಸ್ತಾನಿ), ಇಂಗ್ಲೀಷು ಸ್ವಲ್ಪ ಅಥವಾ ಬಹಳಕಾಲ ಆ ಸೇವೆಯನ್ನು ಸಲ್ಲಿಸಿವೆ. ಇವುಗಳಲ್ಲಿ ಪಾರಸಿ ಮತ್ತು ಇಂಗ್ಲೀಷು ಈ ಎರಡನ್ನು ಮಾತ್ರ ಆಳರಸರು ಪ್ರಜೆಗಳ ಮೇಲೆ ಹೇರಿದ್ದು. ಮಿಕ್ಕವು ಪ್ರಜಾಸತ್ತಾತ್ಮಕ ರೀತಿಯಿಂದಲೇ ಆ ಪ್ರಾಮುಖ್ಯವನ್ನು ವಹಿಸಿದವು.

ಈ ಭಾಷೆಗಳ ಬೆಳವಣಿಗೆಗೆ ದ್ರಾವಿಡ ಪ್ರಾಂತಗಳ ಕೊಡುಗೆ ಅದ್ವಿತೀಯವೂ ವಿಶಿಷ್ಟ ಗುಣವುಳ್ಳದ್ದೂ ಆಗಿದೆ. ಈ ಸಾರ್ವಭಾಷೆಗಳು (ಇಂಗ್ಲೀಷೊಂದನ್ನು ಬಿಟ್ಟು) ಉತ್ತರದಲ್ಲಿ ಹುಟ್ಟಿದರೂ ಅಂಥ ಪ್ರತಿಯೊಂದು ಭಾಷೆಯನ್ನೂ ಶುದ್ಧಮಾಡಿ, ಗ್ರಾಂಥಿಕತೆಗೆ ಮುಟ್ಟಿಸಿ ಬಹಳ ಮಟ್ಟಿಗೆ ಪರಿಪೂರ್ಣತೆಗೆ ಒಯ್ದವರು ದಾಕ್ಷಿಣಾತ್ಯರೇ. ಹೀಗೆ ಸಂಸ್ಕೃತ ಬಹುಶಃ ಕಾಶ್ಮೀರ ಅಥವಾ ಪಂಜಾಬಿನಲ್ಲಿ ಹುಟ್ಟಿರಬಹುದು, ಕಾಶಿಯಿಂದ ಪ್ರಚುರಪಡಿಸಿರಬಹುದು. ಆದರೆ ದ. ಹಿಂದುಸ್ತಾನದವರ ಉಚ್ಚಾರಣೆಯನ್ನೇ ಹೆಚ್ಚು ಪರಿಪೂರ್ಣವಾದುದೆಂದು ತಿಳಿಯಲಾಗಿದೆ. ಉದಾ— ಉತ್ತರ ಹಿಂದುಸ್ತಾನದವರು ಶಕಾರ ಷಕಾರಗಳಲ್ಲಿ ಭೇದ ಮಾಡುವುದಿಲ್ಲ, ಆದರೆ ಆಂಧ್ರರ ಒಂದು ಮಗು ಕೂಡ ಆ ಭೇದವನ್ನು ಉಚ್ಚರಿಸಿ ತೋರಿಸಬಲ್ಲದು. ಔತ್ತರೇಯರು ಐ ಔಕಾರಗಳ ಉಚ್ಚಾರಣೆಯನ್ನು ಶುದ್ಧ ಸಂಸ್ಕೃತ ಶಬ್ದಗಳಲ್ಲಿ ಕೂಡ ಪಾರಸೀ ರೂಪಕ್ಕೆ ತಂದಿದ್ದಾರೆ. ತಾತ್ವಿಕವಿರಲಿ, ಭಾಕ್ತಿಕವಿರಲಿ, ಎಲ್ಲ ವಿಧದ ಹಿಂದು ಧರ್ಮಗ್ರಂಥಗಳ ಅಭ್ಯಾಸಕ್ಕೂ ಸಂಸ್ಕೃತದ ಓದು ಅನಿವಾರ್ಯವೆಂದು ದಕ್ಷಿಣ ಭಾರತೀಯ ಆಚಾರ್ಯರು ತಮ್ಮ ಭಾಷ್ಯ ಮತ್ತು ಸಂಸ್ಕೃತ ಗ್ರಂಥಗಳ ಮೂಲಕ ಸ್ಥಿರಪಡಿಸಿದರು.

ಹಿಂದಿ ಅಥವಾ ಹಿಂದುಸ್ತಾನಿಯ ಬೆಳವಣಿಗೆಯಾದರೂ ಹೀಗೇ ಆದುದು. ಅದನ್ನು ಗಟ್ಟಿಯಾಗಿ ಸಾರ್ವಭಾಷೆಯೆಂದು ಮುಂದಿಡುವ ಮೊದಲೇ (ಮಹಾರಾಷ್ಟ್ರವನ್ನುಳಿಗೊಂಡು) ದಾಕ್ಷಿಣಾತ್ಯರಿಗೇ ಅದರ ಸಾಹಿತ್ಯ ತನ್ನ ವಿಕಾಸಕ್ಕೆ ಬಹಳಮಟ್ಟಿಗೆ ಋಣಿಯಾಗಿದೆ. ಸಾರ್ವಭಾಷೆಯೆಂದು ಅದರ ಪ್ರಾಮುಖ್ಯ ಅರಿವಾದುದಿನಿಂದ ಹಿಂದುಸ್ತಾನಿ ಪ್ರಾದೇಶಿಕ ಭಾಷೆಯಾಗಿಲ್ಲದ ಉತ್ತರದ ಯಾವ ಪ್ರಾಂತಕ್ಕಿಂತಲೂ ಹೆಚ್ಚಾಗಿ ದಕ್ಷಿಣ ಭಾರತವು ಆ ಭಾಷೆಗೆ ತನ್ನ ಕೊಡುಗೆಯನ್ನು ಸಲ್ಲಿಸಿದೆ. ಶ್ರೀ ಎಂ. ಸತ್ಯನಾರಾಯಣ ಮತ್ತು ಅವರ ಸಂಘಟನೆ ಈ ಸಾರ್ವಭಾಷೆಯ ಬೆಳವಣಿಗೆಯ ಕಾರ್ಯದಲ್ಲಿ ಆಗಲೇ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ ಮತ್ತು ಒಂದು ಪ್ರಯೋಗದಲ್ಲಿ ಎರಡು ರೂಪಗಳಿದ್ದು ಅವುಗಳಲ್ಲಿ ಯಾವುದು ಸರಿಯಾದುದು ಎಂಬ ಪ್ರಶ್ನೆ ಎದ್ದಾಗ ಒಬ್ಬ ದಕ್ಷಿಣ ಭಾರತೀಯನನ್ನು ನಿರ್ಣಾಯಕನನ್ನಾಗಿ ತೆಗೆದುಕೊಂಬ ಕಾಲಬಂದರೆ ನಾನೇನೂ ಆಶ್ಚರ್ಯ ಪಡಲಾರೆ. ಪಾರಸಿ ರಾಜಭಾಷೆಯಾಗಿದ್ದಾಗ ಪಾರಸಿ ಅಥವಾ ಅರಬ್ಬಿ ವ್ಯಾಕರಣ ಮತ್ತು ಶಬ್ದರೂಪಗಳಿಗೆ ಸಂಬಂಧಿಸಿದ ಪ್ರಶ್ನೆಗಳ ನಿರ್ಣಯದಲ್ಲಿ ಮುಸಲ್ಮಾನನಿಗಿಂತ ಹಿಂದುಪಂಡಿತನೇ ಹೆಚ್ಚಿನ ಆಧಾರ ಎಂದು ಅನೇಕ ವೇಳೆ ಗ್ರಹಿಸಲಾಗುತ್ತಿತ್ತು. ಅದಕ್ಕೆ ಕಾರಣ ಇಷ್ಟೆ: ಒಬ್ಬ ಔತ್ತರೇಯನು (ಉದಾ— ಗುಜರಾತಿ, ಮಧ್ಯಭಾರತೀಯ, ರಾಜಸ್ತಾನಿ, ಬಿಹಾರಿ, ಪಂಜಾಬಿ ಮತ್ತು ಮಿಕ್ಕವರು) ತನ್ನ ಭಾಷೆಗೂ ಸಾರ್ವಭಾಷೆಗೂ ಹೆಚ್ಚು ವ್ಯತ್ಯಾಸವಿಲ್ಲವೆಂದು ತಿಳಿಯುವುದರಿಂದ ಅದನ್ನು ಅಲಕ್ಷ್ಯದಿಂದ ಕಲಿತು ಸಾರ್ವಭಾಷೆಯೊಡನೆ ತನ್ನ ಭಾಷೆಯ ಶಬ್ದಗಳನ್ನೂ ಪದರೂಪಗಳನ್ನೂ ಎಷ್ಟೋ ಸಲ ಬೆರಸಿಬಿಡುತ್ತಾನೆ. ಅಂಥ ಕಲ್ಪನೆ ಏನೂ ಇಲ್ಲದ ಕಾರಣ, ದಾಕ್ಷಿಣಾತ್ಯನು ಅದನ್ನು ಲಕ್ಷ್ಯವಿಟ್ಟು ಕಲಿತು ಯುಕ್ತವಾಗಿ ಬಳಸುತ್ತಾನೆ. ಅದು ಅತಿರೇಕವಾದರೂ ಚಿಂತೆಯಿಲ್ಲ ಎಂದು ಅವನು ಅದನ್ನು ಅತ್ಯಂತ ಎಚ್ಚರಿಕೆಯಿಂದ ಉಚ್ಚರಿಸುತ್ತಾನೆ.

ಅದರ ಮೂಲರೂಪ ಹಿಂದಿಯೇ ಆದರೂ (ಹಿಂದುಸ್ತಾನಿಯಿಂದ ಪ್ರತ್ಯೇಕಿಸಿ) ಒಂದೇ ಒಂದು ತಲೆಮಾರಿನೊಳಗೇ ಅದರ ರಚನೆ ಹಿಂದೀ ಪ್ರಾಂತಗಳ ಈಗಿನ ಹಿಂದಿಯದು ಅಲ್ಲವೇ ಅಲ್ಲ ಎನ್ನುವಷ್ಟು ಬದಲಾಗಿ ಹೋಗುತ್ತದೆ. ಬ್ರಿಟಿಶ್ ಇಂಗ್ಲೀಷು ಮತ್ತು ಔಪನಿವೇಶಿಕ ಮತ್ತು ಅಮೇರಿಕನ್ ಇಂಗ್ಲೀಷು ಕೆಲಮಟ್ಟಿಗೆ ಭಿನ್ನವಿರುವಂತೆ ರಾಷ್ಟ್ರೀಯ ಹಿಂದಿ ಮತ್ತು ಪ್ರಾಂತೀಯ ಹಿಂದಿ ಬೇರೆ ಬೇರೆಯಾಗುತ್ತವೆ. ಸಾರ್ವಭಾಷೆಯ ಮೇಲೆ ಪ್ರತಿಯೊಂದು ಪ್ರಾಂತವೂ ತನ್ನ ಮುದ್ರೆಯನ್ನು ಒತ್ತುತ್ತದೆ ಮತ್ತು ದಕ್ಷಿಣ ಭಾರತೀಯ ಪ್ರಾಂತಗಳೇನೂ ಅಪವಾದಗಳಾಗುವುದಿಲ್ಲ.

ಆದುದರಿಂದ ಈಗ ಸೂಚಿತವಾದ ಸಾರ್ವಭಾಷೆಯನ್ನು (ಹಿಂದಿ ಅಥವಾ ಹಿಂದುಸ್ತಾನಿ) ಸ್ವೀಕರಿಸುವುದು ದಕ್ಷಿಣ ಹಿಂದುಸ್ತಾನಕ್ಕೆ ಹಾನಿಕರ ಎಂದು ಭಯಪಡಲು ಕಾರಣವಿಲ್ಲ. ಇಂಗ್ಲೀಷಿನ ಮೂಲಕ ದಕ್ಷಿಣ ಭಾರತೀಯ

— [illegible]

ಧೂಮಸೇವನೆ

[illegible]

ರೂಪಾಯಿಗಳ ಬೆಲೆಯ ಉತ್ತಮ [illegible] ಸಿಗರೇಟುಗಳನ್ನು ತರಿಸಲಾಗುತ್ತದೆ. [illegible] ದಲ್ಲಿ ಅದಕ್ಕೆ ಅಗ್ರಪೂಜೆ ಸಲ್ಲುತ್ತದೆ [illegible] ಅದು ಯೋಧನ ಸಲಕರಣೆಗಳ ಒಂದು ಭಾಗವೇ ಆಗಿಹೋಗಿದೆ. ತನ್ನ [illegible] ರಾದ ಯೋಧರಿಗೆ ಸಿಗರೇಟನ್ನು ಒದಗಿಸದ ಕಾರಣಕ್ಕಾಗಿ ಒಬ್ಬ ಬ್ರಿಗೇಡಿಯರನನ್ನು [illegible] ದಿಂದ ತೆಗೆದು ಹಾಕಿದ್ದನ್ನು ನಾನು ಓದಿ [illegible]

ಡಾ. ಪಿ. ಸಿ. ರಾಯರು ವಿಶೇಷತಃ [illegible] ರ್ಥಿಗಳಲ್ಲಿ ಈ ದುರಭ್ಯಾಸ [illegible] ಮಾಡಲು ಬಹಳ ಶ್ರಮಿಸಿದ್ದು ನನಗೆ [illegible]

"ಮೊಟ್ಟಮೊದಲು ಧೂಮಸೇವನೆಯನ್ನು ಅಪವಿತ್ರವೆಂದು ತಿಳಿಯಬೇಕು [illegible] ಅನಂತರ ಆ ದುರಭ್ಯಾಸವನ್ನು [illegible] ತ್ಯಾಗದ ಪಾಠವನ್ನು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬಹುದು. ಕೆಲ ಕೂಲಿಕಾರರು ತಮ್ಮನ್ನು ಅವಲಂಬಿಸಿ ಜೀವಿಸುವವರ ಆಹಾರ ವಸ್ತುಗಳಿಗೆ ಖರ್ಚುಮಾಡುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಸಿಗರೇಟು [illegible] ಗಳಿಗಾಗಿ ಖರ್ಚುಮಾಡುವುದುಂಟು. ಆರ್ಥಿಕವಾಗಿಯೂ ಅದೊಂದು ದೊಡ್ಡ ಅಪವ್ಯಯ.

"ಅದನ್ನು ದುರಭ್ಯಾಸವೆಂದು [illegible] ಮೇಲೆ ಆ ಅಭ್ಯಾಸದ ವಿರುದ್ಧ ಮೊಟ್ಟಮೊದಲು ಪತ್ರಿಕೆ, ಹಸ್ತಪತ್ರಿಕೆ, [illegible], ಮಾಯಾದೀಪ, ಸಿನೆಮ ಮುಂತಾದ [illegible] ಆಧುನಿಕ ಸಾಧನಗಳ ಮೂಲಕ [illegible] ಇನ್ನೂ ಬೇರೆ ಬೇರೆ ರೀತಿಯಿಂದ [illegible] ವಾದ ಪ್ರಚಾರವನ್ನು ಮಾಡಬೇಕು. [illegible] ಗಳಲ್ಲಿ, ಉಪಾಹಾರಗೃಹಗಳಲ್ಲಿ, ಭೋಜನಾಲಯಗಳಲ್ಲಿ ಮತ್ತು ರೈಲ್ವೆಗಾಡಿ, ಟ್ರಾಂ, ಬಸ್ ಮುಂತಾದ ಇತರ ಸಾರ್ವಜನಿಕ [illegible] ಗಳಲ್ಲಿ ಧೂಮಸೇವನೆಯನ್ನು [illegible] ಬಹುದು. ಸಾರ್ವಜನಿಕ ಕಾರ್ಯ [illegible] ತಾವು ಧೂಮಸೇವನೆ ಬಿಟ್ಟು [illegible] ವಿತರಣ (ಸಾಮಾನ್ಯವಾಗಿ ಅದನ್ನು [illegible] ಯುವಂತೆ) ಅಧಿಕೃತ ಸ್ಥಳ [illegible] ಗಳಲ್ಲಿ ಇಲ್ಲದಂತೆ ಮಾಡಬೇಕು. [illegible] ಆಯಾತದ ಮೇಲೆ ನಿಯಂತ್ರಣ ಹೇರ[illegible] ವಿಶೇಷತಃ ವಿದ್ಯಾರ್ಥಿಗಳಲ್ಲಿ ಉಗ್ರ ಪ್ರಚಾರವನ್ನು ಕೈಕೊಳ್ಳಬೇಕು."

ಟಾಲ್‌ಸ್ಟಾಯ್ ಮನುಷ್ಯ [illegible] ಕೊಟ್ಟು ಅಪಾಯಕರ ಎಂದು ಭಾವಿಸಿ [illegible] ಆದರೆ ಅದರ ನಾಶಕ್ಕೆ, ಅದನ್ನು ಸರಕಾರ [illegible] ಮಾಡಬೇಕಾದರೆ, ಮಂತ್ರಿಗಳು ಮತ್ತು [illegible]

[illegible] ಬೇಕು. ಇಂದಿನ ಕಲಿಕೆಯವರು [illegible] ಧೂಮಸೇವನೆಗೆ ಹೆಚ್ಚು ಬೆಲೆ [illegible] ಕೊಡಬೇಕು, ಆಗ [illegible] [illegible] ಸಂತ [illegible] ಮತ್ತು [illegible] ನೋಡು [illegible] ವನ್ನು [illegible] ಸಬೇಕು [illegible]

ಚುಟುಕುಗಳು

ಕಾಸ್ಮೊಪಾಲಿಟನ್ ಕ್ಲಬ್ಬೊಂದರಲ್ಲಿ ಬ್ರಾಕ್ಸಿನ್ನಿಗಾಗಿ ಇಸ್ಪೀಟು ಆಡಲು ಕುಳಿತ ಒಬ್ಬ ಮಹನೀಯರು ಹನ್ನೆರಡು ಗಂಟೆ ರಾತ್ರಿಯ ಹೊತ್ತಿಗೆ ಆಟ ಮುಗಿದಾಗ, ತಮ್ಮ ಭಾಗ್ಯದ ಶಿಖರ ಸ್ಥಾನಕ್ಕೆ ಮುಟ್ಟಿದರು. ದುರ್ಭಾಗ್ಯರಾದ ಅವರ ಎದುರಾಳಿಗಳು ಮುನ್ನೂರು ರೂಪಾಯಿಗಳನ್ನು ಕಳೆದು ಕೊಂಡಿದ್ದರು. ಕೈಯಲ್ಲಿ ಅಷ್ಟು ರೊಕ್ಕವಿಲ್ಲ ದ್ದರಿಂದ ಅವರು ಜೇಬಿನಿಂದ ಚೆಕ್‌ಬುಕ್ ತೆಗೆದು ಅಷ್ಟು ಮೊತ್ತಕ್ಕೆ ಚೆಕ್ ಬರೆದು ಕೊಟ್ಟರು.

ತಾವು ಅಂದು ಮುಂಜಾನೆ ಎದ್ದೊಡನೆ ಯಾರ ಮುಖ ಕಂಡಿರಬಹುದೆಂದು ಜ್ಞಾಪಿಸಿ ಕೊಳ್ಳಲು ಯತ್ನಿಸುತ್ತ ಸಂತೋಷದಿಂದ ಮನೆ ಸೇರಿದ ವಿಜಯಿಗೆ ಮರುದಿನ ಬ್ಯಾಂಕಿಗೆ ಕಳಿಸಿದ ಆ ಚೆಕ್ಕು "ಸಾಕಷ್ಟು ಹಣವಿಲ್ಲ" ವೆಂಬ ಚೀಟಿಯೊಡನೆ ಮರಳಿ ಬಂದಾಗ ತುಂಬ ವ್ಯಥೆಯಾಯಿತು.

ವಿಚಾರಿಸಿದಾಗ ಚೆಕ್ ಕೊಟ್ಟ ಮಹನೀಯರು ಊರು ಬಿಟ್ಟಿದ್ದರೆಂದು ತಿಳಿದು ಬಂತು. ಆದರೆ ಅವರ ಲೆಕ್ಕದಲ್ಲಿ ೧೫೦ ರೂಪಾಯಿಗಳಿದ್ದವೆಂದೂ ಹೇಗೋ ಕಂಡು ಹಿಡಿಯಲಾಯಿತು.

ಕಾಯುವದರಿಂದ ಲಾಭವಿಲ್ಲೆಂದುಕೊಂಡು ಮಹಾಶಯರು ಚಿಂತಿಸುತಿದ್ದಾಗ ಅವರಿ ಗೊಂದುಪಾಯ ಹೊಳೆಯಿತು. ಅವರು ಸ್ವಂತದ ೧೫೦ ರೂಪಾಯಿಗಳನ್ನು ಆ ಮಹಾಶಯರ ಬ್ಯಾಂಕ್ ಲೆಕ್ಕಕ್ಕೆ ಜಮಾ ಮಾಡಿಸಿ ಆ ಮೇಲೆ ಚೆಕ್ ಕಳಿಸಿ ೩೦೦ ರೂಪಾಯಿಗಳನ್ನು ಬ್ಯಾಂಕಿನಿಂದ ಪಡೆದರು. "ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ" ಅಲ್ಲವೆ?

✻

ಮನಶ್ಶಾಸ್ತ್ರದ ಅಧ್ಯಾಪಕನೊಬ್ಬನು ಮುಂಬಯಿಯ ನಿರ್ಜನ ರಸ್ತೆಯೊಂದರಲ್ಲಿ ಮಧ್ಯರಾತ್ರಿ ಹೊತ್ತಿಗೆ ಮನೆಯ ಕಡೆ ಹೊರಟಿದ್ದನು. ಅವನ ಜೇಬಿನಲ್ಲಿ ೫೦೦ ರೂಪಾಯಿಗಳಿದ್ದವು. ಸ್ವಲ್ಪ ದೂರದಿಂದ ಬೆಂಬತ್ತಿ ಬರುತಿದ್ದ ಟೊಣಪನೊಬ್ಬನು ಸಂದಿ ಕವಲೊಂದರಲ್ಲಿ ವೇಗವಾಗಿ ತನ್ನ ಕಡೆ ನುಗ್ಗುತಿರುವದನ್ನು ಕಂಡ ಮನಶ್ಶಾಸ್ತ್ರಿಗೆ ಖಂಡಿತವಾಗಿ ಇವನು ತನ್ನನ್ನು ಸುಲಿಯಲಿಕ್ಕೇ ಬಂದಿರುವನೆಂದು ಮನವರಿಕೆಯಾಯಿತು.

ಮನಶ್ಶಾಸ್ತ್ರಿ ನೇರವಾಗಿ ತಾನೇ ಆ ಟೊಣಪನ ಕಡೆ ಸಾಗಿ ಕೇಳಿದನು, "ಮಿಸ್ಟರ್, ದಯವಿಟ್ಟು ನಾಣ್ಯಾಣೆ ಇದ್ದರೆ ಕೊಡಿರಿ. ಒಂದಿಷ್ಟು ಚಹಾ ಕುಡಿಯುತ್ತೇನೆ. ಹೊಟ್ಟೆಗೆ ಏನೂ ಕಾಣೆನಣ್ಣ."

ಟೊಣಪ ಬೆಚ್ಚಿಬಿದ್ದು ನುಡಿದನು: "ನಿನ್ನನ್ನು ಕಂಡು ಹಣ ಸುಲಿಯಬೇಕೆಂದಿದ್ದೆ ನಾನೇ!"

ಮನಶ್ಶಾಸ್ತ್ರಿ ಅವನಿಂದ ನಾಲ್ಕಾಣೆಯನ್ನು ಪಡೆದು ತನ್ನ ದಾರಿ ಹಿಡಿದು ಹೋದನು.

✻

ವೃದ್ಧ ಮಹಾಶಯರು ಮೊದಲನೆ ವರ್ಗದ ರೇಲು ಡಬ್ಬಿಯನ್ನೇರಿ ಒಂದು ಆಸನದ ಮೇಲೆ ತಾವು ಕುಳಿತು ಇನ್ನೊಂದರ ಮೇಲೆ ತಮ್ಮ ಪೆಟ್ಟಿಗೆಯನ್ನಿರಿಸಿದರು. ಸ್ವಲ್ಪ ಹೊತ್ತಿನಲ್ಲಿ ನಗುಮೊಗದ ಯುವಕನೊಬ್ಬ ಅದೇ ಡಬ್ಬಿಯನ್ನೇರಲು ಹವಣಿಸುತಿದ್ದುದನ್ನು ಕಂಡು ಅವರು ಎಚ್ಚರಿಸಿದರು: "ಈ ಡಬ್ಬಿಯಲ್ಲಿ ಜಾಗೆಯಿಲ್ಲ. ಆ ಆಸನದ ಮೇಲಿರುವ ಪೆಟ್ಟಿಗೆ ನನ್ನ ಗೆಳೆಯನದು."

"ಅದಕ್ಕೇನಂತೆ?" ಯುವಕ ಒಳನುಗ್ಗುತ್ತಲೇ ಹೇಳಿದ. "ಅವರು ಬರುವ ವರೆಗೆ ಮಾತ್ರ ನಾನಿಲ್ಲಿ ಕೂಡುತ್ತೇನೆ."

ವೃದ್ಧ ಮಹಾಶಯರು ಸಿಟ್ಟಿನ ಮೋರೆ ಮಾಡಿಕೊಂಡು ಸುಮ್ಮನಾದರು. ಗಾಡಿ ಹೊರಡುತ್ತಲೇ ಯುವಕ ಗಾಬರಿಗೊಂಡಂತೆ ಎದ್ದು ಆ ಪೆಟ್ಟಿಗೆಯನ್ನೆತ್ತಿ ಕಿಟಕಿಯಿಂದ ಹೊರಗೆ ಒಗೆದುಬಿಟ್ಟ.

"ನಿಮ್ಮ ಗೆಳೆಯರಿಗೆ ಗಾಡಿ ತಪ್ಪಿತೋ ಏನೊ. ಪಾಪ, ಅವರ ಸಂಗಡಲೇ ಪೆಟ್ಟಿಗೆಯನ್ನು ಕಳೆದುಕೊಳ್ಳುವ ಅವಸ್ಥೆ ಬರಬಾರದಲ್ಲವೆ?" ಎಂದು ಅವನು ವಿವರಿಸಿದ.

ವೃದ್ಧ ಮಹಾಶಯರ ಮುಖವನ್ನು ನೋಡಬೇಕಿತ್ತು ಆಗ!

✻

ಪ್ರಾಚೀನ ಕಾಲದ ರೋಮನ್ ಸೈನ್ಯಾಧಿಕಾರಿಯೊಬ್ಬನ ಬಗ್ಗೆ ಒಂದು ದಂತಕಥೆಯುಂಟು. ಅಕಸ್ಮಾತ್ತಾಗಿ ದೊಡ್ಡ ಯುದ್ಧವೊಂದು ಪ್ರಾರಂಭವಾಗಿ ಅವನು ಅದಕ್ಕಾಗಿ ಹೊರಡಬೇಕಲ್ಲ ಹೊರಡಬೇಕಾಯಿತು. ಆಗ ಅವನು ತನ್ನ ಸುಂದರಿಯಾದ ಮಡದಿಯನ್ನು ಕಬ್ಬಿಣದ ಕವಚದಿಂದ ಮುಚ್ಚಿ, ಅದನ್ನು ತೆಗೆಯಬಾರದಂತೆ ಕೀಲಿ ಜಡಿದು ತನ್ನ ಜೀವದ ಗೆಳೆಯನ ಕೈಯಲ್ಲಿ ಕೀಲಿಕೈ ಕೊಡುತ್ತಾ ತಾಕೀತು ಮಾಡಿದನು: "ಆರು ತಿಂಗಳ ವರೆಗೆ ದಾರಿ ನೋಡು. ಅದರೊಳಗೆ ನಾನು ಮರಳದಿದ್ದರೆ ಕೀಲಿಕೈಯನ್ನು ನೀನು ಉಪಯೋಗಿಸಬಹುದು. ನೀನು ನನ್ನ ಜೀವದ ಗೆಳೆಯನೆಂದು ಇದನ್ನು ನಿನಗೆ ಒಪ್ಪಿಸಿದ್ದೇನೆ."

ಸೈನಿಕ ಯುದ್ಧಕ್ಕಾಗಿ ಕುದುರೆಯೇರಿ ಧಾವಿಸಿದ. ಅವನಿನ್ನೂ ಹತ್ತು ಮೈಲು ದೂರ ಹೋಗಿದ್ದಿಲ್ಲ, ಹಿಂದಿನಿಂದ ಧೂಳಿನ ಮೋಡವೇ ಏಳುತಿರುವದನ್ನು ಕಂಡ ಸ್ವಲ್ಪ ತಡೆದ.

ಕುದುರೆಯೇರಿ ನಿಟ್ಟೋಟದಿಂದ ಬಂದವನು ಅವನ ಗೆಳೆಯನೇ ಆಗಿದ್ದ. ಅವನು ತೇಕುತ್ತ ಹೇಳಿದ: "ಅಲ್ಲೋ, ತಪ್ಪು ಕೀಲಿಕೈ ಕೊಟ್ಟು ಹೋಗಿದ್ದಿ ನೀನು!"

✻

ದೇವಸ್ಥಾನಕ್ಕೆ ಲಕ್ಷಾಧೀಶ ರಾಯರು 'ಅಪರೂಪ' ದರ್ಶನ ಕೊಟ್ಟಿದ್ದರು. ಆಚಾರ್ಯರಿಗೆ ಕೈತುಂಬ ದಕ್ಷಿಣೆ ಕೊಟ್ಟು ರಾಯರು ಹೇಳಿದರು:

"ನಾನು ದೇವಸ್ಥಾನಕ್ಕೆ ಬರುವದೇ ಇಲ್ಲ. ನೀವು ಇದನ್ನು ಗಮನಿಸಿರಲಿಕ್ಕೆ ಸಾಕು."

"ಹೌದು, ಗಮನಿಸಿದ್ದೇನೆ" ಎಂದು ಆಚಾರ್ಯರು ಗಂಭೀರವಾಗಿ ಉತ್ತರವಿತ್ತರು.

"ಏಕೆನ್ನುತ್ತೀರಾ?" ರಾಯರು ಮುಂದುವರಿಸಿದರು. "ದೇವಸ್ಥಾನಗಳಲ್ಲಿ ಈಗೀಗ ದಾಂಭಿಕರೇ ತುಂಬಿ ಹೋಗಿದ್ದಾರೆ."

"ಆಹಾ, ಅದಕ್ಕಾಗಿ ನೀವು ಚಿಂತಿಸಬೇಡಿರಿ" ಆಚಾರ್ಯರು ನಗುತ್ತ ಉತ್ತರಿಸಿದರು. "ಇಷ್ಟು ಜನರ ಮಧ್ಯದಲ್ಲಿ ಇನ್ನೊಬ್ಬರಿಗೆ ಸ್ಥಳವಿಲ್ಲವೆ?"

✻

ಅವನಿಗೆ ಸೈನ್ಯದಲ್ಲಿ ಭರತಿಯಾಗಲು ಮನಸೇ ಇದ್ದಿಲ್ಲ. ಭರತಿ ಮಾಡಿಕೊಳ್ಳುವ ಮೊದಲು ಪರೀಕ್ಷೆ ಮಾಡುತ್ತ ಸೈನ್ಯದ ಕಣ್ಣಿನ ಡಾಕ್ಟರರು "ಆ ಪಟ ಓದು" ಎಂದರು.

"ಯಾವ ಪಟ?" ಉಮೇದ್ವಾರ ಕೇಳಿದ.

ಡಾಕ್ಟರರು ಹಟದಿಂದ "ಆ ಕುರ್ಚಿಯಲ್ಲಿ ಕೂತುಕೋ. ಆ ಮೇಲೆ ತೋರಿಸುತ್ತೇನೆ" ಎಂದರು.

ಉಮೇದ್ವಾರ ಕಣ್ಣುಬಿಟ್ಟ. ಆ ಮೇಲೆ "ಯಾವ ಕುರ್ಚಿ?" ಎಂದು ಕೇಳಿದ.

ಕಣ್ಣು ಸರಿಯಾಗಿಲ್ಲೆಂದು ತಿರಸ್ಕರಿಸಲ್ಪಟ್ಟ ಆ ಉಮೇದ್ವಾರ ಅಂದು ಸಂಜೆ ಹತ್ತಿರದ ಸಿನೆಮಾಕ್ಕೆ ಹೋಗಿದ್ದ. ಅಲ್ಲಿ ದೀಪಗಳು ಬೆಳಗಿದೊಡನೆ ತನ್ನ ಮಗ್ಗುಲಲ್ಲಿ ಕುಳಿತ ಅದೇ ಸೈನ್ಯದ ಡಾಕ್ಟರರನ್ನು ಕಂಡು ಅವನ ಎದೆ ಧಸ್ಸೆಂದಿತು.

"ಸ್ವಾಮೀ" ಎಂದು ಅತ್ಯಂತ ಸಮಾಧಾನ ವೃತ್ತಿಯಿಂದ ಡಾಕ್ಟರರನ್ನು ಅವನು ಕೇಳಿದ. "ಈ ಬಸ್ಸು ಧಾರವಾಡಕ್ಕೆ ಹೋಗುವದೆ?"

ಕಲೋಪಾಸಕ

(ಇನೇ ಪುಟದಿಂದ)

ಜಯಂತನ ಕಲಾತ್ಮಕ ಬುದ್ಧಿಗಾಗಿ ಅಳಗೆ ಆದರವಿದ್ದಿಲ್ಲ. ಆದರೆ ಹಣ ಬಂದರೆ ಬರಲಿ ಎಂಬ ಭಾವ ಆಕೆಯ ಸಂಭಾಷಣೆಯಲ್ಲಿ ಹುದುಗಿತ್ತು.

ಆ ಕಲಾಪ್ರೇಮಿ ಸಹೃದಯನನ್ನು ಕಾಣಲು ಒಂದು ವಾರ ಬೇಕಾಯಿತು. ಜಯಂತನ ಅಪೂರ್ವ ಕಲೆಯ ಬಗ್ಗೆ ಅವನಿಗೆ ತಿಳಿಸಿ ಹೇಳಿದೆ. ತನಗೇನೂ ಆಧುನಿಕ ಚಿತ್ರಕಾರರ ಬಗ್ಗೆ ಗೊತ್ತಿಲ್ಲವೆಂದು ಸೌಜನ್ಯ ತೋರಿಸುವಷ್ಟರಲ್ಲಿಯೇ ಒಂದು ವ್ಯವಸ್ಥಿತ ಉಪನ್ಯಾಸದ ಠೀವಿ ಅವನಲ್ಲಿ ಇಳಿದುಬಿಟ್ಟಿತ್ತು! ಮುಂಜಾನೆ ಜಯಂತನು ಆಫೀಸಿಗೆ ಹೋದಾಗ ಆ ಗೃಹಸ್ಥನನ್ನು ಕರೆದುಕೊಂಡು ಹೋಗಿ ಕುಮುದಳ ಭೆಟ್ಟಿ ಮಾಡಿಸಿದೆ. ನಾವು ಮೂವರೂ ಅಟ್ಟವನ್ನೇರಿದೆವು. ಆ ಕಲಾಪ್ರೇಮಿಗಂತೂ ಹಿಡಿಸಲಾರದಷ್ಟು ಆನಂದವಾಗಿತ್ತು!

ಕಿರ್ ಎಂಬ ಸದ್ದಿನೊಡನೆ ಬಾಗಿಲು ತೆರೆಯಿತು. ಕೋಣೆಯಲ್ಲಿ ಕತ್ತಲೆ ಇದ್ದಿತು. ಆದರೂ ಒಳಗಿನ ವಸ್ತುಗಳು ಕಾಣುವಂತಿದ್ದವು. ಉಸಿರು ಬಿಗಿಹಿಡಿದು ನೋಡಿದೆವು. ಚಿತ್ರಗಳೆಲ್ಲ ವಿರೂಪ ಹೊಂದಿದ್ದವು! ಇವನ್ನಾರು ಹರಿದಿದ್ದಾರೆಂದು ಕುಮುದೆ ಕಣ್ಣೀರಿಟ್ಟಳು. ಕೊಳ್ಳಬಂದವನು ಸುಳ್ಳು ಸಹಾನುಭೂತಿ ತೋರಿಸಿ ಹೊರಡಲನುವಾದನು. ಈ ಚಿತ್ರಗಳ ಉತ್ಪಾದಕನೇ ಇಂತಹ ವಿನಾಶಕ್ಕೆ ಕಾರಣೀಭೂತನಿದ್ದಿರಬೇಕೆಂದು ನನಗೆ ಹೊಳೆಯದೇ ಹೋಗಲಿಲ್ಲ!

ಭಯಗ್ರಹ

ಅದು ಬೇಡ, ಇದು ಬೇಡ ಎಂದು ಮಕ್ಕಳ ಬುದ್ಧಿಯುಳ್ಳ ದೊಡ್ಡವರು ಕೆಲವೊಮ್ಮೆ ನಿಷ್ಕಾರಣವಾಗಿ ಹೇಳುವುದು ನಮಗೇನೂ ಹೊಸದಲ್ಲ. ಅವರ ಚಿಕ್ಕಂದಿನಲ್ಲೇ ಅವರಲ್ಲಿ ಅಂತರ್ಗತವಾದ ಮೂಢಭಾವನೆಗಳು ಮನಸ್ಸನ್ನು ಗ್ರಹಗಳಾಗಿ ಹಿಡಿದಿರುವದೇ ಕಾರಣ.

Phobies ಭಯಗ್ರಹಗಳು ಹಲವಾರಿವೆ. ನಾಲ್ಕರಲ್ಲಿ ಒಬ್ಬ ವ್ಯಕ್ತಿ ಹಲ್ಲು ಕೀಳಿಸಲು ದಂತವೈದ್ಯರಲ್ಲಿ ಹೋಗಲು ಅಂಜುತ್ತದೆ. ಅದಕ್ಕೆ ವೇದನಾಗ್ರಹ ಎಂದು ಹೆಸರು. ಹೋಗುವಾಗ ಹೊಟ್ಟೆ ತುಂಬ ಊಟಮಾಡಿ ಹೋದರೆ ಈ ಗ್ರಹದ ಕಾಟ ಸ್ವಲ್ಪ ಕಡಿಮೆಯಾಗುವುದು ನೋವಾದೀತೆಂಬ ಶಂಕೆಯೇ ಈ ಭಯಗ್ರಹದ ಬೀಜ.

ಔನ್ನತ್ಯಗ್ರಹ, ಪ್ರಾಣಿಗ್ರಹ ಇವುಗಳಲ್ಲಿ ಒಂದಾದರೂ ಹಿಡಿದಿರದ ಒಬ್ಬ ವ್ಯಕ್ತಿಯೂ ಸಿಗಲಾರನೆಂದು ಮನಃಶಾಸ್ತ್ರಜ್ಞರ ಮತ. ಇವಲ್ಲದೆ ದಿಗ್ಬಂಧನಗ್ರಹ, ತೂಲಿಕಾಕಂಡೂತಿ ಗ್ರಹ, ಅಧಃಪಾತಗ್ರಹ, ಪಿಶಾಚಗ್ರಹ, ಸೇತುತರಣಗ್ರಹ, ಪ್ರವಾಹಗ್ರಹ, ಧನಗ್ರಹ, ಸರ್ಪಗ್ರಹ ಎಂದುಮುಂತಾಗಿ ಭಯಗ್ರಹಗಳು ಸುಮಾರು ೨೦೦ ರಷ್ಟಿವೆ.

ನಾಲ್ಕರಲ್ಲಿ ಒಬ್ಬಳು ರಾತ್ರಿ ಒಬ್ಬಳೇ ಇರಲು ಅಂಜುತ್ತಾಳೆ. ಇದು ಅವಳ ಅಬಲಾತ್ವವನ್ನು ಸಮರ್ಥಿಸುತ್ತದೆ. ತಮೋಗ್ರಹ ಮಾತ್ರ ೧೦ ರಲ್ಲಿ ಒಬ್ಬಳು ಹೆಂಗಸಿಗಿದ್ದರೆ ೫ ರಲ್ಲಿ ಒಬ್ಬ ಗಂಡಸಿಗಿದೆ ಎಂದು ತಿಳಿದು ಬಂದಿದೆ!

ಮಕ್ಕಳಲ್ಲಿ ಶ್ವಾನಗ್ರಹ ಬಹಳ. ಅದೇ ಮೇರೆಗೆ ಮೇಘನಾದಗ್ರಹ, ಗಭೀರಜಲಗ್ರಹಗಳೂ ಅವುಗಳಿಗೆ ಸಾಮಾನ್ಯವಾದವು. ಭೌತಿಕ ಆಧಾರವನ್ನು ತೆಗೆದಾಗ ಬೀಳುವ ಭಯ ಮತ್ತು ಆಕಸ್ಮಿಕ ಶಬ್ದಶ್ರವಣ ಇವೆರಡೇ ಮನಃಶಾಸ್ತ್ರಜ್ಞರ ಪ್ರಕಾರ ಮಾನವಜಾತಿಗೆ ಸಹಜವಾದ ಭಯಗಳು. ದಿಗ್ಬಂಧನ ಭಯ, ಮಾರ್ಗತರಣಭಯ ಇತ್ಯಾದಿ ಸರ್ವಗ್ರಹಗಳೂ ಮನುಷ್ಯನಿಗೆ ಹುಟ್ಟಿದ ನಂತರ ಬರುವ ಅಪಾಯಾನುಭವಜನ್ಯಗಳಾಗಿ ಅಂಟಿಕೊಳ್ಳತಕ್ಕವು.

ನೂರರಲ್ಲಿ ೭೫ ಗ್ರಹಗಳು ನಮ್ಮ ಚಿಕ್ಕಂದಿನಲ್ಲಿ ತಂದೆತಾಯಿಗಳು ನಡೆದುಕೊಳ್ಳುವರೀತಿಯಿಂದ ಸಂಭವಿಸುತ್ತವೆ. ರಗಳೆಮಾಡಿದರೆ ಪೋಲೀಸನನ್ನು ಕರೆಯುತ್ತೇನೆ- ಎಂದು ಹೆದರಿಸಿದರೆ ದೊಡ್ಡವರಾದ ಮೇಲೂ ಪೋಲೀಸನು ಸದಾ ಅಸ್ವಾಗತಾರ್ಹನಾಗಿಯೇ ಉಳಿಯುತ್ತಾನೆ. ಬೆಸಸಂಖ್ಯೆ ಮತ್ತು ಕೆಲ ಬಣ್ಣಗಳನ್ನು ಕಂಡು ಅಂಜುವುದು ಇವುಗಳಿಗೆ ವಿಷಮಸಂಖ್ಯಾಗ್ರಹ ಮತ್ತು ವರ್ಣಗ್ರಹಗಳೆಂದು ಹೆಸರು. ಇದೇ ಮೇರೆಗೆ ವಿದ್ಯುದ್ಗ್ರಹ, ಯಂತ್ರಗ್ರಹ ಇವುಗಳೂ ಇವೆ. ಅಲ್ಲದೆ ಅಣುಬಾಂಬಿನ ಈ ಯುಗದಲ್ಲಿ ಇನ್ನು ಮೇಲೆ ಅಣುಗ್ರಹವೂ ಸಾಮಾನ್ಯ ಜನರಿಗೆ ಅಂಟಿಕೊಳ್ಳಬಹುದಾಗಿದೆ.

ಅಂಜಿಕೆಯಿಂದ ಹುಟ್ಟುವ ಸಂಶಯ, ಸಂಕೋಚ, ನಾಚಿಕೆ, ವಂಚಕತೆ, ಹೇಡಿತನ, ಚಾಡಿಕೋರತನ, ಕ್ರೌರ್ಯ ಮುಂತಾದ ಹಲವಾರು ಪಾಶವೀಗುಣಗಳು ಮಾನವನ ಮನದಲ್ಲಿ ಮನೆಮಾಡಿಕೊಂಡು ಅವನ ಪಾಪಬುದ್ಧಿಗೆ ನೀರೆರೆಯುತ್ತವೆ. ಹೆಂಗಸರಲ್ಲಿ ಇವುಗಳಲ್ಲಿ ಕೆಲ ಗುಣಗಳು ಸೌಂದರ್ಯಪ್ರಕಾರಗಳೆಂದು ಕಲಾದರೂ ಕವಿಗಳೂ ಹೇಳಿ ಸ್ತ್ರೀಯರನ್ನು ಮತ್ತಷ್ಟು ವಂಚನೆಗೀಡು ಮಾಡಿದ್ದಾರೆ. ಕಾರ್ಯಕಾರಣನ್ಯಾಯಕ್ಕೆ ಸಿಕ್ಕದ ಭಯಗ್ರಹಗಳೆಲ್ಲ ಪಾಪಮೂಲಗಳು, ಅದನ್ನು ಗೆಲ್ಲುವುದು ಸಂಸ್ಕೃತಿಯ ಬೆಳವಣಿಗೆಗೆ ಅತ್ಯವಶ್ಯಕವಲ್ಲವೆ?

ಸಾಹಿತ್ಯದಲ್ಲಿ ಮತ್ತಗಜಗಾಮಿನಿ, ನಾಚುವ ನೀರೆ, ಮುಗ್ಧೆ, ಭೀರು ಮುಂತಾದ ಪದಗಳಿಂದ ಸುಂದರಿಯರನ್ನು ವರ್ಣಿಸಿದ್ದರಿಂದ ಸ್ತ್ರೀಸಾಮಾಜಿಕರು ತಾವು ಹಾಗಿರುವುದು ಆದರ್ಶವೆಂದೂ ಗೌರವವೆಂದೂ ತಿಳಿಯುವುದು ಮೂರ್ಖತನ. ಸೌಂದರ್ಯವೆಂದು ಬಹಳ ಜನ ತಿಳಿದಿರುವುದೇ ಮೊದಲು ಅಜ್ಞಾನಜನ್ಯವಾಗಿರುವಾಗ ಅದನ್ನು ಪೋಷಿಸುವ ಮಿಕ್ಕಗುಣಗಳು ಪಾಶವಿಯೂ ಅಜ್ಞಾನಜನ್ಯವೂ ಆಗಿರುವುದರಲ್ಲಿ ಏನಾಶ್ಚರ್ಯವಿದೆ? ಅಂತರ್ಬಹಿಃಶುದ್ಧಿ ಅಥವಾ ಪಾವಿತ್ರ್ಯ, ಮನೋವಾಕ್ಕಾಯಕರ್ಮಗಳ ಸಾಮಂಜಸ್ಯ, ಸಾತ್ವಿಕತೆಯ ಶಾರೀರಿಕ ಪ್ರಕಾಶನ ಇದು ಚಂದವಲ್ಲದೆ ಅನ್ಯವೆಲ್ಲ ಭಯಜನ್ಯ, ಅಥವಾ ಕೃತಕ, ವಂಚನಾಜನ್ಯ ಭಯವು ಪ್ರಗತಿಯ ಶತ್ರು, ವಂಚನೆ ಎಂಥದೆಂದು ಬೇರೆ ಹೇಳಬೇಕಾಗಿಲ್ಲ!

--ಭಯಭೇಷಜ

✻ ಪಾಕಿಸ್ತಾನ ಮುಸ್ಲಿಂಲೀಗಿನ ನಿಧಿಯಲ್ಲಿ ಅರ್ಧಾಂಶವನ್ನು ಹಿಂದೀ ಮುಸ್ಲಿಂಲೀಗಿಗೆ ಕೊಡಬೇಕೆಂದು ಮದ್ರಾಸಿನ ಲೀಗ್ ಪ್ರಮುಖ ಅಬ್ದುಲ ಲತೀಫರು ಒತ್ತಾಯ ಮಾಡಿದ್ದಾರೆ.

ಸಮಸ್ತ ಭಾರತ

ಮುಂಬಯಿ

ಇದೇ ಮೇ ೧ ರಿಂದ ಕೊಲ್ಹಾಪುರ ಸಂಸ್ಥಾನ ಪ್ರದೇಶಕ್ಕೂ ಮುಂಬಯಿ ಸರಕಾರದ ಸಾವಕಾರೀ ಕಾಯದೆಯು ಅನ್ವಯಿಸುವದು. ಮುಖ್ಯ ಅಡಳತೆಗಾರರು ರಿಜಿಸ್ಟ್ರಾರರಾಗಿಯೂ ಮಾಮಲೇದಾರ ಮತ್ತು ಮಹಾಲಕರಿಯವರು ಅಸಿಸ್ಟಂಟ ರಿಜಿಸ್ಟ್ರಾರರಾಗಿಯೂ ಕೆಲಸ ಮಾಡುವರು.

ಮುಂಬಯಿ ಪ್ರಾಂತದಲ್ಲಿ ಒಂದು ಸಾವಿರ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಯಾವತ್ತೂ ಹಳ್ಳಿಗಳಲ್ಲಿ ಆದಷ್ಟು ಬೇಗನೆ ಗ್ರಾಮಪಂಚಾಯತಿಗಳು ಸ್ಥಾಪಿತವಾಗಬೇಕೆಂದು ಮುಂಬಯಿ ಸರಕಾರ ಬಯಸಿ ಆ ಬಗ್ಗೆ ಆವಶ್ಯಕ ಕಾರ್ಯಕ್ರಮ ಕೈಕೊಂಡಿದೆ.

ಸುರತ ಜಿಲ್ಹೆಯ ಮತ್ತೂ ೧೩೫ ಹಳ್ಳಿಗಳಲ್ಲಿ ಬರಗಾಲವಿದೆಯೆಂದು ಮುಂಬಯಿ ಸರಕಾರ ಸಾರಿದೆ.

ಛೋಟಾ ಉದೇಪುರ ತಾಲೂಕಿನ ಪನವಾಡ ಎಂಬ ಹಳ್ಳಿಯಲ್ಲಿ ಆಚೆ ಶುಕ್ರವಾರ ಅಗ್ನಿನಾರಾಯಣನ ಪ್ರಕೋಪದಿಂದ ಸುಮಾರು ೪ ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು ತಿಳಿಯುತ್ತದೆ. ಒಬ್ಬನಿಗೇ ೨ ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ.

ಪುಣೆಯ ಮರಾಠಿ ವಾರಪತ್ರಿಕೆ "ಅಖಂಡ ಭಾರತ"ದ ಮೇಲೆ ಮುಂಬಯಿ ಸರಕಾರದವರು ಆಜ್ಞೆಯೊಂದನ್ನು ಜಾರಿ ಮಾಡಿ ನಥುರಾಮ ಗೋಡಸೆ ಮೊದಲಾದವರ ವಿಚಾರಣೆಯ ಸುದ್ದಿಯನ್ನು ಮೇ ೧೨ ನೇ ತಾರೀಕಿನ ವರೆಗೆ ಪ್ರಕಟಿಸಬಾರದೆಂದು ವಿಧಿಸಿದ್ದಾರೆ. ಅಲ್ಲದೆ, ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸಂಬಂಧಿಸಿದ ಸುದ್ದಿಯನ್ನು ಪ್ರಕಟಿಸಬಾರದೆಂದೂ ವಿಧಿಸಲಾಗಿದೆ.

ತಾತ್ವಿಕ ಅಸ್ತ್ರಗಳಿಂದ ಮತ್ತು ಯಾಂತ್ರಿಕ ಅಸ್ತ್ರಗಳಿಂದ ಹೋರಡುತಿರುವ ಎರಡು ಗುಂಪುಗಳ ನಡುವೆ ಇಂದು ಜಗತ್ತು ಜರ್ಜರಿತವಾಗಿದ್ದು ಹಿಂದುಸ್ತಾನವು ಇವೆರಡರ ನಡುವಿನ ದಾರಿಯನ್ನು ಹಿಡಿಯಬೇಕು ಮತ್ತು ಅದಕ್ಕನುಸಾರವಾಗಿ ಆರ್ಥಿಕ ಧೋರಣವನ್ನನುಸರಿಸಬೇಕು ಎಂದು ಪುಣೆಯಲ್ಲಿ ಜಿ ಎಲ್ ಮೆಹತಾ ಇವರು ಒಂದು ಭಾಷಣದಲ್ಲಿ ಅಭಿಪ್ರಾಯಪಟ್ಟರು.

ಕಳೆದ ಮಾರ್ಚದಲ್ಲಿ ಜರುಗಿದ ಎಸ್ ಎಸ್ ಸಿ. ಪರೀಕ್ಷೆಯ ಪ್ರಶ್ನಪತ್ರಿಕೆಗಳನ್ನು ಅವು ಮುದ್ರಿತವಾದ ಯರವಾಡಾ ತುರಂಗದ ಮುದ್ರಣಾಲಯದಿಂದ ಕಳವು ಮಾಡಿದ ಸಂಬಂಧದಲ್ಲಿ ಮುದ್ರಣಾಲಯದಲ್ಲಿ ಮೊಳೆ ಜೋಡಿಸುವವರಾದ ಶೇಖ ಹವಾಜೆ ಉಸ್ಮಾನ ಮತ್ತು ಪರೀಕ್ಷೆಗಿಂತ ಮೊದಲೆ ಅವನ್ನು ಪಡೆದ ಪುಣೆಯ ಕಾಲೇಜಿನ ವಿದ್ಯಾರ್ಥಿ ಜೋತಿರಾಮ ಕಾಂಬಳೆ ಇವರ ಮೇಲೆ ಪುಣೆ ಕ್ಯಾಂಟೋನಮೆಂಟ ರೆಸಿಡೆಂಟ ಮ್ಯಾಜಿಸ್ಟ್ರೇಟರಲ್ಲಿ ಖಟ್ಲೆ ನಡೆದಿದೆ.

ಸರ್ವೋದಯ ಯೋಜನೆಯನ್ನು ಕಾರ್ಯಕಾರಿ ಮಾಡಲು ಮುಂಬಯಿ ಸರಕಾರದವರು ಕರ್ನಾಟಕ ಮಹಾರಾಷ್ಟ್ರ ಮತ್ತು ಗುಜರಾಥ ಭಾಗಗಳಲ್ಲಿ ಸಾಮಾಜಿಕ ಕಾರ್ಯಕರ್ತರಿಗಾಗಿ ತರಬೇತಿ ಕೇಂದ್ರಗಳನ್ನು ತೆರೆಯಲು ನಿರ್ಧರಿಸಿದ್ದಾರೆ. ಇದನ್ನು ಪರಿಶೀಲಿಸಲು ಶ್ರೀ ವಿ. ಪಿ. ಪಟವರ್ಧನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕವಾಗಿದೆ. ಇದರಲ್ಲಿ ಕರ್ನಾಟಕದ ಪರವಾಗಿ ಶ್ರೀ ಕೆ. ಎ. ವೆಂಕಟರಾಮಯ್ಯ ಮತ್ತು ಎಸ್. ಕೆ. ಕಲ್ಲಾಪುರ ಇವರು ಇರುವರು.

ಕಳೆದ ಮಾರ್ಚ ತಿಂಗಳಿನಲ್ಲಿ ಬೃಹತ್ ಮುಂಬಯಿ ಪೋಲೀಸ ದಳದಲ್ಲಿಯ ಒಬ್ಬ ಡೆಪ್ಯೂಟಿ ಪೋಲೀಸ ಇನ್ಸಪೆಕ್ಟರ, ಇಬ್ಬರು ಹವಾಲ್ದಾರ ಹಾಗೂ ಒಬ್ಬ ಪೋಲೀಸನು ಲಂಚಗುಳಿತನದ ಅರೋಪದ ಮೇಲೆ ಕೆಲಸದಿಂದ ತಳ್ಳಲ್ಪಟ್ಟರು. ಇದಲ್ಲದೆ ಇನ್ನೂ ೫ ಜನರನ್ನು ವಿಚಾರಣೆ ನಡೆಯುವ ವರೆಗೆ ಸಸ್ಪೆಂಡ ಮಾಡಲಾಗಿದೆ.

ಗೋದಿ ಮತ್ತು ಸಕ್ಕರೆಗಳನ್ನು ಕೊಡಿಸುವದಾಗಿ ಹೇಳಿ ಮೋಸದಿಂದ ಒಬ್ಬ ನಾಗರಿಕನ ಕಡೆಯಿಂದ ೧೩೦೦ ರೂಪಾಯಿಗಳನ್ನು ಎತ್ತಿ ಹಾಕಲು ಪ್ರಯತ್ನಿಸಿದ್ದಕ್ಕಾಗಿ ಬಂಧಿಸಲ್ಪಟ್ಟ ಕ್ಯಾ. ಬಿ. ಎಚ್. ಹ್ಯಾಮಂಡ, ಜಿರಾಲ್ಡ ಕೂಪರ ಹಗ್ ಮಾರ್ಟಿನಡೇಲ ಎಂಬವರಿಗೆ ಮೋಸ ಮತ್ತು ಸುಳ್ಳು ವಿಧಾನ ಈ ಅಪರಾಧಕ್ಕಾಗಿ ದಂಡ ಮತ್ತು ಸಶ್ರಮ ಶಿಕ್ಷೆಗಳನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಧಿಸಿರುವರು.

ಮುಂಬಯಿ ಸರಕಾರವು ತರಿಸಿದ ಗೋದಿಯ ಚೀಲಗಳನ್ನು ಮುಂಬೈ ಬಂದರದಲ್ಲಿ ಇಳಿಸಿದಾಗ ಅವುಗಳಲ್ಲಿಯ ೬೦ ಚೀಲಗಳನ್ನು ಕಳ್ಳತನದಿಂದ ಸಾಗಿಸಿದ್ದಕ್ಕಾಗಿ ಉಮರಖಾನ ದೌಲತಖಾನ ಮತ್ತು ಸೊಲೊಮನ್ ಸಾಯಮನ್ ಎಂಬವರಿಗೆ ತಲಾ ೨ ತಿಂಗಳ ಸಶ್ರಮ ಶಿಕ್ಷೆ ಮತ್ತು ೨೦೦೦ ರೂಪಾಯಿ ದಂಡ, ದಂಡ ಕೊಡಲು ತಪ್ಪಿದರೆ ಮತ್ತೆ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ಹೊಸದಿಲ್ಲಿ

೧೯೪೯ ರೊಳಗಾಗಿ ತಮ್ಮ ಸಂಸ್ಥಾನವನ್ನು ಆಹಾರ ವಿಷಯದಲ್ಲಿ ಸ್ವಾವಲಂಬಿಯನ್ನಾಗಿ ಮಾಡಬೇಕೆಂದು ಯೋಜಿಸಿ ಕೊಚ್ಚಿ ಸಂಸ್ಥಾನ ಸರಕಾರದವರು ಹಿಂದುಸ್ತಾನ ಸರಕಾರಕ್ಕೆ ೫ ಕೋಟಿ ರೂಪಾಯಿಗಳ ಸಾಲವನ್ನು ಕೇಳಿದ್ದಾರೆಂದು ತಿಳಿಯುತ್ತದೆ. ಇದರಂತೆ ತಿರುವಾಂಕೂರು ಸರಕಾರದವರು ೧೭ ಕೋಟಿ ರೂಪಾಯಿ ಸಾಲ ಕೇಳಿರುವದೆಂದು ಸುದ್ದಿ.

ಒಂದೇ ಎತ್ತಿನ ಸಹಾಯದಿಂದ ಈಗಿರುವ ರಂಟಿಗಿಂತಲೂ ಎರಡರಷ್ಟು ಕೆಲಸ ಮಾಡಬಲ್ಲ ಹೊಸ ರಂಟೆಯೊಂದನ್ನು ಹಿಂದೀ ಒಕ್ಕಲತನ ಸಂಶೋಧನ ಶಾಖೆಯವರು ಸಿದ್ಧಪಡಿಸಿದ್ದಾರೆ. ಹಳ್ಳಿಯ ಕಮ್ಮಾರನೂ ಈ ರಂಟೆಯನ್ನು ಮಾಡಬಲ್ಲನು. ಈ ಹೊಸ ರಂಟೆಗೆ ಹೆಚ್ಚು ವೆಚ್ಚ ಬೀಳುವದು.

ಆಯ. ಎ. ಎಸ್. ಹುದ್ದೆಗೆ ೩೮ ಜನರನ್ನು ನೇಮಿಸಲಾಗಿದ್ದು ಅವರ ಹೆಸರುಗಳನ್ನು ಗೃಹಶಾಖೆಯವರು ಅಧಿಕೃತವಾಗಿ ಪ್ರಕಟಿಸಿದ್ದಾರೆ.

ಪೂರ್ವ ಪಂಜಾಬ

ಮಹಾತ್ಮಾ ಗಾಂಧಿ ಕೊಲೆಯ ಸಂಬಂಧದಲ್ಲಿ ಶಿಕ್ಷೆಗೆ ಗುರಿಯಾಗಿರುವ ನಥೂರಾಮ ಗೋಡಸೆ ಹಾಗು ಇನ್ನು ೬ ಜನರ ಅಪೀಲಿನ ವಿಚಾರಣೆಯು ೨ ನೇ ತಾರೀಕಿನಿಂದ ಪೂರ್ವ ಪಂಜಾಬ ಹಾಯಕೋರ್ಟಿನ ಫುಲ್ ಬೆಂಚಿನ ಮುಂದೆ ಪ್ರಾರಂಭವಾಗಿದೆ. ನ್ಯಾ. ಎಸ್. ಎನ್. ಭಂಡಾರಿ, ಅಚ್ಛೂರಾಮ ಮತ್ತು ಜಿ. ಡಿ. ಖೋಸಲಾ ಇವರು ಫುಲ್ ಬೆಂಚಿನಲ್ಲಿ ನ್ಯಾಯಾಧೀಶರಾಗಿರುವರು. ನಥುರಾಮನು ತಾನೇ ಖಟ್ಲೆ ನಡೆಸುತ್ತಿದ್ದು ಉಳಿದವರು ತಮ್ಮ ಪರವಾಗಿ ವಕೀಲರನ್ನು ಕೊಟ್ಟಿರುವರು. ಅಪ್ಪಣೆಪತ್ರವಿದ್ದವರಿಗೆ ಮಾತ್ರ ಒಳಗೆ ಪ್ರವೇಶ ದೊರೆಯುವದು.

ಸಿಮಲಾದಲ್ಲಿಯ ದಟ್ಟಣೆಯನ್ನು ಕಡಮೆ ಮಾಡಲು ಪೂರ್ವ ಪಂಜಾಬ ಸರಕಾರದವರು ಪ್ರಾಂತಿಕ ಸರಕಾರದ ಕೆಲ ಕಚೇರಿಗಳನ್ನು ಸ್ಥಾನಾಂತರಿಸಲು ನಿರ್ಧರಿಸಿದ್ದಾರೆ. ಅಂಬಾಲಾದ ಸಮೀಪದಲ್ಲಿ ಈ ಬಗ್ಗೆ ಒಂದು ನಗರ ಕಟ್ಟಬೇಕೆಂದು ನಿರ್ಧರಿಸಲಾಗಿದೆ.

ನಥುರಾಮ ಗೋಡಸೆ ಇವರಿಗೆ ಸ್ವಲ್ಪ ಅಸ್ವಸ್ಥವಾದ್ದರಿಂದ ೨ ನೇ ತಾರೀಕು ಡಾಕ್ಟರರನ್ನು ಕರೆಸಿ ಅವರ ಪ್ರಕೃತಿಯನ್ನು ಪರೀಕ್ಷಿಸಲಾಯಿತು. ೩ ನೇ ತಾರೀಕು ಅವರು ಕೋರ್ಟಿಗೆ ಬಂದಿದ್ದರೂ ಬಹಳ ಹೊತ್ತಿನ ವರೆಗೆ ಅವರಿಗೆ ಕೂಡುವದಾಗದ್ದರಿಂದ ವಿಶ್ರಾಂತಿಯ ಕೋಣೆಗೆ ಅವರನ್ನು ಸಾಗಿಸಲಾಯಿತು.

ವಿಶ್ವ ಪ್ರಯತ್ನ ಮಾಡಿಯಾದರೂ ನಿರಾಶ್ರಿತರಿಗೆ ಆಶ್ರಯ ಕೊಡುವೆವು. ಕಳ್ಳಪೇಟೆ ಲಂಚಗುಳಿತನ ಅಧಿಕಾರಲಾಲಸೆಯುಳ್ಳವರನ್ನು ತಮ್ಮ ಸರಕಾರವು ಬಗ್ಗುಬಡಿಯುವದು ಎಂದು ಮುಂತಾಗಿ ಪೂರ್ವ ಪಂಜಾಬದ ಮುಖ್ಯ ಮಂತ್ರಿ ಶ್ರೀ ಭೀಮಸೇನ ಸಾಚಾರರು ಅಂಬಾಲಾದಲ್ಲಿಯ ಮೊದಲನೇ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಪಶ್ಚಿಮ ಬಂಗಾಲ

ಕಲಕತ್ತೆಯಲ್ಲಿ ೧೪೪ ನೆಯ ಕಲಮನ್ನು ಉಲ್ಲಂಘಿಸಿ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ ಅದನ್ನು ಚದರಿಸಲು ಪೋಲೀಸರು ಅಶ್ರುವಾಯುವನ್ನು ಪ್ರಯೋಗಿಸಿದರು.

ಶರಚ್ಚಂದ್ರ ಬೋಸ, ಮೃಣಾಲಕಾಂತಿ ಬೋಸ, ಜೋಗೇಶ ಚಟರ್ಜಿ ಮತ್ತು ಸೌಮ್ಯೇಂದ್ರನಾಥ ಟಾಗೋರ ಇವರು ಪಶ್ಚಿಮ ಬಂಗಾಲ ಸರಕಾರದ ಮುಖ್ಯಮಂತ್ರಿ ಡಾ. ಬಿ. ಸಿ. ರಾಯ ಇವರಿಗೆ ಅನಾವೃತಪತ್ರ ಬರೆದು ಜನರ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯಕ್ಕೆ ಅಡ್ಡಿಯುಂಟು ಮಾಡುತಿರುವ ೧೪೪ ನೇ ಕಲಮನ್ನು ಕೂಡಲೆ ಹಿಂತೆಗೆದುಕೊಳ್ಳದೆ ಹೋದರೆ ಅದನ್ನು ಮುರಿಯುವ ಪ್ರಸಂಗ ಬರುವದಾಗಿ ತಿಳಿಸಿದ್ದಾರೆ.

ಸಂಯುಕ್ತಪ್ರಾಂತ—ಬಿಹಾರ

ಹಿಂದುಸ್ತಾನವು ಕಾಮನ್‌ವೆಲ್ತದಲ್ಲಿ ಉಳಿಯುವದಕ್ಕೆ ಒಪ್ಪಿಕೊಂಡಿದ್ದು ಹೊಣೆಗಾರರಿದ್ದವರ ಮುತ್ಸದ್ದಿತನದ ದಿವಾಳಿಯ ದ್ಯೋತಕವಾಗಿದೆ ಎಂದು ಸಾಮ್ಯವಾದಿ ಪಕ್ಷದ ಧುರೀಣರಾದ ಆಚಾರ್ಯ ನರೇಂದ್ರ ದೇವರು ಅಲಹಾಬಾದ ಜಿಲ್ಹಾ ಸಾಮ್ಯವಾದೀ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಹೇಳಿದರು.

ಹಿಂದುಸ್ತಾನ ಸರಕಾರವು ಸಿದ್ಧಪಡಿಸಿದ ಯೋಜನೆಯನ್ವಯ ಗತ್ತು ವರುಷಗಳಲ್ಲಿ ರೇಲ್ವೆ ಕೆಲಸಗಾರರಿಗಾಗಿ ಪಾಟಣಾದಲ್ಲಿ ಹತ್ತು ಸಾವಿರ ಮನೆಗಳು ಕಟ್ಟಲ್ಪಡುವವೆಂದು ರಾಷ್ಟ್ರೀಯ ಮಜದೂರ ಸಂಘದ ಅಧ್ಯಕ್ಷ ಹರಿಹರನಾಥ ಶಾಸ್ತ್ರಿಗಳು ಹೇಳಿದರು.

ಅಲಹಾಬಾದ ಪ್ರಮುಖ ನಾಗರಿಕರು ಡಾಕ್ಟರರು ಪ್ರಾಧ್ಯಾಪಕರು ಮತ್ತು ವಕೀಲರು ಸಂಯುಕ್ತ ಪ್ರಕಟನೆಯನ್ನು ಹೊರಡಿಸಿ ವನಸ್ಪತಿಯ ಉಪಯೋಗವನ್ನು ಪ್ರತಿಬಂಧಿಸಬೇಕೆಂದು ಸರಕಾರವನ್ನು ಬಿನ್ನವಿಸಿಕೊಂಡಿದ್ದಾರೆ.

ಅಯೋಧ್ಯ ಮತ್ತು ತಿರಹೂಡ ರೇಲ್ವೆ ಜನರ ಸಂಘದ ಕೇಂದ್ರ ಸಮಿತಿಯವರು ಬರೇಲಿ ರೇಲ್ವೆ ಸ್ಟೇಶನ ಹತ್ತರ ಮಹಾತ್ಮರ ಪುತ್ಥಳಿಯನ್ನು ನಿಲ್ಲಿಸಲು ನಿರ್ಣಯಿಸಿರುವರು.

ಯುಕ್ತಪ್ರಾಂತದ ಗವರ್ನರರಾಗಿ ನೇಮಿಸಲ್ಪಟ್ಟ ಸರ್ ಹೋಮೀ ಮೋದಿಯವರು ಮೇ ೧ ನೇ ತಾರೀಕು ಅಧಿಕಾರ ಸ್ವೀಕರಿಸಿದರು. ಅಧಿಕಾರ ಸ್ವೀಕಾರದ ನಂತರ ಅವರು ಮಾಡಿದ ಮೊದಲನೇ ಸಾರ್ವಜನಿಕ ಭಾಷಣದಲ್ಲಿ ಅವರು ನವರಾಷ್ಟ್ರ ನಿರ್ಮಾಣಕ್ಕಾಗಿ ಎಲ್ಲರೂ ಸಹಾಯ ಮಾಡಬೇಕೆಂದು ಕೇಳಿಕೊಂಡರು.

ಮದರಾಸ

ಮದರಾಸಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ ಮತ್ತು ಟಿ ಪ್ರಕಾಶಂ ಇವರಲ್ಲಿ ಹೊಸ ಮಂತ್ರಿಮಂಡಲದಲ್ಲಿ ಪ್ರಕಾಶಂ ಪಕ್ಷದವರು ಸೇರುವ ಸಂಬಂಧದಲ್ಲಿ ವಿಚಾರವಿನಿಮಯ ನಡೆಯಿತು. ಮುಖ್ಯ ಮಂತ್ರಿಗಳ ಪಕ್ಷದಲ್ಲಿ ೧೦೫ ಸದಸ್ಯರಿದ್ದು ತಮ್ಮ ಪಕ್ಷದಲ್ಲಿ ೯೦ ಜನರಿರುವಾಗ ತಮಗೆ ಎರಡೇ ಸ್ಥಳಗಳನ್ನು ಮಂತ್ರಿಮಂಡಲದಲ್ಲಿ ಕೊಡಮಾಡಿದ್ದು ನ್ಯಾಯ್ಯವಾಗಿಲ್ಲಾದ್ದರಿಂದ ತಾವು ಕುಮಾರಸ್ವಾಮಿಯವರ ಮಂತ್ರಿಮಂಡಲದಲ್ಲಿ ಸೇರಬಯಸುವದಿಲ್ಲ ಎಂದು ಪ್ರಕಾಶಂರು ಚರ್ಚೆಯ ನಂತರ ಹೇಳಿದರು.

ಪ್ರತಿಬಂಧಕಾಜ್ಞೆಯನ್ನು ಮುರಿದು ಮೇ ದಿನಾಚರಣೆಯ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ ತ್ರಿಚನಾಪಲ್ಲಿಯಲ್ಲಿ ಎಸ್. ಆಯ. ರೇಲ್ವೆ ಕೂಲಿಕಾರ ಸಂಘದ ಒಬ್ಬ ಅಧಿಕಾರಿಯನ್ನೊಳಗೊಂಡು ೨೬ ಜನರನ್ನು ಸೆರೆಹಿಡಿಯಲಾಯಿತು. ಮೆರವಣಿಗೆಯ ಜನರು ಕೆಲ ದೇಶೀ ಬಾಂಬುಗಳನ್ನು ಪೋಲೀಸರ ಮೇಲೆ ಒಗೆದದ್ದರಿಂದ ಕೆಲವರಿಗೆ ಗಾಯಗಳಾಗಿವೆ.

ತಿರುವಾಂಕೂರು ಸರಕಾರದವರು ತಮ್ಮ ಸಬಾರ್ಡಿನೇಟ ಸರ್ವೀಸಿನ ೬ ಜನರನ್ನು ಅವರು ಸರಕಾರವಿರೋಧಿ ಕಾರ್ಯಕ್ರಮದಲ್ಲಿ ಭಾಗತೆಗೆದುಕೊಂಡಿದ್ದು ಕಂಡು ಬಂದದ್ದರಿಂದ ನೋಕರಿಯಿಂದ ಕಿತ್ತೊಗೆದಿದ್ದಾರೆ.

ಜಪಾನದಿಂದ ಸುಮಾರು ೩೦೦೦ ಟನ್ನುಗಳಷ್ಟು ಬಟ್ಟೆ ತಯಾರ ಮಾಡುವ ಯಂತ್ರೋಪಕರಣಗಳು ಮದ್ರಾಸಿಗೆ ಬಂದಿದ್ದು ಇವು ಅಲ್ಲಿಯ ಕೊಯಿಮತ್ತೂರ ಮೊದಲಾದ ಭಾಗಗಳಿಗೆ ಕಳಿಸಲ್ಪಡುವವು.

ಅಶಾಂತ ಮಲಯದಲ್ಲಿ ಭಾರತೀಯರ ಸ್ಥಿತಿಗತಿ

(೬ ನೇ ಪುಟದಿಂದ ಮುಂದುವರಿದುದು)

ಮಲಯದಲ್ಲಿ ಈಗಾಗಲೆ ಜಪಾನಿ ಹಣವೇ ಬಹಳ ಕೊಳೆಗಿದ್ದು ಅಲ್ಲಿಗೆ ಪಾಕು ಸಾಕಷ್ಟು ಅಲ್ಲಿ ಕಳಿಸದೆ ಹೋದರೆ ಒಂದು ಉತ್ಪಾತ ಹಿಡೇರಿ ಹೇಜಿಯಿ ನಮ್ಮ ಕೈಬಿಟ್ಟುಹೋಗುವದು. ಅದೇ ಪ್ರಕಾರ ಹಣಬಿಷ್ಟು ಕೆಲ ಮಲಯದ ಹಿಂದೀ ವ್ಯಾಪಾರಿಗಳು ದಕ್ಷಿಣ ಆಫ್ರಿಕೆಗೆ ಪುನಃ ನಿರ್ಯಾತ ಮಾಡಿದರೆಂದು ಇಡಿ ಮಲಯದ ಹಿಂದೀ ವ್ಯಾಪಾರಿವರ್ಗವನ್ನೇ ದಂಡಿಸಿ ಹಣದ ನಿರ್ಯಾತವನ್ನೇ ನಿಲ್ಲಿಸಿದ್ದು ಸರಿಯಾಗಲಿಲ್ಲ. ವಿಶ್ವಾಸಾರ್ಹರಾದವರಿಗೆ ಪರಮಿಟ್ ಕೊಟ್ಟು ಹಣದಿನ ವ್ಯವಹಾರವನ್ನು ಮತ್ತೆ ಪ್ರಾರಂಭಿಸುವದವಶ್ಯ. ಮಲಯದಿಂದ ಭಾರತಕ್ಕೆ ಹಣ ಕಳಿಸುವದಕ್ಕಿರುವ ಅಡಚಣೆಗಳನ್ನೂ ರಿಜರ್ವ ಬ್ಯಾಂಕು ನಿವಾರಿಸಬೇಕು. ಮಲಯದ ನಿರ್ಯಾತವ್ಯಾಪಾರಕ್ಕಾಗಿ ಹಡಗಗಳ ಕೊರತೆಯಿರುವದರಿಂದ ಆ ಮಾರ್ಗಗಳ ಬಗ್ಗೆ ಹಿಂದೀ ಹಡಗಗಳು ಹೆಚ್ಚುಗಮನಕೊಟ್ಟರೆ ಇಬ್ಬರಿಗೂ ಲಾಭವಾದೀತು.

ಹಿಂದುಸ್ತಾನದಿಂದ ಮಲಯಕ್ಕೆ ಕೂಲಿಕಾರರ ವಲಸೆಯನ್ನು ಭಾರತ ಸರಕಾರ ನಿಲ್ಲಿಸಿದ್ದು ತುಂಬ ಒಳಿತಾಯಿತು. ಅದರಿಂದ ಭಾರತದ ಬಗ್ಗೆ ಅಲ್ಲಿ ಗೌರವವೂ ಭಾರತೀಯ ಕೂಲಿಕಾರರ ಕೂಲಿ ಪ್ರಮಾಣವೂ ಹೆಚ್ಚಿದೆ. ಆದರೆ ಕಾರಕೂನರೇ ಮೊದಲಾದ ವ್ಯಾಪಾರಿ ಸಹಾಯಕರನ್ನು ಭಾರತದಿಂದ ಕರೆದೊಯ್ಯಲು ಅವಕಾಶ ಕೊಡಬೇಕು. ಅಲ್ಲಿ ಇಂಥವರಿಗೆ ಒಳ್ಳೆಯ ಸಂಬಳವೂ ದೊರೆಯುತ್ತದೆ.

ಮಲಯದಲ್ಲಿ ಹಿಂದೀ ಸರಕಾರದ ಪ್ರತಿನಿಧಿಗಳು ಒಳ್ಳೆಯ ಕೆಲಸ ಮಾಡುತ್ತಾರೆ. ಅವರ ಪ್ರಚಾರ ತುಂಬ ಪರಿಣಾಮಕಾರಿಯಾಗಿದೆ. ಈ ಬಗ್ಗೆ ಶ್ರೀ ಸತೀಶ ಕಾಲೇಲಕರ, ತಿರುವೆಂಕಟಂ ಮೊದಲಾದವರು ಅಭಿನಂದನಾರ್ಹರಾಗಿದ್ದಾರೆ.

ಅಲ್ಲಿಯೂ ಅಂತಃಕಲಹ

ಆದರೆ ದುರ್ದೈವದಿಂದ ಭಾರತೀಯರು ಹೋದಲ್ಲೆಲ್ಲ ತಮ್ಮ ಕಚ್ಚಾಟಗಳನ್ನು ಬಿಡುವದಿಲ್ಲ. ಮಲಯದಲ್ಲಿಯೂ ಬ್ರಾಹ್ಮಣ ಬ್ರಾಹ್ಮಣೇತರ, ದಾಕ್ಷಿಣಾತ್ಯ ಔತ್ತರೇಯ ಎಂಬ ಒಳಜಗಳಗಳು ತಲೆಯೆತ್ತಿವೆ. ವಣಿಕ್ಸಂಘಗಳಲ್ಲಿ ಕೂಡ ನಾಟುಕೋಟಿ ವಣಿಕ್ಸಂಘ, ಭಾರತೀಯ ವಣಿಕ್ಸಂಘ, ಬ್ರಾಹ್ಮಣ ಗುಂಪು, ಬ್ರಾಹ್ಮಣೇತರ ಗುಂಪು, ಮಲೆಯಾಳಿ ಗುಂಪು ಮೊದಲಾದವಿರುವದು ನಾಚಿಕೆಗೇಡು. ಭಾರತದಲ್ಲಿ ನಾವೆಷ್ಟೇ ಅಂತಃಕಲಹ ಮಾಡಿಕೊಂಡರೂ ಪರದೇಶಗಳಲ್ಲಿ ನಾವು ಒಂದಾಗಿ ವರ್ತಿಸದಿದ್ದರೆ ಉಳಿಗಾಲವಿಲ್ಲ. ಈ ವಿಷಯದಲ್ಲಿ ನಾವು ಬ್ರಿಟಿಶರಿಂದ ಕಲಿಯತಕ್ಕದ್ದು ಬಹಳ ಇದೆ. ನೇತಾಜಿಯ ಪ್ರಯತ್ನಗಳಿಂದ ನಮ್ಮ ಬಗ್ಗೆ ಮಲಯುಗಳಲ್ಲುಂಟಾದ ಆದರವನ್ನು ನಾವು ಈ ಬಗೆಯ ವರ್ತನೆಯಿಂದ ಕಳೆದುಕೊಳ್ಳಬಾರದು. ಮಲಯದಲ್ಲಿ ಭಾಗತದ ಹಿತಸಂಬಂಧ ಬಹಳ ಇದೆ. ಅಲ್ಲಿಯ ಬಹುಸಂಖ್ಯರು ಮುಸ್ಲಿಮರು. ಪಾಕಿಸ್ತಾನ ಅಲ್ಲಿ ಚಂಚು ಪ್ರವೇಶ ಮಾಡದಿರದು. ಹೀಗಿರುವಾಗ ನಾವು ಆದಷ್ಟು ಶ್ರೇಷ್ಠತೆಯನ್ನು ಪ್ರದರ್ಶಿಸುವದೊಂದೇ ಅವರ ಸೌಹಾರ್ದತನ್ನು ಕಾಪಾಡಲು ಮಾರ್ಗ. ಮಲಯದ ಹಿಂದೀಯರಲ್ಲಿ ಒಗ್ಗಟ್ಟನ್ನುಂಟುಮಾಡಲು ಭಾರತ ಸರಕಾರದ ವಿದೇಶಶಾಖೆಯೂ ಪ್ರಯತ್ನಿಸುವದವಶ್ಯ.

ಗರ್ಹಣೀಯ

ಗಾಂಧೀಜಿ ಹಿಂದೆ ಯಾವಾಗಾದರೊಮ್ಮೆ ವಾಸವಾಗಿದ್ದ ಸ್ಥಳವನ್ನು ಇಲ್ಲವೆ ಅವರಗೂಢವಿತಿಹಾಸಿಕ ಸಂಬಂಧವಿದ್ದ ಸ್ಥಳವನ್ನು "ರಾಷ್ಟ್ರಕ್ಕಾಗಿ ಸಂಪಾದಿಸುವ" ಕೂಗು ಇತ್ತೀಚೆ ಹೆಚ್ಚಾಗಿ ಕೇಳಬರುತ್ತದೆ. ಹೊಸದಿಲ್ಲಿಯಲ್ಲಿರುವ ಬಿರ್ಲಾಭವನವನ್ನು ಪಡೆಯುವುದೊಂದು ವಿಶಿಷ್ಟ ಧ್ಯೇಯವಾಗಿದೆ. ಈ ಸಂಬಂಧದಲ್ಲಿ ಶಾಸನಸಭಾ ಸದಸ್ಯರು, ಮಂತ್ರಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೇಲೆ ಒತ್ತಾಯವನ್ನೂ ತರಲಾಗಿದೆ. ಗಾಂಧೀಜಿಯ ಸ್ಮಾರಕವಿದೆಂತಾಗಬಲ್ಲುದೊ? ಯಾವದೊಂದು ಕಾರ್ಯ ಮಾಡುವಲ್ಲಿ ಒಳಿತು ಕೆಡುಕು ಎಂಬ ಎರಡು ಮಾರ್ಗಗಳಿರುವವು. ಉಚ್ಚ ಧ್ಯೇಯದತ್ತ ಒಯ್ಯುವ ಸರಿಯಾದ ಪ್ರಯತ್ನದ ಸ್ಫೂರ್ತಿಯನ್ನು ಹುಟ್ಟಿಸುವಂತಿದ್ದರೆ ಅಂಥ ವಸ್ತುಗಳ ಸಂಬಂಧವು ಸ್ವಾಭಾವಿಕವಾದುದು ಮತ್ತು ನ್ಯಾಯ್ಯವಾದುದು. ಆದರೆ ಅದರಿಂದ ಆ ಧ್ಯೇಯಗಳನ್ನು ಬಿಡುವಂತಾದರೆ ಮಾತ್ರ ಅದೊಂದು ಬಗೆಯಿಂದ ಭಯಪ್ರದವಾಗಬಹುದು. ಗಾಂಧೀಜಿ ತಮ್ಮ ಯಜಮಾನರ ಬಗ್ಗೆ ಒಳ್ಳೆ ಆದರ ಗೌರವವುಳ್ಳವರಾಗಿದ್ದರು. ತಮ್ಮನ್ನು ನೋಡಲು ಉತ್ಸುಕರಾಗಿಬಂದ ಜನರು ತಾವಿದ್ದ ಬಂಗಲೆಯ ಪಟಾಂಗಣದಲ್ಲಿಯ ಹೂವಿನ ಕುಂಡಗಳನ್ನು ಒಡೆದು ಮತ್ತಾವ ರೀತಿಯಿಂದಲಾದರೂ ಆ ಹೆಚ್ಚಿನೆಯ ಸ್ಥಳವನ್ನು ಅಂದಗೆಡಿಸಿದರೆ ಗಾಂಧೀಜಿ ಅಂಥವರ ಮೇಲೆ ಎಷ್ಟೊಂದು ಬೇಸಿಗೆಳುತಿದ್ದರೆಂಬುದನ್ನು ಯಾರೂ ಮರೆಯಲಾರರು. ಗಾಂಧೀಜಿ ಇದ್ದ ಸ್ಥಳಗಳ ಒಡೆಯರಿಗೆ ಇಂತು ತೊಂದರೆ ಕೊಡುವದಾದರೆ ಇಲ್ಲವೆ ಅವುಗಳನ್ನು ಬಿಟ್ಟುಗೊಡಬೇಕೆಂದು ಅವರನ್ನು ಒತ್ತಾಯಪಡಿಸುವದಾದರೆ ಅವರ ಧ್ಯೇಯ ಧೋರಣೆಗಳನ್ನು ಪೂರ್ಣವಾಗಿ ಬಿಟ್ಟುಗೊಟ್ಟಂತಾಗುವದು. ಸಂಬಂಧಿಸಿದ ಆಯಾ ಜನರ ಸದ್ಭಾವನೆಗಳಿಗೇ ಇದನ್ನು ಪೂರ್ಣವಾಗಿ ಒಪ್ಪಿಸಿಬಿಡತಕ್ಕದ್ದು.

ವಿಶೇಷವಾಗಿ ಬಿರ್ಲಾಭವನದ ಸಂಬಂಧದಲ್ಲಿ ಹೇಳಬೇಕಾದರೆ, ಗಾಂಧೀಜಿಯವರ ಬಗ್ಗೆ ಇದ್ದ ಆದರ ಮತ್ತು ಸ್ನೇಹಗಳಿಗೆ ಸರಿಹೋಗುವ ರೀತಿಯಲ್ಲಿ ಏನಾದರೂ ಮಾಡಬೇಕೆಂದು ಅದರ ಒಡೆಯರು ಯಾವಾಗಲೂ ಬಯಸಿದ್ದುಂಟೆಂಬುದು ನನಗೆ ಗೊತ್ತಿದೆ. ಆದರೆ ಅವರಿಗೆ ಆ ಬಗೆಯ ಸಂಧಿಯನ್ನೊದವಿಸದೆ ಒತ್ತಾಯದಿಂದ ಅವರಮನಸ್ಸಿಗೆ ಹತ್ತುವಂತಹ ಯೋಜನೆ ಮಾಡಿದ್ದರಿಂದ ಅವರಿಗೆ ಅದರಿಂದ ನೋವಾಯಿತು. ನಮ್ಮ ಅನೇಕ ಮುಖಂಡರು ಬಿರ್ಲಾಭವನದಲ್ಲಿ ಅತಿಥಿಗಳಾಗಿ ಉಳಿದುಕೊಂಡದ್ದುಂಟು. ಅವರೊಡನೆ ಶ್ರೀ ಜಿ. ಡಿ. ಬಿರ್ಲಾ ಇವರ ನಿಕಟ ಪರಿಚಯವಿದೆ. ವಿವಿಧ ರಾಷ್ಟ್ರೀಯ ಮತ್ತು ಇತಿಹಾಸ ಪ್ರಸಿದ್ಧವಾದ ಘಟನೆಗಳ ರಂಗಭೂಮಿಯೂ ಅದಾಗಿದೆ. ಆದುದರಿಂದ ಅದರೊಡೆಯರಿಗೆ ಅದೊಂದು ಬಗೆಯ ಪವಿತ್ರ ಸ್ಮಾರಕದ ಮತ್ತು ಶಾಶ್ವತ ಸ್ಫೂರ್ತಿ ಮತ್ತು ಶಾಂತಿಯ ಸಾಧನವಾಗಿ ಪರಿಣಮಿಸಿದೆ. ಹೀಗಿದ್ದರೂ ಕಳೆದ ಮೇ ತಿಂಗಳಷ್ಟು ಹಿಂದೆಯೆ ಅವರು ತಮ್ಮ ಅರಮನೆಯಂಥ ಭವ್ಯ ಭವನವನ್ನು ನಮ್ಮ ಮುಖ್ಯ ಮಂತ್ರಿಗಳ ವಶಕ್ಕೊಪ್ಪಿಸಲು ಸಿದ್ಧರಾಗಿ ಅವರ ಮನಸ್ಸಿಗೆ ಬಂದಂತೆ ಅದರ ಉಪಯೋಗ ಮಾಡಲು ಬಿನ್ನವಿಸಿಕೊಂಡದ್ದುಂಟು. ಆದರೆ ಪೂರ್ಣವಾಗಿ ವಿಚಾರ ಮಾಡಿದ ನಂತರವೆ ಪಂಡಿತಜಿಯವರು ತಮ್ಮ ಸಹಕಾರಿಗಳೊಡನೆ ವಿಚಾರವಿನಿಮಯ ಮಾಡಿ ಆ ಭವನವು ಅದರ ಒಡೆಯರ ವಶದಲ್ಲಿಯೆ ಇರಬೇಕೆಂದೂ ಗಾಂಧೀಜಿ ಯಾವ ಭಾಗದಲ್ಲಿ ತಮ್ಮ ಪ್ರಾರ್ಥನೆಯನ್ನು ನಡೆಸುತಿದ್ದರೊ ಮತ್ತು ಎಲ್ಲಿ ಅವರು ಮರಣ ಹೊಂದಿ ಮಲಗಿದರೂ ಅದಿಷ್ಟು ಸ್ಥಳವನ್ನು ಮಾತ್ರ ಸಾರ್ವಜನಿಕರಿಗೆ ಮುಕ್ತದ್ವಾರವಿಡಬೇಕೆಂದು ನಿರ್ಧರಿಸಿದರು. ಅಂದಿನಿಂದ ಹಾಗೆ ಮಾಡಲಾಗಿದೆ. ಆದರೆ ಅವರೆ ಮುಂದಾಗಿ ತಮಗೆ ಉಚಿತವೆನಿಸಿದ ಕಾಲದಲ್ಲಿ ಆ ಕಾರ್ಯವನ್ನು ಮಾಡಿದ್ದರೆ ಇದಕ್ಕೂ ಹೆಚ್ಚು ಒಳಿತಾಗುತಿದ್ದಿತು. ಕಾಣಿಕೆಯನ್ನು ನಮಗೆ ಬರಬೇಕಾದಸಾಲದರೂಪದಲ್ಲಿ ಬೇಡುವ ಚಟ ನಮಗೆ ಬಿದ್ದಿದೆ. ಅದು ಶುದ್ಧ ತಪ್ಪು. ಅದರಿಂದ ಅದರ ಮಹತ್ವವೆಲ್ಲ ಮಾಯವಾಗಿ ಬಿಡುವದು.

ಗಾಂಧೀಜಿ ಇತಿಹಾಸ ಪ್ರಸಿದ್ಧಗೊಳಿಸಿದ ಇನ್ನೂ ಹಲವು ಸ್ಥಾನಗಳಿವೆ. ಅವುಗಳಲ್ಲಿ ಕೆಲವನ್ನು ನಿರ್ದೇಶಿಸಬಹುದಾಗಿದೆ. ಹೊಸದಿಲ್ಲಿಯ ರೀಡಿಂಗರೋಡಿನಲ್ಲಿ ಇರುವ ಭಂಗೀನಿವಾಸ, ಅಲಹಾಬಾದದಲ್ಲಿಯ ಸ್ವರಾಜ್ಯಭವನ; ೧೯೩೪ರಲ್ಲಿ ಹಿಂದು ಮುಸಲ್ಮಾನ ಐಕ್ಯಕ್ಕಾಗಿ ಗಾಂಧೀಜಿ ೨೧ ದಿನಗಳ ಉಪವಾಸವನ್ನು ಪ್ರಾರಂಭಿಸಿದ ಮೌಲಾನಾ ಮಹಮ್ಮದ ಅಲ್ಲಿಯವರ ಮನೆ, ಗಾಂಧಿ ಆಯರ್ವಿನ್ ಒಡಂಬಡಿಕೆಗೆ ಸಹಿ ಮಾಡುವಾಗ ಗಾಂಧೀಜಿ ಇದ್ದ ಡಾಕ್ಟರ ಅನಸಾರಿಯವರ ಮನೆ, ಪೈಗಂಬರವಾಸಿ ಮೌಲಾನಾ ಅಬ್ದುಲ್ ಬಾರಿಯವರ ಅತಿಥಿಗಳಾಗಿ ಅವರು ಲಖನೌದಲ್ಲಿ ಇದ್ದ ಫಿರಂಗಿಮಹಾಲು, ಪುಣೆಯಲ್ಲಿಯ ಪರ್ಣಕುಟಿ ಮತ್ತು ಉಲ್ಲೇಖಿಸಲು ಬಾರದಷ್ಟು ಇನ್ನುಳಿದ ಇಂಥ ಅನೇಕ ಸ್ಥಳಗಳು ಇರುವವು. ಆಯಲ್ಲ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಅವನ್ನು ಒಪ್ಪಿಸಿ ಕೊಡಬೇಕೆಂದು ಈಗ ಕೇಳಿಕೊಳ್ಳಬೇಕೆ? ನಮ್ಮ ಕೃತಜ್ಞತೆಯ ಮಾದರಿಯಿದೆಯೋ? ಈ ಸಂಬಂಧದಲ್ಲಿ ಎಲ್ಲಿಯ ವರೆಗೆ ನಿಲ್ಲತಕ್ಕದ್ದು? ತಮ್ಮ ಕೂಡ ಸ್ನೇಹ ಸಂಬಂಧ ಬೆಳೆಸುವದರ ಪರಿಣಾಮ ಇಂತು ಆಗುವದೆಂದು ಗಾಂಧೀಜಿಗೆ ತಿಳಿದಿದ್ದರೆ ಅವರು ಯಾವಾಗಲೂ ಉಲ್ಲೇಖಿಸುತಿದ್ದ ಖಲೀಫ ಉಮರರನ್ನು ನಿಶ್ಚಯವಾಗಿ ಅನುಸರಿಸುತಿದ್ದರು. ಕಾನ್‌ಸ್ಟ್ಯಾಂಟನೋಪಲ್‌ದ ಕ್ರಿಶ್ಚನರು ತಮ್ಮ ಚರ್ಚಗೆಬಂದುಪ್ರಾರ್ಥನೆ ಮಾಡಿರೆಂದುಕೇಳಿಕೊಂಡಾಗ ಖಲೀಫರು ಅದಕ್ಕೊಪ್ಪಲಿಲ್ಲ. ಅಲ್ಲಿಗೆ ಹೋಗಿ ತಾವು ಪ್ರಾರ್ಥನೆ ಸಲ್ಲಿಸಿದ್ದಾದರೆ ತಮ್ಮ ಅನುಯಾಯಿಗಳು ಮುಂದ ಎಂದಾದರೊಂದು ದಿನ ಅದು ತಮ್ಮ ಮಸೀದೆಯೆಂದು ಪ್ರತಿಪಾದಿಸಬಹುದು ಎಂದು ತಮ್ಮ ನಿರಾಕರಣೆಗೆ ಖಲೀಫರು ಕಾರಣ ಕೊಟ್ಟದ್ದುಂಟು.

ಗಾಂಧೀಜಿಯ ಅವಶೇಷ ಸಂರಕ್ಷಕ ಸಮಿತಿಯೊಂದನ್ನು ನಾವು ಸಂಸ್ಥಾಪಿಸಿದ್ದೇವೆ. ಗಾಂಧೀಜಿಗೆ ಯಾರು ಮಿತ್ರರಾಗಿದ್ದರೊ ಮತ್ತು ಗಾಂಧೀಜಿ ಯಾರನ್ನು ಪ್ರೀತಿಸುತಿದ್ದರೊ ಅಂಥವರ ಭಾವನೆಗಳಿಗೆ ಆಘಾತವುಂಟುಮಾಡುವ ಸಾಧನವುಳ್ಳ ಸಮಿತಿಯಾಗತಕ್ಕದ್ದೋ? ಛೇ, ಎಂದಿಗೂ ಆಗಬಾರದು; ಇಂಥ ಯಾವದೆ ಅವಿವೇಕದ ಬೇಡಿಕೆಗಳನ್ನು ಪ್ರತೀಕರಿಸಿ ಗಾಂಧೀಜಿ ತಮ್ಮ ಜೀವನದಲ್ಲೆಲ್ಲ ತೋರಿಸಿದ ಉಚ್ಚ ಆಚಾರ ವಿಚಾರಗಳ ಅತ್ಯಂತ ಸ್ಫೂರ್ತಿಪ್ರದವಾದ ಪವಿತ್ರ ಸ್ಮಾರಕವನ್ನು ರಕ್ಷಿಸಲು ಸಹಾಯ ಮಾಡುವದು ಕರ್ತವ್ಯವಾಗಿದೆ.

ಉದಾಹರಣಾರ್ಥವಾಗಿ ಭಂಗೀ ನಿವಾಸದ ಸ್ಮಾರಕವೆಂದರೆ ಅದರ ಸುತ್ತಮುತ್ತಲಿನ ಪ್ರದೇಶವನ್ನೆಲ್ಲ ಅಂದಗೊಳಿಸಿ ಸಾಮಾನ್ಯವಾದ ಸ್ವಚ್ಛತೆ, ಆರೋಗ್ಯ, ನೀರಿನ ಪೂರೈಕೆ ಮತ್ತು ಗಾಂಧೀಜಿ ಯಾವ ಕನಸನ್ನು ಕಂಡು ಅಲ್ಲಿ ಬಂದು ಇರಹತ್ತಿದರೊ ಅದಕ್ಕೆ ಸರಿಹೋಗುವ ರೀತಿಯಲ್ಲಿ ಇತರ ಸುಖ ಸೌಕರ್ಯಗಳು ಸಿಕ್ಕುವಂತೆ ಮಾಡುವದಾಗಿದೆ. ಅವರು ಹೀಗೆ ಹೇಳಿದ್ದುಂಟು–

"ಹರಿಜನ ವಸತಿಗಳಿಗೆ ಹೋಗಿ ಪ್ರತ್ಯಕ್ಷವಾಗಿ ಅಲ್ಲಿ ವಾಸಿಸುವ ನಿರ್ಧಾರವನ್ನು ನಾನು ಮಾಡಿದ್ದೇನೆ. ಆದರೆ ಅಲ್ಲಿ ಹೋಗಿ ಇರಹತ್ತಿದ ಮಾತ್ರಕ್ಕೆ ಹರಿಜನರ ಜೀವನಕ್ರಮವನ್ನು ನಾನು ನಡೆಸಿದಂತಾಯಿತೆಂಬ ಭ್ರಮೆ ನನಗಿಲ್ಲ. ಅಲ್ಲಿ ನಾನು ವಾಸಮಾಡಹತ್ತುವದೆಂದರೆ ಆ ದಿಸೆಯಲ್ಲಿ ಮೊದಲ ಹೆಜ್ಜೆ ಇಟ್ಟಂತೆ. ಆದರೆ ಕೊನೆಯ ಹೆಜ್ಜೆಯಲ್ಲ. ಹರಿಜನ ವಸತಿಗೆ ಹೋಗಿ ಅಲ್ಲಿಯೆ ವಾಸಮಾಡಹತ್ತಿ ಅವರು ಕೊಡುವ ಆಹಾರವನ್ನು ಸೇವಿಸುವ ಸುದಿನವೆಂದು ಬರುವದೊ ಎಂದು ನಾನು ಕಾಯುತ್ತಿದ್ದೇನೆ. ಇಂದು ಅವರಿರುವ ಸ್ಥಿತಿಯು ಸುಸ್ಥಿತಿಯಲ್ಲಿ ಇರುವ ಮನುಷ್ಯನು ಒಂದು ದಿನ ಕೂಡ ಇರಲು ಅಸಹ್ಯವಾದುದಾಗಿದೆ. ಹರಿಜನ ವಸತಿಯಲ್ಲಿಯ ಪರಿಸ್ಥಿತಿ ಸುಧಾರಿಸಲ್ಪಟ್ಟು ಶುದ್ಧ ಹವೆ ಸ್ವಚ್ಛತೆ ಮೊದಲಾದವುಗಳು ದೊರೆತು ಈ ನನ್ನಂತಹ ಮನುಷ್ಯನು ಕೂಡ ಯಾವದೇ ಬಗೆಯ ಸಂಕೋಚವಿಲ್ಲದೆ ಅಲ್ಲಿ ಇರುವಂತಾಗಲಿ ಎಂದು ನಾನು ಆಸಿಸುತ್ತೇನೆ"

(ಹರಿಜನ ಎಪ್ರಿಲ ೧೭ ೧೯೪೯)

ಗಾಂಧೀಜಿ ತಮ್ಮ ಈ ಮನದ ದುಗುಡವನ್ನು ಉಸುರಿ ಮೂರು ವರುಷಗಳು ಸಂದಿಹೋದುವು. ಅವರ ಆ ಕನಸು ನನಸಾಗುವ ಕಾಲ ಸಮೀಪಕ್ಕೆ ಬಂದಿದೆಯೋ? ಈ ಮಧ್ಯಂತರದಲ್ಲಿ ಅನೇಕ ಮಹತ್ವದ ಘಟನೆಗಳು ಸಂಭವಿಸಿವೆ. ಸ್ವಾತಂತ್ರ್ಯವೂ ದೊರೆತಿದೆ. ನಮ್ಮ ಪ್ರಿಯ ಮುಂದಾಳುಗಳೆ ಇಂದು ಅಧಿಕಾರಸ್ಥಾನದಲ್ಲಿ ಇರುವರು. ಇಡೀ ಜಗತ್ತೇ ಬದಲಾವಣೆ ಹೊಂದಿದೆ. ಇಷ್ಟೆಲ್ಲ ಬದಲಾವಣೆಯಾಗಿದ್ದರೂ ಹಿಂದೂ ಧರ್ಮದಲ್ಲಿ ಕಲಂಕದಂತಿದ್ದ ಹರಿಜನರ ವಸತಿಯಲ್ಲಿದ್ದ ಹೊಲಸು ಅಸ್ವಚ್ಛತೆ ಹೋಗಿ ಮಾನವ ಜೀವನಕ್ಕೆ ಅವಶ್ಯವಾಗಿರುವ ಸುಖ ಸೌಕರ್ಯಗಳು ಮಾತ್ರ ಅವರಿಗೆ ಇನ್ನೂ ದೊರೆತಿಲ್ಲ. ಅದರಲ್ಲಿ ಯಾವದೇ ಬಗೆಯ ಬದಲಾವಣೆಗಳಾಗಿಲ್ಲ. ಅವರ ಆ ಬಯಕೆಗಳನ್ನು ಈಡೇರಿಸಲು ನಾವೇನು ಮಾಡಿರುವೆವು? ಭಾವನಾತ್ಮಕವಾಗಿರುವ ನಮ್ಮ ಜನತೆ ಏನು ಮಾಡಿದೆ? ಜನರು ಅವರಲ್ಲಿ ಸೇರಿಕೊಂಡು ಪರೋಪಕಾರಿಗಳಾಗುವಂತೆ ಗಾಂಧೀಜಿ ಬಯಸಿದ್ದರು. ಎಷ್ಟು ಜನರು ಹಾಗೆ ಮಾಡಿರುವರು? ತನಗೇನೂ ಇದು ಸಂಬಂಧಿಸಿದ್ದಲ್ಲ ಎಂಬ ಸುಲಭವಾದ ನೆವಗಳನ್ನು ಮುಂದೆ ಮಾಡಿ ಸಮಾಧಾನ ಹಚ್ಚಿಕೊಳ್ಳುವದು ಮನುಷ್ಯನ ಸ್ವಭಾವವಾಗಿದೆ. ಗಾಂಧೀಜಿಯ ಸ್ಮಾರಕವನ್ನು ಮಾಡುವ ಮಾರ್ಗವಿದಲ್ಲ. ಗಾಂಧೀಜಿ ಇಟ್ಟುಕೊಂಡ ಮತ್ತು ಪರಿಶ್ರಮಿಸಿದ ಧ್ಯೇಯ ಧೋರಣೆಗಳ ಬಗ್ಗೆ ನಾವಿಡುವ ಈ ವಿಶಿಷ್ಟ ಹೆಜ್ಜೆ ನಮ್ಮನ್ನು ಉದ್ರೇಕಗೊಳಿಸಿ ಕಾರ್ಯಾಸಕ್ತರನ್ನಾಗಿ ಮಾಡುವದೊ ಇಲ್ಲವೆ ಎರಡನೆಯವರಿಗೆ ಹಾನಿ ಮಾಡಿ ಅದರಿಂದ ಕೇವಲ ನಮ್ಮಲ್ಲಿ ಸದ್ಗುಣಗಳ ಆಭಾಸವುಂಟಾಗುವುದೊ ಎಂಬುದೆ ಮೊದಲನೆಯ ಒರೆಗಲ್ಲು. ಗಾಂಧೀಜಿಯವರಸ್ಮಾರಕವೆಂದರೆ ಕನಿಷ್ಠ ರಾಜಧಾನಿಯ ನಗರದಲ್ಲಿ ಯಾದರೂ ಒಂದು ಪೈ ವೆಚ್ಚದ ಬೇರೆ ಯಾವದೇ ಯೋಜನೆಯನ್ನು ಕೈಕೊಳ್ಳುವ ಮೊದಲು ಭಂಗಿ ನಿವಾಸದಲ್ಲಿಯ ಹರಿಜನ ವಸತಿಗಳನ್ನು ಮತ್ತು ಇತರ ಸ್ಥಳಗಳಲ್ಲಿಯ ಹರಿಜನ ವಸತಿಗಳನ್ನು ಸ್ವಚ್ಛಗೊಳಿಸಿ ಗಾಂಧೀಜಿ ಆಸಿಸಿದಂತೆ ಅಲ್ಲಿಯ ನಿವಾಸಿಗಳಿಗೆ ಸುಖ ಸೌಕರ್ಯಗಳು ದೊರೆಯುವಂತೆ ಎಲ್ಲ ಬಗೆಯ ಅನುಕೂಲತೆಗಳನ್ನು ಮಾಡಿ ಕೊಡುವದಾಗಿದೆ.

ದಿಲ್ಲಿ ೨೩-೪-೪೯ ಪ್ಯಾರೇಲಾಲ

ಹಿಂದೀ ಕೃಷಿಸಂಶೋಧನ ಸಂಸ್ಥೆ ಹೊಸದಾಗಿ ತಯಾರಿಸಿದ ರೆಂಟೆ— ಕೇಂದ್ರ ಸರಕಾರದ ಕೃಷಿ ಮಂತ್ರ ಶಾಖೆಯ ಸಂಶೋಧನ ಸಂಸ್ಥೆ ಈಗ ಸುಧಾರಿಸಿದ ರೆಂಟೆಯ ಮಾದರಿಯನ್ನು ನಿರ್ಮಿಸಿದೆ. ಈ ರೆಂಟೆ ಎರಡು ನೇಗಿಲು ಕುಳಗಳಿವೆ. ಈಗಿರುವ ನೇಗಿಲಿಗಿಂತ ಇದು ನೂರಕ್ಕೆ ೫೦ ರಷ್ಟು ಹೆಚ್ಚು ತೂಕವಿದೆ. ಈ ಹೊಸ ರೆಂಟೆಯಿಂದ ಹಳೆಯದರ ಎರಡುಪಟ್ಟು ಕೆಲಸವಾಗುವುದಲ್ಲದೆ ಉಳಲು ಅದಕ್ಕಿಂತ ಕಡಿಮೆ ಶ್ರಮ ಸಾಕಾಗುವುದು.

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೫

ತಾತಾ ಸ್ಟೀಲವೊಂದನ್ನು ಬಿಟ್ಟರೆ ಉಳಿದ ಸ್ಟಾಕುಗಳು ಏರಿಕೆಯಲ್ಲಿ ಇದ್ದವು.

ಕೋಹಿನೂರು	೨೮೨-೮-೦
ಮುಂಬಯಿ ಡಾಯಿಂಗ್	೯೫೩-೧೨-೦
ಸ್ವದೇಶಿ	೨೯೩-೮-೦
ಗೋಕಾಕ	೨೭೦-೮-೦
ಸೆಂಚುರಿ	೨೭೧-೪-೦
ಸಿಂಪ್ಲೆಕ್ಸ	೧೭೫-೦-೦
ಟಾಟಾ ಸ್ಟೀಲ ಡೆಫರ್ಡ	೧೩೯೩-೦-೦
ಇಂಡಿಯನ್ ಆಯರ್ನ	೨೨-೯-೦
ಬೇಲಾಪುರ ಸಕ್ಕರೆ	೧೯೪-೮-೦
ಸೆಂಟ್ರಲ ಬ್ಯಾಂಕ	೮೪-೮-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೮೦೬-೪-೦
ಬ್ಯಾಂಕ ಆಫ್ ಇಂಡಿಯಾ	೧೮೫-೩-೦

ಲೇವುದಾರರಿಗೆ ಹಣಕೊಡಲಾಗದುದರಿಂದ ಇಂಡಿಯಾ-ಆಫ್ರಿಕ ಎಕ್ಸಚೇಂಜ್ ಬ್ಯಾಂಕು ಮುಚ್ಚಲ್ಪಟ್ಟದೆ.

ಚಿನ್ನ ಬೆಳ್ಳಿ

ಈ ವಾರ ಬೆಲೆಗಳು ತುಸು ಏರಿವೆ.

ತಯಾರಿ ಚಿನ್ನ	೧೧೫-೪-೦
ವಾಯದಾ ,,	೧೧೪-೪-೦
ತಯಾರಿ ಬೆಳ್ಳಿ	೧೮೦-೧೫-೦
ವಾಯದಾ ,,	೧೮೧-೬-೦
ಸಾವರಿನ	೭೪-೦-೦

ಅರಳೆ

ಅರಳೆಯ ಅನಧಿಕೃತ ದರಗಳು ಹೀಗಿದ್ದವು.

ಮೇ	೬೨೭-೦-೦
ಜುಲೈ	೬೨೪-೦-೦
ಸೆಪ್ಟೆಂಬರ	೬೨೩-೦-೦

ಎಣ್ಣೆಕಾಳು

ಶೇಂಗಾ	೧೮೩-೨-೦
ಅಗಸೆ (ತಯಾರಿ)	೩೧-೦-೦
,, ವಾಯದಾ	೩೦-೮-೦
,, ಎಣ್ಣೆ	೧೯-೨-೦

ಶಿವಮೊಗ್ಗ

ತಾ. ೨೮

ದೇಶಾವರ ನಂ. ೧ (ಮಣಕ್ಕೆ)	೩೧-೩೨
,, ೨	೨೮-೩೦
,, ೩	೨೪-೨೭
ರಾಜಾ ಅಲವು	೨೮-೨೯
ತೊರಸಾಲು	೨೨-೨೬
ಬೆಟ್ಟವಂತಿ	೧೮-೧೮
ಬೆಟ್ಟೆ	೧೬-೧೭

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

ತಾ. ೫

ಜ. ಹೊಸ ಹತ್ತಿ (ನಗಕ್ಕೆ)		೫೦೦-೫೨೫
ಅಪ್ಲಂಡ ಹತ್ತಿ		೪೯೦-೫೨೦
ಜ. ಅರಳಿ		೩೨೫-೩೩೫
ಡಬಲ್ ರೋಲ್ ,,	,,	೩೦೫-೩೧೫
ಕುಸುಬಿ (ಬ. ಮಣಕ್ಕೆ)	೧೫.೪.೬	೧೫-೭-೬
ಅಗಸಿ	(ಚೀಲಕ್ಕೆ) —	೪೨-೧೦-೮
ಉಡಲ	,,	೩೭-೧೪-೯
ಜ. ಹೆಸರು	,, ೪೨-೧೦-೮	೪೬-೮-೦
ಕರಿ ಎಳ್ಳು	,,	೬೪-೬೬
ಬಿಳಿ ಎಳ್ಳು	,,	೭೩
ಕಡಲೆ	,,	೫೬-೫೮
ಜ. ತೊಗರಿ	,,	೩೦-೩೪
ಹುರಳಿ	,,	೩೫-೩೬
ಕೆಂ. ಅಲಸಂದಿ	,,	೫೧
ಬಿ. ಅಲಸಂದಿ	,,	೫೬
ಶೇಂಗಾ (ಹೇರು)		೪೮-೫೦
ಶೇಂಗಾ ಕಾಳು		೬೮-೬೯

(೧೩ ನೇ ಪುಟದಿಂದ)

ಪತ್ರಿಕಾವ್ಯವಸಾಯಿಗಳೂ ಶೀಘ್ರಲಿಪಿಕಾರರೂ ಹಸ್ತಮುದ್ರಕರೂ ಭಾರತದಲ್ಲೆಲ್ಲ ಹರಡಿಕೊಂಡಿದ್ದಾರೆ. ಅವರು ಹಿಂದುಸ್ತಾನಿಯ ಮೂಲಕ ಕೂಡ ಹಾಗೇ ಮಾಡುವರು.

ರಾಜಕೀಯ ಅಧಿಕಾರನ್ಯಾಸದಿಂದ ಇಂಗ್ಲೀಷು ನಮ್ಮ ಮೇಲೆ ಹೇರಿಕೊಂಡಿತು. ಅದನ್ನು ವಿಧೇಯತೆಯಿಂದ ಸ್ವೀಕರಿಸಲಾಯಿತು ಆದರೂ ಆ ಭಾಷೆಯಲ್ಲಿ ದಕ್ಷಿಣ ಭಾರತೀಯರು ಬಹಳ ಪ್ರಗತಿಯನ್ನು ಸಾಧಿಸಿದರು. ಹಿಂದುಸ್ತಾನಿಯಲ್ಲಿ ಅವರು ಸಾಧಿಸದ ಪ್ರಗತಿ ಉಳಿದೀತೇ? ಅವರು ಅದರ ಬಗ್ಗೆ ತಳೆದಿರುವ ಹಗೆತನವನ್ನು ಬಿಟ್ಟುಬಿಡಬೇಕು.

ನಮಗೊಂದು ಸಾರ್ವಭಾಷೆ ಬೇಕಾಗಿರುವಾಗ, ಅದು ಇಂಗ್ಲೀಷಾಗಲಾರದ ಕಾರಣ, ಹಿಂದುಸ್ತಾನಿಯೊಂದೇ ಸಾಧ್ಯವಾದ ಅಭಿಪ್ರಾಯ ವಾಹಕ. ಭಾರತದ ಸರ್ವೋದಯಕ್ಕಾಗಿ ಅದು ಅನಿವಾರ್ಯವೆಂದು ಸ್ವೀಕರಿಸಲ್ಪಡಲಿ.

ವರ್ಧಾ, ೨೭.೪.೪೯ ಕಿ. ಘ. ಮಶ್ರುವಾಲಾ

ಕರ್ನಾಟಕದಲ್ಲಿ

ಧಾರವಾಡ

ಹೈದರಾಬಾದ ಸಮಸ್ಯೆ ಮುಗಿದ ಮಾತ್ರಕ್ಕೆ ಗ್ರಾಮರಕ್ಷಕರ ಕೆಲಸ ಮುಗಿದಂತಾಗಲಿಲ್ಲ. ನಮ್ಮ ರಾಷ್ಟ್ರವು ಸಾರ್ವತ್ರಿಕ ಪ್ರಗತಿಹೊಂದಿ ಬಲಿಷ್ಠವಾಗಬೇಕಾಗಿರುವದರಿಂದ ಆ ಮಹಾ ಕಾರ್ಯದಲ್ಲಿ ಗ್ರಾಮರಕ್ಷಕರ ಕಾರ್ಯ ಅತ್ಯಂತ ಮಹತ್ವದ್ದಾಗಿದೆಯೆಂದು ಹಿಂದುಸ್ಥಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿಗಳಾದ ಮಾನ್ಯ ದಿವಾಕರ ರಂಗರಾಯರು ೨ ನೇ ತಾರೀಕು ಗದುಗಿನಲ್ಲಿ ಹಾಯಸ್ಕೂಲ ಪಟಾಂಗಣದಲ್ಲಿ ಧಾರವಾಡ ಜಿಲ್ಲಾ ಗ್ರಾಮರಕ್ಷಕರನ್ನುದ್ದೇಶಿಸಿ ಮಾತಾಡುತ್ತ ಹೇಳಿದರು.

ಶ್ರೀ ಶಾಲಿ ರಾಮಚಂದ್ರರಾಯರು ಹೊಸದಾಗಿ ಬರೆದ ಜಯಗುರುದೇವ ಎಂಬ ರಾಜಕೀಯ ಹಿನ್ನೆಲೆಯುಳ್ಳ ನೀಳ್ಗತೆಯ ಪ್ರಕಾಶನ ಸಮಾರಂಭವು ಶ್ರೀ ರಾ. ಸ್ವಾ. ಪಂಚಮುಖಿಯವರ ಅಧ್ಯಕ್ಷತೆಯಲ್ಲಿ ಕಳೆದ ರವಿವಾರ ೧ ನೇ ತಾರೀಕು ಜರುಗಿತು. ಶ್ರೀಗಳಾದ ಶಂ. ಬಾ. ಜೋಶಿ ವಿ. ಬಿ. ನಾಯಕ ಮತ್ತು ಬಿ. ಎಚ್. ಶ್ರೀಧರರು ಕತೆಗಾರರು ಮತ್ತು ಕತೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿದರು.

ಧಾರವಾಡದ ಕೆ. ಈ. ಬೋರ್ಡ್ಸ್ ಕಾಲೇಜಿಗೆ ಡಾ. ಎಸ್. ಜಿ. ಜೋಶಿ ಮುಂಬಯಿ ೧೦೦೦೦, ಡಾ. ಜಿ. ಎಸ್. ವಾಳವೇಕರ ಮುಂಬಯಿ ೧೦೦೦೦, ಆರ್. ವಿ. ಶಿರೂರ ಹುಬ್ಬಳ್ಳಿ ೧೦೦೦೦ ಮತ್ತು ಮುದಭಾವಿ ವಕೀಲ ಮುಂಬಯಿ ೫೦೦ ರೂಪಾಯಿ ಹೀಗೆ ಕಾಣಿಕೆಯನ್ನು ಕೊಟ್ಟಿದ್ದಾರೆ.

ಧಾರವಾಡದ ಕೆ. ಈ. ಬೋರ್ಡ್ಸ್ ಕಾಲೇಜಿಗೆ ಇದೇ ಜೂನದಿಂದ ಎಫ್‌ವಾಯ ಸಾಯಿನ್ಸ ಮತ್ತು ಇಂಟರ ಸಾಯಿನ್ಸ ವರ್ಗಗಳನ್ನು ತೆರೆಯಲು ಮತ್ತು ಆರ್ಟ್ಸ ವಿಭಾಗಗಳನ್ನು ಮುಂಬರಿಸಲು ಮುಂಬಯಿ ವಿಶ್ವವಿದ್ಯಾಲಯದವರು ಮನ್ನಣೆಯಿತ್ತಿರುವರೆಂದು ಅಧಿಕೃತವಾಗಿ ತಿಳಿಯುತ್ತದೆ.

ಹಾವೇರಿಯ ನಗರ ಸಭಾಭವನದ ಉದ್ಘಾಟನ ಸಮಾರಂಭ ಉಪಮಂತ್ರಿ ಶ್ರೀ ಕಲ್ಲನಗೌಡ ಪಾಟೀಲರಿಂದ ಬಸವಜಯಂತಿಯ ದಿನ ಜರುಗಿತು ನಗರಸಭೆಯು ಕೊಟ್ಟ ಮಾನಪತ್ರಕ್ಕೆ ಶ್ರೀ ಪಾಟೀಲರು ಸ್ಪಷ್ಟಾಭಿಪ್ರಾಯಗಳ ಸೂಚನೆಗಳನ್ನು ಕೊಟ್ಟರು.

ಪರಶುರಾಮ ಬಾಬೂ ಕಲಾಲ ಎಂಬವನು ಲಾಯಸೆನ್ಸ ಇಲ್ಲದೆ ಶಿಂದಿಯನ್ನು ಮಾರಿದ್ದರಿಂದ ಹುಬ್ಬಳ್ಳಿಯ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಅವನಿಗೆ ೬ ತಿಂಗಳ ಶಿಕ್ಷೆ ವಿಧಿಸಿದರು.

ಬೆಳಗಾವಿ

ಮಿರಜೆಯ ಶ್ರೀ ಎಂ. ಎಚ್. ಬುಕ್‌ಸೆಲರ ಮತ್ತು ಮಾಲೇಗಾಂವದ ಭಾವೂ ನಿದೋಣಿ ಮತ್ತು ಭೂಪಾಲ ಧಾ ಪುಜೆ ಇವರು ಸಾರ್ವಜನಿಕ ಸುರಕ್ಷಿತತೆಯ ಕಾಯದೆಯನ್ವಯ ಬಂಧಿಸಲ್ಪಟ್ಟಿದ್ದಾರೆ.

ಪಾನನಿರೋಧಪ್ರಚಾರಕ್ಕಾಗಿ ಜಾಹೀರ ಗಾಯನ ಭಾವಗೀತೆ ಲಾವಣಿ ಸಣ್ಣಕತೆ ಅಭಿನಯಗೀತೆ ಮತ್ತು ಏಕಾಂಕ ನಾಟಕಗಳ ಸ್ಪರ್ಧೆಯು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಏರ್ಪಡಿಸಲಾಗಿದೆ. ಉತ್ತಮ ಸಾಹಿತಿಗಳಿಗೆ ಬಹುಮಾನ ಕೊಡಲಾಗುವದು. ಮೇ ೨೫ ರೊಳಗಾಗಿ ಬೆಳಗಾವಿ ಡಿಸ್ಟ್ರಿಕ್ಟ ಪ್ರಾಹಿಬಿಶನ ಆಫೀಸರ ಇವರ ಕಡೆಗೆ ಕೃತಿಗಳನ್ನು ಕಳಿಸಬೇಕು.

ಗೋಕಾವಿ ತಾಲೂಕಿನ ಪೂರ್ವಭಾಗದಿಂದ ಶ್ರೀ ನಾರಾಯಣರಾವ ಮುತಾಲಿಕ ದೇಸಾಯಿ ಕೌಜಲಗಿ ಮತ್ತು ರುದ್ರಪ್ಪಾಪರುಶೆಟ್ಟಿ ಕೌಜಲಗಿಯವರು ಆರಿಸಿಬಂದರು ಪಶ್ಚಿಮ ಭಾಗದಿಂದ ಬಸನಗೌಡಾ ವೀರನಗೌಡಾ ಪಾಟೀಲ ಶ್ರೀ ಸದಾಶಿವ ಗುರುಪಯ್ಯ ನಾಗತೀಕಳ ಗುರುಲಿಂಗಪ್ಪಾ ಘೋಡಗೇರಿ ಮತ್ತು ಗುಡ್ಡ ಸಾಹೇಬ ಪಾಂಡಪಾನ ಇವರು ಆರಿಸಿಬಂದರು ಹರಿಜನ ಸ್ಥಳಕ್ಕೆ ಎಲ್. ಡಿ. ಮೆಸ್ತ್ರಿಯವರ ಅವಿರೋಧ ಆರಿಸಿಬಂದರು.

ಬೆಳಗಾವಿ ಮತದಾರ ಸಂಘದಿಂದ ಜಿಲ್ಲಾ ಲೋಕಲ್ ಬೋರ್ಡಿಗೆ ಶ್ರೀ ಮಲಗೌಡಾ ಪಾಟೀಲರು ಆರಿಸಿಬಂದರು. ಇವರಿಗೆ ೨೦೯೪ ಮತಗಳು ಪ್ರತಿಸ್ಪರ್ಧಿಗಳಾದ ಶ್ರೀ ಸಂಗಪ್ಪಾ ಮತ್ತು ಶ್ರೀ ಪಾಳೇಕುಂದ್ರಿಯವರಿಗೆ ಅನುಕ್ರಮವಾಗಿ ೧೨೭೮ ಮತ್ತು ೧೨೯೪ ಮತಗಳು ಬಿದ್ದವು. ಶ್ರೀಮತಿ ನಿಂಬೆವ್ವ ಇವರು ಅವಿರೋಧವಾಗಿ ಹೆಣ್ಣುಮಕ್ಕಳ ಸ್ಥಳಕ್ಕೆ ಆರಿಸಿ ಬಂದರು.

ವಿಜಾಪುರ

ಬಿಜ್ಜರಗಿ ದರೋಡೆ ಖಟ್ಲೆಯ ಆರೋಪಿಗಳಾದ ಶಿತ್ತ್ರಿನ ಹನಮಂತ ಭೀಮಪ್ಪ ಭಾಸ್ಕರ ಇವರಿಗೆ ಗಲ್ಲಿನ ಶಿಕ್ಷೆ ವಿಧಿಸಲಾಯಿತು. ೨ ನೇ ಆರೋಪಿಯಾದ ನಿಡೋಣಿಯ ಗುರುಬಸಪ್ಪ ಹಳದಕೇರಿ ಹಾಗು ೩ ನೇ ಆರೋಪಿ ಹಳ್ಳೂರಿನ ಮಲ್ಲಪ್ಪ ಹೊಸಮನಿ ಇವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ೪-೫-೬ ಮತ್ತು ೭ ನೇ ಆರೋಪಿಗಳು ನಿರ್ದೋಷಿಗಳೆಂದು ಬಿಡುಗಡೆ ಹೊಂದಿದರು. ಜಿಲ್ಲಾ ನ್ಯಾಯಾಧೀಶರು ಹಳ್ಳಿಗರು ಸಂಘಟಿತರಾಗಿ ದರೋಡೆಗಾರರನ್ನೆದುರಿಸಿದ್ದನ್ನು ಬಹಳ ಮಟ್ಟಿಗೆ ಕೊಂಡಾಡಿದ್ದಾರೆ.

ವಿಜಾಪುರ ಜಿಲ್ಹೆಯಲ್ಲಿ ಕೇವಲ ಹದಿನೈದು ದಿನಗಳಲ್ಲಿ ೧೩೬೭೩ ೧೦-೦ ಗಾಂಧೀ ನಿಧಿ ಕೂಡಿದ್ದು ೨೭ ನೇ ತಾರೀಕಿನ ದಿನ ಬಾಬೂ ರಾಜೇಂದ್ರ ಪ್ರಸಾದರು ಬಾಗಲಕೋಟೆಗೆ ಬಂದಾಗ ಅವರಿಗೆ ನಿಧಿಯನ್ನು ಅರ್ಪಿಸಲಾಯಿತು.

ಕಲಕೇರಿ ಗ್ರುಪ್ ಶಿಕ್ಷಕರ ಸಮ್ಮೇಲನ ಮತ್ತು ಶ್ರೀ ಜಗತಿಸಾಹೇಬರಿಗೆ ಬೀಳ್ಕೊಡುವ ಸಮಾರಂಭ ೧೯ ನೇ ತಾರೀಕಿನ ದಿನ ಜಿಲ್ಹಾ ಅಡ್‌ಮಿನಿಸ್ಟ್ರೇಟಿವ್ ಆಫೀಸರರಾದ ಶ್ರೀ ಗುಡಿಸಾಗರ ಇವರ ಹಿರಿತನದಲ್ಲಿ ಜರುಗಿತು. ಸಮಾರಂಭಕ್ಕೆ ಬಂದ ಶಿಕ್ಷಣಾಧಿಕಾರಿಗಳು ಶಿಕ್ಷಣಾಭಿಮಾನಿಗಳು ಉಪಯುಕ್ತ ಭಾಷಣ ಮಾಡಿದ್ದಲ್ಲದೆ ಕೆಲವರು ವಿದ್ಯಾರ್ಥಿ ಶಾಲಾ ಬಾಲಕರಿಗೆ ಧನಸಹಾಯ ಮಾಡಿದರು.

ಬಾಗಲಕೋಟೆಯಲ್ಲಿ ಕಳೆದ ತಿಂಗಳು ೨೭-೨೮ ಕ್ಕೆ ಸೇವಾದಲ ಸಮ್ಮೇಲನವು ಡಾ. ಹರ್ಡೀಕರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಸೇವಾದಲದ ಭವಿತವ್ಯದ ಬಗ್ಗೆ ಕಾರ್ಯಕರ್ತರು ಮನಬಿಚ್ಚಿ ಮಾತಾಡಿದರು. ವಾತಾವರಣ ಸುಧಾರಿಸಿದರೆ ತಾವು ಸೇವಾದಲದ ಕಾರ್ಯವನ್ನು ಕೈಕೊಳ್ಳುವದಾಗಿ ಡಾ ಹರ್ಡೀಕರರು ಆಶ್ವಾಸಿಸಿದರು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಹೆಗಾಗಿ ಮಳೆಗಾಲಕ್ಕಾಗಿ ಬೇಕಾಗಬಹುದಾದ ಒಂದು ಲಕ್ಷ ಚೀಲ ಹತ್ತೀಕಾಳನ್ನು ಹುಬ್ಬಳ್ಳಿಯಿಂದ ತರಿಸಲು ಸಹಕಾರೀ ಸಂಘಗಳಿಗೆ ಇಲ್ಲವೆ ಮಾಮಲೇದಾರರಿಂದ ಪುರಸ್ಕಾರ ಹೊಂದಿದ ವ್ಯಕ್ತಿಗಳಿಗೆ ಅಪ್ಪಣೆ ಕೊಡಬೇಕೆಂದು ಜಿಲ್ಹಾ ಗ್ರಾಮೋದ್ಧಾರಮಂಡಲದಲ್ಲಿ ನಿರ್ಧರಿಸಲಾಯಿತು.

ಉತ್ತರ ಕನ್ನಡ ಜಿಲ್ಹೆಯಲ್ಲಿ ಎಪ್ರಿಲ ೨೨ ರ ವರೆಗೆ ೫೮೫೮೩೦ ಬಂಗಾಲಿ ಮಣಗಳಷ್ಟು ಭತ್ತದ ಖರೀದಿಯಾಗಿದೆಯೆಂದು ಜಿಲ್ಹಾ ಪೂರೈಕೆ ಅಧಿಕಾರಿಗಳು ಸುದ್ದಿಗಾರ ಸಭೆಯಲ್ಲಿ ಹೇಳಿದರು.

ಇಂಪೀರಿಯಲ್ ಬ್ಯಾಂಕಿನವರು ಉತ್ತರ ಕನ್ನಡ ಜಿಲ್ಹೆಗೆ ತಮ್ಮ ಬ್ಯಾಂಕಿನ ಅನುಕೂಲತೆ ನಿರ್ಧರಿಸಿಕೊಡುವದಕ್ಕಾಗಿ ಕಾರವಾರದಲ್ಲಿ ಬ್ಯಾಂಕಿನ ಶಾಖೆಯನ್ನು ತೆರೆಯಲು ಅವಶ್ಯಕ ಅಂಕೆಸಂಖ್ಯೆಗಳನ್ನು ಕಲೆಹಾಕುತಿರುವರು.

ಮಹಾರಾಷ್ಟ್ರ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಹಿರೆಯವರು ಕಾರವಾರದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಮುಂಬಯಿ ಸಹಿತವಾದ ಸಂಯುಕ್ತ ಮಹಾರಾಷ್ಟ್ರಪ್ರಾಂತರಚನೆಯೇ ನಮ್ಮ ಬೇಡಿಕೆಯಾಗಿದೆಂದು ಹೇಳಿದರು. ಸದಾಶಿವಗಡದಲ್ಲಿ ಭಾಷಣಮಾಡುತ್ತ ಕಾರವಾರ, ಹಳ್ಯಾಳ ಮತ್ತು ಸುಪಾಗಳ ಪ್ರಾದೇಶಿಕ ಭಾಷೆಯು ಕನ್ನಡವೆಂದು ಮುಂಬಯಿ ಸರಕಾರದವರು ಸಾರಿದ್ದು ದೊಡ್ಡ ತಪ್ಪು ಎಂದು ಹೇಳಿದರು.

ಶಿರಸಿಯಲ್ಲಿ ಇದೇ ೧೦ ನೇ ತಾರೀಕು ಯಕ್ಷಗಾನ ಸಮ್ಮೇಲನವನ್ನು ಸೇರಿಸಬೇಕೆಂದು ಯಕ್ಷಗಾನ ಪ್ರೇಮಿಗಳು ನಿರ್ಧರಿಸಿದ್ದಾರೆ. ಶ್ರೀ ಚಿತ್ರಗಿ ಗಣೇಶಭಟ್ಟರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದು ಇದಕ್ಕಾಗಿ ಸ್ಥಾಪಿತವಾಗಿದೆ. ಅಧ್ಯಕ್ಷಸ್ಥಾನ ಸ್ವೀಕರಿಸಲು ಮಂಗ್ಳೂರಿನ ಯಕ್ಷಗಾನ ವಿದ್ಯಾವಿಶಾರದ ಶ್ರೀ ಸಿ. ಎಸ್. ಶಾಸ್ತ್ರಿಯವರನ್ನು ಕೇಳಿಕೊಳ್ಳಲಾಗಿದೆ.

ದಕ್ಷಿಣ ಕನ್ನಡ

ಅಖಿಲಭಾರತ ಪೋಸ್ಟಮನ್ ಮತ್ತು ಕೆಳತರಗತಿಯ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ವಾರ್ಷಿಕ ಮಹಾಸಭೆಯು ಮಂಗಳೂರಿನ ರುಜಾರಿಯೋ ಶಾಲೆಯ ವಠಾರದಲ್ಲಿ ದಿನಾಂಕ ೧ ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಭಾಸ್ಕರ ರೈಗಳ ಸ್ವಾಗತ ಭಾಷಣವಾದ ಮೇಲೆ ಶ್ರೀಗಳಾದ ಗಂಗಾಧರದಾಸ್ ಕಲ್ಯಾಣಿ ಡಿ. ಶೆಟ್ಟಿ ಮೊದಲಾದವರ ಭಾಷಣಗಳಾದ ಮೇಲೆ ಅಧ್ಯಕ್ಷರ ಭಾಷಣವಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಂಚೇ ನೌಕರರು ಸಮಾಜಕ್ಕೆಂತಹ ಅವಶ್ಯಕವಾದ ಸೇವೆ ಸಲ್ಲಿಸುವವರೆಂದು ಹೇಳಿದರು. ಬಳಿಕ ಅಂಚೇ ಜವಾನರ ಮತ್ತು ಕೆಳ ನೌಕರರ ಕಷ್ಟ ಸಂಕಷ್ಟಗಳ ವಿಚಾರವಾಗಿ ಹಲವು ನಿರ್ಣಯಗಳಾದವು.

ದಕ್ಷಿಣ ಕನ್ನಡ ಜಿಲ್ಲಾ ಗಾಂಧಿ ಸ್ಮಾರಕ ನಿಧಿ ಸಮಿತಿಯ ಸಭೆಯು ದಿನಾಂಕ ೩೦ ರಂದು ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಲೆಗೆ ಸಿಗಲಿರುವ ಸ್ಮಾರಕ ನಿಧಿಯಂಶವನ್ನು ಕ್ಷಯರೋಗಿಗಳ ಆಸ್ಪತ್ರೆಗಾಗಿ ಉಪಯೋಗಿಸುವದೆಂಬ ನಿರ್ಣಯವಾಗಿ ಅದನ್ನು ಅಭಿಪ್ರಾಯಕ್ಕಾಗಿ ತಾಲೂಕು ಸಮಿತಿಗಳಿಗೆ ಕಳುಹಲಾಗಿದೆ. ದಿನಾಂಕ ೩೦ ರ ವರೆಗೆ ರೂ. ೧,೩೩,೬೮೩-೨-೯ ಗಳ ಸಂಗ್ರಹವಾಗಿದೆ.

ತಮ್ಮ ೮೧ ವಯಸ್ಸಿನ ಮಾತೋಶ್ರೀಯವರ ನಿಧನದ ನಿಮಿತ್ತವಾಗಿ ಭಾರತದ ಪಶ್ಚಿಮ ಕಮಾಂಡಿನ ವೈದ್ಯಕೀಯ ಸೇವೆಗಳ ಡೆಪ್ಯುಟಿ ಡೈರೆಕ್ಟರರಾದ ಮೇಜರ್ ಜನರಲ್ ಬಿ. ರೆ. ಬಾಳಿಗ, O B E; I M S ರವರು ಕಳೆದವಾರ ಬಂದಿದ್ದು ಇನ್ನು ಒಂದು ವಾರದೊಳಗೆ ಮರಳಿ ಹೋಗುವವರಿದ್ದಾರೆ.

ಮೇ ದಿನಾಚರಣೆಯ ನಿಮಿತ್ತವಾಗಿ ಮಂಗಳೂರಲ್ಲಿ ಶಾಂತಿಭಂಗವಾಗಬಹುದೆಂಬ ನಿರೀಕ್ಷೆಯ ಮೇರೆಗೆ ಮಂಗಳೂರು ನಗರದಲ್ಲಿ ದಿನಾಂಕ ೩೦ ರಿಂದ ಒಂದು ವಾರದ ವರೆಗೆ ೧೪೪ ನೇ ಪ್ರಕರಣವು ಸಾರಲ್ಪಟ್ಟಿದೆ.

ಅಖಿಲ ಭಾರತ ಸಮಾಜ ಸೇವಾ ದಿನಾಚರಣೆಯು ದಿನಾಂಕ ೨೪ ರಂದು ಮಂಗಳೂರಲ್ಲಿ ಜರುಗಿತು. ಜಿಲ್ಲಾ ಕಲೆಕ್ಟರರು ಶ್ರೀ ಎಸ್. ಆರ್. ಕೈಲಾಸರು ಅಂದಿನ ಸಭೆಗೆ ಅಧ್ಯಕ್ಷರಾಗಿದ್ದರು. ಶ್ರೀ ಕೆ. ಎಲ್. ಎನ್. ರಾಯರು ಕಳೆದ ಡಿಶಂಬರದಲ್ಲಿ ಮದ್ರಾಸಿನಲ್ಲಿ ಜರಗಿದ ಸಮಾಜ ಸೇವಾ ಪರಿಷತ್ತಿನ ಠರಾವುಗಳನ್ನು ವಿವರಿಸಿದರು. ಸಮಾಜ ಸೇವೆಯ ವಿವಿಧ ವಿಚಾರಗಳ ಮೇಲೆ ಭಾಷಣವಿತ್ತರು.

ದಕ್ಷಿಣ ಕನ್ನಡ ಜಿಲ್ಲಾ ನಿವಿಷ್ಟ ಭಾರತೀಯ ವೈದ್ಯ ಸಂಘದ ವಾರ್ಷಿಕ ಮಹಾಸಭೆಯು ದಿನಾಂಕ ೨೪ ರಂದು ಮಂಗಳೂರಲ್ಲಿ ಶ್ರೀ ಸಿ. ಅರ್ನೇಸ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ಆಯುರ್ವೇದದ ಬಗ್ಗೆ ಮತ್ತು ದೇಶೀಯ ವೈದ್ಯರ ಬಗ್ಗೆ ಸರಕಾರವು ಹೆಚ್ಚಿನ ಪ್ರೋತ್ಸಾಹ ನೀಯುವ ಧೋರಣೆ ವಹಿಸಬೇಕೆನ್ನುವ ಮತ್ತು ಇತರ ಹಲವು ನಿರ್ಣಯಗಳಾದವು. ಮುಂದಿನ ವರ್ಷಕ್ಕೆ ವೈದ್ಯ ಯನ್. ಕೆ. ಶೇಖರನ್ನರು ಅಧ್ಯಕ್ಷರಾಗಿದ್ದಾರೆ.

ಮಂಗಳೂರಲ್ಲಿ ನಿರ್ಮಿಸಲಿರುವ ವಿಮಾನ ನಿಲ್ದಾಣದ ಅಂದಾಜು ಪಟ್ಟಿಯ ಸಿದ್ಧತೆಯಾಗುತ್ತಿರುವುದಾಗಿ ಕೆನರಾ ವಾಣಿಜ್ಯ ಸಂಘದ, ಕೇಳಿಕೆಗೆ ಉತ್ತರ ಬಂದಿದೆಯಾಗಿ ತಿಳಿದು ಬಂದಿದೆ.

ರೆವಿ. ಗೋಳಿ ಕರ್ನಾಟಕ ಸಂಘದ ವಸಂತ ಸಾಹಿತ್ಯೋತ್ಸವವು ದಿನಾಂಕ ೧೯ ರಂದು ಕಟೀಲು ಶಾಲಾವಠಾರದಲ್ಲಿ ಶ್ರೀ. ಕೆ. ಎನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೆ. ಶ್ರೀನಿವಾಸ ಉಡುಪರು ಕೆ. ಆರ್. ಉಡುಪರು ಮತ್ತು ಕೆ ಎನ್ ಉಡುಪರು ಮಾತನಾಡಿದರು. ''ಗಂಡುಗೊಡಲಿ''ಯ ಅಭಿನಯದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಪಾಣೆಮಂಗಳೂರಲ್ಲಿ ಇದೇ ಮೇ ತಿಂಗಳ ೧೦, ೧೧ ಮತ್ತು ೧೨ ರಲ್ಲಿ ಜರಗಲಿರುವ ರಾಜಕೀಯ ಪರಿಷತ್ತಿನ ವ್ಯವಸ್ಥೆಯ ಕುರಿತಾಗಿ ಸಾರ್ವಜನಿಕ ಸಭೆಯೊಂದು ದಿನಾಂಕ ೨೩ ರಂದು ಶ್ರೀ ವಾಸುದೇವ ಪತ್ತುಮುಡಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಬಿ. ಮಾಧವ ಪಡಿಯಾರರನ್ನು ಸ್ವಾಗತಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಬಳ್ಳಾರಿ

ತ್ರಿಮೂರ್ತಿ ಸಮಿತಿಯು ಆಂಧ್ರ ಪ್ರಾಂತಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದನ್ನು ನಿಷೇಧಿಸಿ ಆಂಧ್ರ ಪ್ರಾಂತದೊಡನೆಯೇ ಕರ್ನಾಟಕ ಪ್ರಾಂತದ ರಚನೆಯಾಗಬೇಕೆಂಬ ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಸಂಘದ ಸುಧಾರಣಾ ಸಭೆಯು ಗೊತ್ತುವಳಿ ಸ್ವೀಕರಿಸಿತು.

ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸುವಂತೆ ಉಗ್ರ ಉಪಾಯಗಳನ್ನು ಕೈಕೊಳ್ಳಬೇಕೆಂದು ಮುಂತಾಗಿ ಧ್ಯೇಯವನ್ನಿಟ್ಟುಕೊಂಡ ಕರ್ನಾಟಕ ಏಕೀಕರಣ ಪುರೋಗಾಮಿ ಪಕ್ಷದ ಸ್ಥಾಪನೆ ಬಳ್ಳಾರಿಯಲ್ಲಿ ಆಗಿದ್ದು ಅದರ ಘಟನೆ ಮುಂತಾದ್ದನ್ನು ತಯಾರಿಸಲು ಒಂದು ಸಮಿತಿ ಸ್ಥಾಪಿತವಾಗಿದೆ.

ಹೊಸಪೇಟೆ ಬಳ್ಳಾರಿ ಮತ್ತು ಜಿಲ್ಹೆಯ ಇತರ ಸ್ಥಳಗಳಲ್ಲಿ ಕೂಡಿ ಒಟ್ಟಿಗೆ ೨೯ ಸಾವಿರ ರೂಪಾಯಿಗಳನ್ನು ಗಾಂಧೀ ನಿಧಿಯೆಂದು ಡಾ. ರಾಜೇಂದ್ರ ಬಾಬುಗಳಿಗೆ ಸಮರ್ಪಿಸಲಾಯಿತು.

ಬಳ್ಳಾರಿಯಿಂದ ಕಂಪ್ಲಿಗೆ ಹೊರಟಿದ್ದ ಮೋಟರೊಂದು ಕುಡತಿನಿ ಹತ್ತರ ಅಪಘಾತಕ್ಕೀಡಾಗಿ ಓರ್ವ ಸ್ತ್ರೀಯು ತಕ್ಷಣ ಮೃತಪಟ್ಟಿದ್ದಲ್ಲದೆ ೧೨ ಜನರು ಗಾಯಗೊಂಡರು. ಗಾಯಾಳುವಾಗಿದ್ದ ಪಿ ಡಬ್ಲ್ಯೂ ಡಿ ಎಂಜಿನಿಯರರೊಬ್ಬರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಕ್ಲೀನರ ಡ್ರಾಯವರನನ್ನು ಬಂಧಿಸಿ ಖಟ್ಲೆ ಹಾಕಲಾಗಿದೆ.

ಕನ್ನಡ ಸಂಸ್ಥಾನ

ಅರಸೀಕೆರೆ ತಾಲೂಕು ಶತಕಲ್ ತೊರೆ ಗ್ರಾಮದಲ್ಲಿ ೧೯-೬-೪೮ ನೇ ದಿನ ನಡೆದ ಶ್ರೀ ದೊಡ್ಡೇಗೌಡರ ಕೊಲೆಯ ಪ್ರಕರಣದಲ್ಲಿ ಶ್ರೀ ಸಿದ್ಧನಗೌಡ ಮತ್ತು ಉಳಿದ ೧೬ ಆರೋಪಿಗಳಿಗೆ ತಲಾ ೩ ವರ್ಷ ಸಶ್ರಮ ಶಿಕ್ಷೆ ಮತ್ತು ೩ ಜನರಿಗೆ ೩೦೦ ರೂಪಾಯಿಗಳಂತೆ ಮತ್ತು ೧೪ ಜನರಿಗೆ ತಲಾ ೧೦೦ ರೂ. ಯಂತೆ ದಂಡ ವಿಧಿಸಲಾಯಿತು. ಸೆಶನ್ಸ ಜಡ್ಜರ ತೀರ್ಪಿನ ವಿರುದ್ಧ ಹಾಯಕೋರ್ಟಿಗೆ ಅಪೀಲು ಮಾಡಿದ್ದು ಹಾಯಕೋರ್ಟಿನವರು ಅವರನ್ನು ಜಾಮೀನ ಮೇಲೆ ಬಿಡುಗಡೆಮಾಡಿದ್ದಾರೆ.

(೧೦ ನೆಯ ಪುಟದಿಂದ)

ಲೋಹದ ವೈದ್ಯಕೀಯ ಉಪಯೋಗಗಳನ್ನು ಕಂಡು ಹಿಡಿದ ಕೀರ್ತಿಯು ಈ ವಿದುಷಿಗೆ ಸಲ್ಲುತ್ತದೆ.

ಇದನ್ನು ನೋಡಿದರೆ, ನೊಬೆಲ್ ಶಾಂತಿ ಬಹುಮಾನವನ್ನು ಕೊಡುವುದರಲ್ಲಿ ಹಲವು ಬಗೆಯ ಕೈವಾಡಗಳು ನಡೆಯುವೆಂದು ಊಹಿಸಲು ಅವಕಾಶವಿದೆ. ಇದಕ್ಕೆ ಪೋಷಕವಾಗಿ ಈ ಶಾಂತಿಪಾರಿತೋಷಕವು ಹಲವು ವರ್ಷಗಳಿಂದ ಐರೋಪ್ಯ ರಾಜಕಾರಣಪಟುಗಳಿಗೇ ಹೋಗುತ್ತಿದೆ. ಇದನ್ನು ನೋಡಿದರೆ ನೊಬೆಲ್ ಸಮಿತಿಯವರು ಮಿಕ್ಕ ಬಹುಮಾನ ದಾನದಲ್ಲಿ ಸ್ವಾತಂತ್ರ್ಯ ವಹಿಸಿ ಜಾತಿ, ಧರ್ಮ ವರ್ಣ, ಜನಾಂಗ ಭೇದವಿಲ್ಲದೆ ವರ್ತಿಸಬಹುದಾದರೂ ಶಾಂತಿಬಹುಮಾನದ ಬಗ್ಗೆ ಅಷ್ಟು ಸ್ವಾತಂತ್ರ್ಯ ವಹಿಸಲು ಅಡಚಣೆಯಾಗಿ ಕೆಲ ರಾಜಕೀಯ ಕಾರಣಗಳು ಇರುವಂತೆ ತೋರುತ್ತದೆ.

ಈ ವರ್ಷದ ಶಾಂತಿಪಾರಿತೋಷಕವು ಮಹಾತ್ಮಾಗಾಂಧಿಯವರಿಗೆ ಕೊಡಬೇಕೆಂದು ನೋಬೆಲ್ ಬಹುಮಾನ ಪಡೆದ ಅನೇಕ ವಿದ್ವಾಂಸರು ಗಾಂಧಿಯವರ ಹೆಸರನ್ನು ಶಿಫಾರಸು ಮಾಡಿರುವರು. ಆದರೆ ಈ ವರುಷದ ಶಾಂತಿ ಬಹುಮಾನವನ್ನೇ ತಡೆಹಿಡಿಯಲಾದ ಸುದ್ದಿ ಬಂದಿದೆ.

ನೊಬೆಲ್ ಮಹಾಶಯನು ಸೂಚಿಸಿರುವ ದೃಷ್ಟಿಯಿಂದ ನೋಡಿದರೆ ಮಹಾತ್ಮಾ ಗಾಂಧಿಯವರು ನೊಬೆಲ್ ಶಾಂತಿಬಹುಮಾನಕ್ಕೆ ಅರ್ಹರೆಂಬುದರಲ್ಲಿ ಯಾವ ಅಡ್ಡಿಯೂ ಇರಲಾರದು.

ಉಡ್ಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ಸುವರ್ಣ ಮಹೋತ್ಸವವು ದಿನಾಂಕ ೨೨ ರಂದು ಕುಂದಾಪುರ ಸಬ್ ಕಲೆಕ್ಟರ್ ರಾವ್ ಸಾಹೇಬ್ ಚಾರ್ಲ್ಸ ಜೋನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಎ. ಎಸ್. ಕಾರವರು ಸ್ವಾಗತ ಭಾಷಣ ಮಾಡಿದರು. ಡಾ|| ಎಸ್. ಆರ್. ಪೈ ಡಾ|| ಕೆ. ಎಲ್. ಐತಾಳ ಬಿ. ಶ್ಯಾಮರಾಯ ಶೆಟ್ಟಿ (ಹಳೆ ವಿದ್ಯಾರ್ಥಿಗಳು) ಯವರು ಕನಕ ಮಹೋತ್ಸವದ ಸ್ಮಾರಕ ಭಾಷಣಮಾಡಿದರು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟ್ ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.